MEDITATE
आनन्दो ब्रह्म
SERVE — REALIZE
LIVE HAPPILY FOUNDATION

Founded by
Paramapoojya Jagadguru Shankaracharya Sri Swayamprakasha
Sri Sachidananda Saraswathi Mahaswamiji
Sri Adishankaracharya Sharada Lakshminarasimha Peetam
Sreemath, Hariharapura 577 120

ಚಿಂತನ ಪ್ರಕಾಶ

ಸ್ಮರಣ ಸಂಚಿಕೆ

ಜನವರಿ 1, 2008 (ಹೊಸ ವರ್ಷಾದಿಯ ದಿನ)

ಗುರುಗಳ ಜೊತೆ ಒಂದು ಸಂವಾದ ಸಂಜೆ

With Pranams to Swamiji

A. Anil Kumar Madhyastha
Usha Madhyastha

Mobile: 98440 38619

Sri Vidya Constructions

#56, 4th Main Road, 1st Cross,
Sarvaboumanagar, Chikkalasandra, Bangalore 560 061
E-mail: anil_madhyastha@rediffmail.com

Founded by
Paramapoojya Jagadguru Shankaracharya Sri Swayamprakasha
Sri Sachidananda Saraswathi Mahaswamiji
Sri Adishankaracharya Sharada Lakshminarasimha Peetam
Sreemath, Hariharapura 577 120

ಚಿಂತನ ಪ್ರಕಾಶ

ಸ್ಮರಣ ಸಂಚಿಕೆ

ಜನವರಿ 1, 2008 (ಹೊಸ ವರ್ಷಾದಿಯ ದಿನ)

ಗುರುಗಳ ಜೊತೆ
ಒಂದು ಸಂವಾದ ಸಂಜೆ

ಸ್ಥಳ: ಮಂಗಳ ಆಡಿಟೋರಿಯಮ್

ಎನ್.ಎಮ್.ಕೆ.ಆರ್.ವಿ. ಕಾಲೇಜು ಸಂಭಾಂಗಣ, ನಂದಾ ಟಾಕೀಸ್ ಹತ್ತಿರ

3ನೇ ಬ್ಲಾಕ್, ಜಯನಗರ, ಬೆಂಗಳೂರು



ಪರಮಪೂಜ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ಸ್ವಯಂಪ್ರಕಾಶ
ಶ್ರೀ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳು
ಶ್ರೀ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನೃಸಿಂಹ ಪೀಠಮ್
ಶ್ರೀಮಠ, ಹರಿಹರಪುರ, ಚಿಕ್ಕಮಗಳೂರು ಜಿಲ್ಲೆ

ಅನುಗ್ರಹ ಸಂದೇಶ

'**ಆನಂದೋ ಬ್ರಹ್ಮೇತಿ ವ್ಯಜಾನಾತ್**', ಇದು ನಮ್ಮ ಉಪನಿಷತ್ ವಾಣಿ. ಆನಂದವೇ ನಮ್ಮ ಸಹಜ ರೂಪ, ಆನಂದವೇ ನಮ್ಮ ಸಹಜ ಧರ್ಮ. ಈ ಆನಂದವು ನಮ್ಮ ಸ್ವರೂಪವಾಗಿರುವುದರಿಂದಲೇ ನಾವು ಜೀವನದಲ್ಲಿ ಪ್ರತಿಕ್ಷಣವೂ ಪ್ರತ್ಯೇಕವಾಗಿ, ಪರೋಕ್ಷವಾಗಿ, ಗೊತ್ತಿದ್ದೋ, ಗೊತ್ತಿಲ್ಲದೆಯೋ, ಈ ಆನಂದವನ್ನು ಹೊಂದುವುದಕ್ಕಾಗಿಯೇ ಪ್ರಯತ್ನವನ್ನು ಮಾಡುತ್ತಲೇ ಇರುತ್ತೇವೆ. ನಮ್ಮ ಮನಸ್ಸನ್ನು ವಿಷಯ ವಸ್ತುಗಳಲ್ಲಿ ನಿಲ್ಲಿಸಿದಾಗ ಸಿಗುವ ಆನಂದ ಅಲ್ಪಾನಂದ, ಇದು ತಾತ್ಕಾಲಿಕ ವಿಷಯಾನಂದ. ಈ ವಿಷಯಾನಂದ ಮುಂದೆ ದುಃಖಕ್ಕೂ ಕಾರಣವಾಗಬಹುದು. ಆದರೆ ನಮ್ಮ ಮನಸ್ಸನ್ನು ಈ ದೇಹ, ಇಂದ್ರಿಯಗಳು, ಬುದ್ಧಿ ಇವುಗಳ ಹಿಂದೆ ನಮ್ಮಲ್ಲೇ ಇರುವ ಪರಮಾತ್ಮನಲ್ಲಿ ನಿಲ್ಲಿಸಿದಾಗ, ಪರಮಾತ್ಮನಲ್ಲಿ ಲೀನಗೊಳಿಸಿದಾಗ ಸಿಗುವ ಆನಂದ ಪೂರ್ಣಾನಂದ, ಇದು ಶಾಶ್ವತವಾದ ಪರಮಾನಂದ. ವಿಷಯ ವಸ್ತುಗಳ ಮೇಲೆ ಅವಲಂಬಿತವಾಗಿರದ ಈ ಪರಮಾನಂದ ನಮ್ಮ ಪೂರ್ಣ ದುಃಖವನ್ನು ಶಾಶ್ವತವಾಗಿ ನಿವಾರಣೆ ಮಾಡುತ್ತದೆ. ಆದರೆ ಈ ಪೂರ್ಣಾನಂದವನ್ನು ಹೊಂದುವುದು ಅಷ್ಟು ಸುಲಭಸಾಧ್ಯವಲ್ಲ. ಅದಕ್ಕಾಗಿ ನಾವು ನಮ್ಮ ಜೀವನದ ಭೂಮಿಕೆಯನ್ನು ಮೊದಲು ಸರಿಯಾಗಿ ಸಿದ್ಧಪಡಿಸಿಕೊಳ್ಳಬೇಕು. ದೈಹಿಕವಾಗಿ, ಬೌದ್ಧಿಕವಾಗಿ, ನೈತಿಕವಾಗಿ, ಆಧ್ಯಾತ್ಮಿಕವಾಗಿ ನಮ್ಮ ಜೀವನ ಪರಿಪೂರ್ಣತೆಯೆಡೆಗೆ ಸಾಗುತ್ತಿರುವಂತೆ ನೋಡಿಕೊಳ್ಳಬೇಕು. ಹೀಗೆ ಪ್ರತಿಯೊಬ್ಬರೂ ಜೀವನದಲ್ಲಿ ಪರಿಪೂರ್ಣರಾಗಬೇಕು, ಪೂರ್ಣಾನಂದವನ್ನು ಹೊಂದಿ ಕೃತಾರ್ಥರಾಗಬೇಕೆಂಬ ಸದುದ್ದೇಶದಿಂದ "**ಲಿವ್ ಹ್ಯಾಪಿಲಿ ಫೌಂಡೇಶನ್**" ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ. ಈ ಫೌಂಡೇಶನ್ ಮೂಲಕ ಇಂಗ್ಲೀಷ್ ಹೊಸ ವರ್ಷದ ಈ ಶುಭ ಸಂದರ್ಭದಲ್ಲಿ '**ಚಿಂತನ ಪ್ರಕಾಶ**'ವೆಂಬ ಸ್ಮರಣ ಸಂಚಿಕೆಯನ್ನು ಹೊರತರುತ್ತಿದ್ದೇವೆ. ಪ್ರತಿಯೊಬ್ಬರಿಗೂ ಸತ್‌ಚಿಂತನೆಯನ್ನು ಬೆಳೆಸಿಕೊಂಡು ಪರಮಾನಂದವನ್ನು ಹೊಂದಲು ಈ ಸ್ಮರಣ ಸಂಚಿಕೆ ಪ್ರೇರಣೆಯನ್ನು ನೀಡಲೆಂದು ತನ್ಮೂಲಕ ಎಲ್ಲರೂ ಜೀವನದಲ್ಲಿ ಶ್ರೇಯಸ್ಸನ್ನು ಹೊಂದುವಂತಾಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತಿದ್ದೇವೆ.

ಇಂತಿ

ನಾರಾಯಣ ಸ್ಮರಣಂ

LIVE HAPPILY FOUNDATION®

SREE MATH, HARIHARAPURA - 577 120, CHIKMAGALUR DIST., KARNATAKA STATE, INDIA
HEAD OFFICE 664, 4TH CROSS, KEMPEGOWDA BADAVANE, BANASHANKARI 3RD STAGE, BANGALORE - 560085
www.hariharapura.org email hariharapura@yahoo.com Tel 91 08265 - 274458 91 080 - 26691119

Founder - Chairman - Trustee
His Holiness Sri Sri Sachidananda Saraswathi Swamiji

Trustees

Sri P. N. Viswanathan
Administrator, Sreemath, Hariharapura

Sri H. N. Hiriyanna Swamy
Bangalore

Sri G.S. Nagaraj
Bangalore

Sri H. Sreedhar
Bangalore

Sri B.V. Ravindra
Bangalore

Sri H.S. Sybramanya Bhat
Bangalore

ವಿಷಯಾನುಕ್ರಮ

01	ಸಂಪಾದಕೀಯ	01
02	ಆಡಳಿತಾಧಿಕಾರಿಗಳ ಸಂದೇಶ	03
03	ಶ್ರೀ ಆದಿಶಂಕರಾಚಾರ್ಯ ಶ್ರೀ ಶಾರದಾ ಲಕ್ಷ್ಮೀನೃಸಿಂಹ ಪೀಠ ಹರಿಹರಪುರ ಶ್ರೀಮಠ ಮತ್ತು ಮಠಾಧೀಶರು	05
04	ಭಾರತೀಯರ ಧರ್ಮ ಮತ್ತು ಸಂಸ್ಕೃತಿ	09
05	ಹಿಂದೂ ಧರ್ಮ ಒಂದು ಒಳನೋಟ	12
06	ಸಮ್ಯಕ್‌ಜ್ಞಾನಂ	16
07	ಪ್ರಳಯಾತೀತ ಪರಮಾತ್ಮ - ಸದ್ರೂಪ ಸಾಕ್ಷಿ	18
08	ಭಾರತೀಯ ಸಂಸ್ಕೃತಿಯ ಮೌಲ್ಯಗಳು	22
09	ಯಾವುದು ಧರ್ಮ	25
10	ಸತ್ಯಂ ಪರಂ ಧೀಮಹಿ	28
11	ದೇಹವೆಂಬ ದೇಗುಲ	31
12	"ಋಗ್ವೇದದಲ್ಲಿ ಋಷಿಗಳು ಸ್ತುತಿಸಿದಂತೆ ...." ಒಂದು ವಿಷಯ ಪ್ರಸ್ತಾವನೆ - ಪರಿಚಯ	34
13	ದೇವರು - ಧರ್ಮ: ನಂಬಿದರೆ ಭಯವಿಲ್ಲ ನಂಬದಿರೆ ಬಾಳಿಲ್ಲ	37
14	ಮುಂಡಕೋಪನಿಷತ್ ಸೂಚಿಸಿರುವ ಶ್ರೇಯೋಮಾರ್ಗ	39
15	ವೇದಗಳಲ್ಲಿ ಸುಭಾಷಿತಗಳು	41
16	ಮಾಂಡೂಕ್ಯ	44
17	A.R.S.P.U. College - The Prime Institution	46
18	ಜಾಹೀರಾತುಗಳು	48

ಈ ಸ್ಮರಣ ಸಂಚಿಕೆಯಲ್ಲಿ ಮುದ್ರಿತವಾಗಿರುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು
ಲೇಖಕರ ವೈಯಕ್ತಿಕವಾದವೇ ಹೊರತು ಸಂಪಾದಕರ ಅನಿಸಿಕೆಗಳಲ್ಲ

ಸಂಪಾದಕೀಯ

ನಮ್ಮ ದೇಶದ ದೈನಂದಿನ ಬಳಕೆಯಲ್ಲಿ 2 - 3 ಶತಮಾನದಿಂದ ರೂಢಮೂಲವಾಗಿ ಹೋಗಿರುವ ಆಂಗ್ಲ ಕಾಲಗಣನೆಯಲ್ಲಿ 2008ನೇ ಇಸವಿಯ ಮೊದಲ ದಿನವಾದ ಇಂದು ಶ್ರೀಮಠದ ಭಕ್ತಾಭಿಮಾನಿಗಳಿಗೆ ಮತ್ತು ಎಲ್ಲರಿಗೂ ಹಾರ್ದಿಕ ಶುಭಕಾಮನೆಗಳು.

ಈ ಸಂತಸದ ಶುಭವೇಳೆಯಲ್ಲಿ ಪರಮ ಪೂಜ್ಯ ಗುರುವರ್ಯ **ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿಯವರ** ಪವಿತ್ರ ಹಸ್ತದಿಂದ "**ಚಿಂತನ ಪ್ರಕಾಶ**" ವಿಶೇಷ ಸಂಚಿಕೆ ಬಿಡುಗಡೆಯಾಗುತ್ತಿರುವುದು ನಮ್ಮೆಲ್ಲರ ಪುಣ್ಯವಿಶೇಷ. ಈ ಸಂಬಂಧವಾಗಿ ಕೆಲವು ಮಾತುಗಳನ್ನು ಇಲ್ಲಿ ನಿವೇದಿಸಿಕೊಳ್ಳುತ್ತಿದ್ದೇನೆ.

ನಮ್ಮ ಭಾರತೀಯ ಸನಾತನ ಸಂಸ್ಕೃತಿಯ ಮುಖ್ಯ ಉದ್ದೇಶ, ಈ ಜಗತ್ತಿನಲ್ಲಿ ಎಲ್ಲರೂ ಸುಖ - ಸಂತೋಷಗಳಿಂದ ಬದುಕಬೇಕು. "**ಯಾವಜ್ಜೀವೇತ್ ಸುಖಂ ಜೀವೇತ್**" ಎಂಬ ಸೂಕ್ತಿಯಾಗಲಿ, "**ಶತಂ ಜೀವ ಶರದೋ ವರ್ಧಮಾನಃ**" ಎಂಬ ವೇದೋಕ್ತ ಆಶೀರ್ವಚನವಾಗಲಿ ಅದೇ ಆಶಯವನ್ನೇ ವ್ಯಕ್ತಪಡಿಸುತ್ತಿವೆ. "**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಗ್ಭವೇತ್?**" ಎಲ್ಲರೂ ಒಳಿತನ್ನು ಕಾಣಲಿ! ಯಾರಿಗೂ ದುಃಖ ಉಂಟಾಗದಿರಲಿ! ಇದು ಋಷಿಮುನಿಗಳು ಇಡೀ ಜಗತ್ತಿಗೇ ನೀಡಿದ ಹಾರೈಕೆ. "**ಅನಂದೋ ಬ್ರಹ್ಮೇತಿ ವ್ಯಜಾನಾತ್** ।" ಆನಂದವೇ ಪರಬ್ರಹ್ಮ. ಅದೇ ಬ್ರಹ್ಮಾನಂದ. ಹುಟ್ಟಿದವರೆಲ್ಲರೂ ಕಟ್ಟಕಡೆಗೆ ಪಡೆಯಬೇಕಾದ ಸ್ಥಿತಿ - ಮೋಕ್ಷ ಎಂದರೆ ಅದೇನೆಯೇ. ಆದರೆ ಮನುಷ್ಯ ಆ ಸ್ಥಿತಿಯನ್ನು ತಲುಪಬೇಕಾದರೆ ತುಂಬಾ ಸಾಧನೆ ನಡೆಸಬೇಕಾಗುತ್ತದೆ. ದೈನಂದಿನ ವ್ಯಾವಹಾರಿಕ ಜೀವನದಲ್ಲಿ ಎಲ್ಲ ಅಡೆ ತಡೆಗಳನ್ನು ದಾಟಿ ಮನಸ್ಸನ್ನು ಸಮಸ್ಥಿತಿಯಲ್ಲಿಟ್ಟುಕೊಂಡು ಆನಂದ ಅನುಭವಿಸುವುದನ್ನು ಮೊದಲು ರೂಢಿಸಿಕೊಳ್ಳುವುದು ಅಗತ್ಯ.

ಇಂದಿನ ವೈಜ್ಞಾನಿಕವೆಂದುಕೊಳ್ಳುವ ಉಭ್ರಮಣೆಯ ದಿನಗಳಲ್ಲಿ ಸುಖ - ಸಂತೋಷಗಳ ಅರ್ಥವಾಗಲೀ, ಅವುಗಳನ್ನು ಅನುಭವಿಸುವ ರೀತಿ - ನೀತಿಗಳಾಗಲೀ ತಾರು ಮಾರಾಗಿ ಹೋಗಿವೆ. ಯಾವೆಲ್ಲವನ್ನು ಎಷ್ಟು ಅನುಭವಿಸಿದರೂ ಮನಸ್ಸು ತೃಪ್ತಿ ಹೊಂದದೆ ಇನ್ನೂ ಬೇಕು! ಮತ್ತೂ ಬೇಕು! ಎಂಬ ಅತ್ಯುಗ್ರ ಬಾಯಾರಿಕೆಯನ್ನು ಕೆರಳಿಸುತ್ತದೆಯೋ ಅವೇ ಪ್ರಕಾರಗಳ ಬೆನ್ನು ಹಿಡಿದು ಧಾವಿಸುತ್ತಿರುವುದೇ ಎಲ್ಲೆಲ್ಲಿಯೂ ಕಣ್ಣಿಗೆ ರಾಚುತ್ತಿದೆ. ಇನ್ನೊಂದು ಕಡೆ ದಾರಿದ್ರ್ಯದಿಂದ ಉಂಟಾಗಿರುವ ಹಸಿವೆ - ರೋಗ - ರುಜಿನಗಳನ್ನು ಹಿಂಗಿಸಿ - ಪರಿಹರಿಸಿಕೊಳ್ಳಲಾಗದೆ ದುಃಖದಿಂದ ತೊಳಲಾಡುತ್ತಿರುವ ಜನರ ಬವಣೆ.

ಕಳೆದ ಶತಮಾನದ ಪ್ರಾರಂಭದಲ್ಲಿ ಭಾರತೀಯ ಅಧ್ಯಾತ್ಮಿಕ ವೈಭವವನ್ನು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಸಾರ ಮಾಡಿದ **ಭಾರತದ ವೀರ ಸಂನ್ಯಾಸಿ ಸ್ವಾಮೀ ವಿವೇಕಾನಂದರು** ಅಲ್ಲಿಯ ಶ್ರೀಮಂತ ಜನಸಮುದಾಯಕ್ಕೆ ಸ್ಪಷ್ಟವಾಗಿ ತಿಳಿಸಿ ಹೇಳಿದ ಮಾತು - "**ಭಾರತದಲ್ಲಿ ಅಧ್ಯಾತ್ಮಿಕ ದಾರಿದ್ರ್ಯ ಏನೇನೂ ಇಲ್ಲ. ಆದ್ದರಿಂದ ಅಲ್ಲಿಗೆ ಮತಾಂತರಕ್ಕಾಗಿ ಉಪದೇಶಕರು (ಪಾದ್ರಿ)ಗಳನ್ನು ಇಲ್ಲಿಂದ ಕಳುಹಿಸುತ್ತಿರುವುದು ಮೊದಲು ನಿಲ್ಲಬೇಕು. ಅಲ್ಲಿಯ ಮೊಟ್ಟ ಮೊದಲ ಅವಶ್ಯಕತೆ ಎಂದರೆ ಆರ್ಥಿಕ ದಾರಿದ್ರ್ಯ ನಿವಾರಣೆಯೇ ಹೊರತು ಬೇರೇನೂ ಅಲ್ಲ!**" ನೂರಾರು ವರ್ಷ ಕಳೆದ ಮೇಲೂ ಇಂದಿಗೂ ಈ ಮಾತು ತುಂಬಾ ಪ್ರಸ್ತುತವಾಗಿಯೇ ಉಳಿದಿದೆ.

ನಮ್ಮ ಪರಮ ಪೂಜ್ಯ ಶ್ರೀ ಶ್ರೀಗಳವರು ಸ್ಥಾಪಿಸಿರುವ "**ಲೀವ್ ಹ್ಯಾಪಿಲಿ ಫೌಂಡೇಷನ್**" ಜನ ಸಾಮಾನ್ಯರ ದೈನಂದಿನ ಬದುಕಿನಲ್ಲಿ ಸಂತಸವನ್ನು ಮೂಡಿಸುವುದಕ್ಕಾಗಿ ಹಲವು ಯೋಜನೆಗಳನ್ನು ಹಾಕಿಕೊಂಡಿದೆ. ಅದಕ್ಕೆ ಜನರು ತಮ್ಮಿಂದ ಸಾಧ್ಯವಿರುವ ಬೆಂಬಲ ನೀಡುತ್ತ ಸಾಮಾನ್ಯ ಜನರ ಬದುಕು ಆದಷ್ಟು ಸಂತಸದಿಂದ ಮುನ್ನಡೆಯುವಂತೆ ನೋಡಿಕೊಳ್ಳುವುದು ಇಂದಿನ ದಿನಗಳ ತುರ್ತು ಅವಶ್ಯಕತೆ.

ಬೆಂಗಳೂರು ನಗರದಲ್ಲಿ ನಮ್ಮ "**ಗುರುವರ್ಯರೊಡನೆ ಸಂವಾದ**" ನಡೆಯುತ್ತಿರುವ ಈ ಶುಭಾವಸರದಲ್ಲಿ ಬಿಡುಗಡೆಯಾಗುತ್ತಿರುವ ಈ "**ಚಿಂತನ ಪ್ರಕಾಶ**"ದಲ್ಲಿ ಪ್ರಕಟಿಸಲು ಉತ್ತಮ ಮೌಲ್ಯಗಳ ಚಿಂತನಾರ್ಹವಾದ ಲೇಖನಗಳನ್ನು ನಮ್ಮ ಕೋರಿಕೆಯಂತೆ ಅಲ್ಪಾವಕಾಶದಲ್ಲಿಯೇ ಕಳುಹಿಸಿಕೊಟ್ಟ ಎಲ್ಲ ಲೇಖಕ ವಿದ್ವಾಂಸರಿಗೆ - ಜಾಹೀರಾತುಗಳನ್ನು ನೀಡಿ ಸಹಕರಿಸಿದ ಎಲ್ಲ ಮಹನೀಯರಿಗೆ ಹಾರ್ದಿಕ ಅಭಿನಂದನೆಗಳು. ಸ್ಮರಣ ಸಂಚಿಕೆಯ ಮುದ್ರಣ ಕಾರ್ಯದಲ್ಲಿ ಪುಟ ವಿನ್ಯಾಸವನ್ನು ಅಲ್ಪಕಾಲದಲ್ಲಿ ಶ್ರದ್ಧಾ ಭಕ್ತಿಗಳಿಂದ ನಿರ್ವಹಿಸಿ ಸರ್ವಾಂಗ ಸುಂದರಗೊಳಿಸಿದ **ಶ್ರೀ ರಾಧಾಕೃಷ್ಣ ಕರ್‌ಚಾವಡಿ**ಯವರಿಗೆ ಅನಂತ ಧನ್ಯವಾದಗಳು. ತೀರಾ ಅವಸರದಲ್ಲಿಯೇ ಆದರೂ ಉತ್ತಮ ರೀತಿಯಲ್ಲಿ ಸಂಚಿಕೆಯನ್ನು ಮುದ್ರಿಸಿ - ಸಮಯಕ್ಕೆ ಸರಿಯಾಗಿ ಪೂರೈಸಿಕೊಟ್ಟ **ಬೆಂಗಳೂರು ಪರಿಮಳ ಮುದ್ರಣಾಲಯದ ಶ್ರೀ ಚಿದಂಬರಯ್ಯನವರು, ಅವರ ಚಿರಂಜೀವಿ ಶ್ರೀ ಪ್ರಭಾಕರ** ಇವರುಗಳು ಶ್ರೀಮಠದ ಮೇಲೆ ಇಟ್ಟುಕೊಂಡು ಬಂದಿರುವ ಗೌರವ - ಆದರ - ಅಭಿಮಾನಗಳು ಎಂದಿಗೂ ಮುನ್ನಡೆಯ ಲೆಂದು ಆಶಿಸುತ್ತ ಅವರಿಗೆ ಆತ್ಮೀಯ ಶುಭಕಾಮನೆಗಳನ್ನು ಸಲ್ಲಿಸುತ್ತೇನೆ. ಈ ಸ್ಮರಣ ಸಂಚಿಕೆಯು ಇಷ್ಟು ಸುಂದರವಾಗಿ ಮೂಡಿ ಬರಲು ಅಹರ್ನಿಶ ಶ್ರಮಿಸಿದ ಶ್ರೀಮಠದ ಬೆಂಗಳೂರು ಶಾಖೆಯ ಧರ್ಮಾಧಿಕಾರಿಯಾದ. **ಶ್ರೀ ಸಚ್ಚಿದಾನಂದ್**ರವರಿಗೆ ಆತ್ಮೀಯ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಈ ವಿಶೇಷ ಸಂಚಿಕೆಯ ಸಿದ್ಧತೆಯಲ್ಲಿ ಲೇಖನಗಳ ಸಂಪಾದನೆಯಲ್ಲಿ ಉತ್ತಮ ಸಲಹೆ ಸಹಕಾರ ನೀಡಿದ **ಡಾ|| ಎಂ. ಎನ್. ಅನಂತ ರಾಮನ್** ಇವರಿಗೆ ಹಾರ್ದಿಕ ಆತ್ಮೀಯ ಅಭಿನಂದನೆಗಳು.

ಈ ಸಂದರ್ಭದಲ್ಲಿ ವಿಶೇಷ ಸಂಚಿಕೆಯನ್ನು ಹೊರತರಲು ನಿರ್ಧರಿಸಿ ಆ ಬಗ್ಗೆ ಮಾರ್ಗದರ್ಶನ - ಆಶೀರ್ವಚನ ಅನುಗ್ರಹಿಸಿರುವ **ಪರಮ ಪೂಜ್ಯ ಗುರುವರ್ಯರ** ಅಡಿದಾವರೆಗಳಲ್ಲಿ ಭಕ್ತಿ - ಗೌರವ ಪೂರ್ಣ ಸಾಷ್ಟಾಂಗ ನಮನಗಳು.

ಈ ಬೃಹತ್ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಆಸಕ್ತಿವಹಿಸಿದ **ಶ್ರೀ ಶ್ರೀಗಳವರ ಆಪ್ತ ಕಾರ್ಯದರ್ಶಿ ವೇ|| ಪಿ.ಆರ್. ಶಾಸ್ತ್ರಿ** ಮತ್ತು ಶ್ರೀಮಠದ ಆಡಳಿತಾಧಿಕಾರಿಗಳಾದ **ಶ್ರೀ ಪಿ.ಎನ್. ವಿಶ್ವನಾಥನ್‌ರವರಿಗೂ, ಶಿಷ್ಯವೃಂದ ಹಾಗೂ ಕಾರ್ಯಕರ್ತರಿಗೂ** ಭಕ್ತಿ ಶ್ರದ್ಧೆಗಳಿಂದ ನೆರವು ನೀಡಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರೋತ್ಸಾಹಿಸಿದ ಎಲ್ಲ ಭಕ್ತ ಬಂಧು, ಭಗಿನಿಯರಿಗೆ ಕೃತಜ್ಞತಾ ಪೂರ್ವಕ ನಮಸ್ಕಾರಗಳು.

ಈ ಗ್ರಂಥದಲ್ಲಿರುವ ಲೇಖನಗಳನ್ನು ಓದಿ ಅವುಗಳ ಚಿಂತನೆಗಳನ್ನು ಮನಸ್ಸಿನಲ್ಲಿ ಮಥನ ಮಾಡಿ ಅದರಿಂದ ಹೊರಡುವ ಪ್ರಕಾಶ ವಿಶೇಷದ ಆನಂದ - ಸಂತಸವನ್ನು ಅನುಭವಿಸುವ ಬದುಕು ಎಲ್ಲರದಾಗಲಿ! ಎಂದು ನಿವೇದಿಸಿಕೊಳ್ಳುತ್ತ - ಈ ಸಂಪಾದಕೀಯವನ್ನು ಸಂಪನ್ನಗೊಳಿಸುತ್ತಿದ್ದೇನೆ.

ಶಂ ನೋ ಅಸ್ತು ದ್ವಿಪದೇ । ಶಂ ಚತುಷ್ಪದೇ ।

ಹರಿಹರಪುರ ಬಿ. ಸುಬ್ರಹ್ಮಣ್ಯಂ
ಸಂಪಾದಕ, ಚಿಂತನ ಪ್ರಕಾಶ

SRI ADHISHANKARACHARYA SHARADA LAKSHMI NARASIMHA PEETAM SRIMATH, HARIHARAPURA



Pranamams to all the devotees,

We are happy to place before you, this Souvenir specially brought out on the wonderful occasion of the programme of **"An Evening with Guruji"** on the New Year Day i.e. January 1, 2008. This programme is unique in the sense that it has given an opportunity to all the devotees to spend the evening together & also receive the sacred blessings from the Guruji. The Srimath will be happy to organise such programmes in future also, so that there could be a good amount of interaction between the devotees and the Srimath.

This programme has the blessings from Swamiji his Holiness Shri Shri Sachidananda Saraswathi of Srimath, Hariharapura, Chickmagalore District, Karnataka. With the blessing of Swamiji, the Srimath is organising many public welfare programmes for the benefit of mankind. I write to place it before you the various programmes of the Srimath.

His Holiness has established a number of Trusts & Foundations which encompass many welfare programmes for the People. His Holiness strongly feels that they should reach the people through these Trusts & Foundations. The main establishment of the Math at Hariharapura stands as the main pillar and other establishments as supporting ones.

The Sreemath, Hariharapura is a very ancient Peetam with lineage from Shri Adi Shankaracharya. There are main shrines for Lakshminarasimha Swamy and Sharadamba. Parama Pujya Jagadguru Shankaracharya Shri Shri Swayamprakasha Sachidananda Saraswathi Swamiji is keen to follow and maintain all the traditions in the Peetam like Pujas, Festivals & Spiritual matters. A unique "Someshwara Yagashala" benefits many devotees to get their various Homas, Yagnas performed. **Swayam Prakasha Samskruta Veda Patashala** is being managed. **Free Food (Anna Dhana)** is provided at noon and night to all the devotees. Significant plans are underway to renovate and rebuild this ancient temple to its grand glory. **Sri Lakshmi**

Nivas guest house at Hariharapura is well appreciated for its traditional ambience & convenience. Facilities are being created here for the benefit of the visitor devotees. A **Goshala** is also managed for the cows where these sacred animals are maintained and protected.

Sri Swayamprakasha Trust organises publication activities like monthly magazines **"Sadguru Blessings"** in English and **"Swayamprakasha"** in Kannada. Release of Audio, Video Cassettes, CDs, Publication of Spiritual Books, Stotras etc. are also a part of the spiritual activities of the trust.

Live Happily Foundation dedicates in areas like Education, health and over all well being. Students are sponsored each years for pursuing **"Professional Higher Education".** An Ayurvedic **"Saraswathi Seva Hospital"** is being managed at Hariharapura. Plans are on hand to construct a 10 bedded Hospital with relevant herbal farming. A learning centre is planned where people can join courses in Yoga, Meditation, Dhyana, etc. in a **"Retreat Environment".**

Vishwa Gayathri Upasak Parishath works towards Dharma Prachara as it is noticed that there is deterioration in observance of Sanathana Hindu Dharma and its values. Multi level groups are created (i) to those women qualifying, Gayathri Pooja is taught (ii) Jeevan Jagruthi programmes initiate people to organise Bhajans and Sathsang groups.

His Holiness with his utmost compassion strives hard to bring unity among Hindus, Strengthening Samskaras existing and bringing in "Samskara" where it lacks.

All these noble tasks need support and encouragement from all those concerned about the decaying of our Dharma and Values. The Ashayas of His Holiness is that these noble programmes have to reach all the people of the country for which let all of us join hands and make this prupose a great success.

People & devotees are are all requested to donate liberally for the trusts funds to organise the programmes. Donors may please contact the Math for further details.

P.N. Vishwanathan
Administrator

ಶ್ರೀ ಆದಿಶಂಕರಾಚಾರ್ಯ ಶ್ರೀ ಶಾರದಾ ಲಕ್ಷ್ಮೀನೃಸಿಂಹ ಪೀಠ

ಹರಿಹರಪುರ ಶ್ರೀಮಠ ಮತ್ತು ಮಠಾಧೀಶರು

ಹರಿಹರಪುರ ಬಿ. ಸುಬ್ರಹ್ಮಣ್ಯಂ
ಸಂಪಾದಕ

ಶ್ರೀ ಚಕ್ರಪೀಠೇ ಸುವಿರಾಜ ಮಾನಾಂ ಶ್ರೀ ಶಾರದಾಂ ಶಾರದ ಚಂದ್ರವಕ್ತ್ರಾಂ।
ಅಗಸ್ತ್ಯ ಸಂಸ್ಥಾಪಿತ ನಾರಸಿಂಹಂ ಶ್ರೀಯಾ ಸಮೇತಂ ಪ್ರಣತೋಽಸ್ಮಿ ನಿತ್ಯಂ॥

ನಮ್ಮ ಸನಾತನ ವೈದಿಕ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ದೇವತೆಯ ಸ್ಥಾನ - ಮಾತ್ರವಲ್ಲ ಹೆತ್ತ ತಾಯಿ, ಹೊತ್ತ ನೆಲ (ಭೂಮಿ) ಜೀವನಕ್ಕೆ ಮುಖ್ಯ ಸಾಧನವಾದ ಧನ, ತಿಳಿವಳಿಕೆ - ಜ್ಞಾನ - ವ್ಯವಹಾರಗಳಿಗೆ ಅನಿವಾರ್ಯವಾಗಿರುವ ಮಾತು ಹಾಗೂ ವಿದ್ಯೆ ಇವು ಕೂಡ ಸ್ತ್ರೀ ದೇವತೆಗಳೆಂದೇ ಪರಿಗಣಿಸಿ ಮಾತೆಯರೆಂದೇ ಪರಮಾವಧಿ ಗೌರವ ನೀಡುತ್ತ ಬಂದಿರುವ ಅನ್ಯಾದೃಶ ಸಂಸ್ಕೃತಿ ನಮ್ಮದು.

ನಾವು ವಾಸಿಸುವ ಸ್ಥಳ **ಪುಣ್ಯಕ್ಷೇತ್ರ**. ನಾವು ಸ್ನಾನ ಪಾನಾದಿಗಳಿಗೆ ಉಪಯೋಗಿಸುವ ಜಲವು **ಪವಿತ್ರ ತೀರ್ಥ**. ಹೀಗೆ ಎಲ್ಲೆಲ್ಲಿಯೂ ಪರಿಶುದ್ಧತೆಯನ್ನು ಕಂಡು ಅನುಭವಿಸುತ್ತ ಜೀವನ ಸಾರ್ಥಕವಾಯಿತೆಂದು ನಂಬಿ ಬದುಕುತ್ತಿರುವ ಈ ಭಾರತ ಭೂ ಖಂಡಕ್ಕೆ ಧರ್ಮಭೂಮಿ - ಪುಣ್ಯಭೂಮಿ ಎಂಬ ಹೆಗ್ಗಳಿಕೆ. ಈ ಹೆಗ್ಗಳಿಕೆಗೆ ಕಾರಣ, ಹೆಜ್ಜೆ ಹೆಜ್ಜೆಗೆ ಎಂಬಂತೆ ಹರಡಿಕೊಂಡಿರುವ ಮಠಗಳು, ಮಂದಿರಗಳು, ನದಿ - ತೊರೆ - ತಟಾಕಗಳು.

ಅಪಾರವಾದ ಪುರಾಣ, ಪುಣ್ಯಕಥೆಗಳು, ಐತಿಹ್ಯಗಳು, ಚಾರಿತ್ರಿಕ ವಿಷಯಗಳು, ಅಲ್ಲಿ ತಪಸ್ಸು ನಡೆಸಿ, ತಮ್ಮ ಅಲೌಕಿಕ ಶಕ್ತಿ ಸಂಪತ್ತನ್ನು ಲೋಕ ಕಲ್ಯಾಣಕ್ಕಾಗಿ ವಿನಿಯೋಗಿಸಿದ ಮಹನೀಯರು ಹೀಗೆ ಒಂದಲ್ಲ ಒಂದು ಕಾರಣದಿಂದ ಈ ಸ್ಥಳಗಳು ಪ್ರಸಿದ್ಧಿ ಪಡೆದಿವೆ.

ಯಾಗಭೂಮಿ: ನಮ್ಮ ಕನ್ನಡ ನಾಡನ್ನು ಹಾದು ಹೋಗಿರುವ ನಿಸರ್ಗ ರಮ್ಯ ಪಶ್ಚಿಮ ಘಟ್ಟದ ಸಾಲು **ಸಹ್ಯಾದ್ರಿ** ಎಂದು ಸ್ಕಂದ ಪುರಾಣದಲ್ಲಿ ಪ್ರಾಮುಖ್ಯತೆ ಪಡೆದಿದೆ. ಈ ಪ್ರದೇಶದಲ್ಲಿ ಹರಿಯುವ **ತುಂಗಾ - ಭದ್ರಾ - ವಾರಾಹೀ - ಶರಾವತೀ** ಮುಂತಾದ ನದೀ ತೀರಗಳಲ್ಲಿ ಅಲ್ಲಲ್ಲಿ ಅಗ್ರಹಾರ, ಮಠ, ದೇಗುಲಗಳು ತಮ್ಮದೇ ಆದ ಪುರಾತನ ಇತಿಹಾಸವನ್ನು ಹೊಂದಿ ಕೀರ್ತಿಗಳಿಸಿವೆ. ಅಂತಹ ಊರುಗಳ ಪೈಕೀ **ಚಿಕ್ಕಮಗಳೂರು ಜಿಲ್ಲೆಯಲ್ಲಿ ತರೀಕೆರೆ - ಮಂಗಳೂರು ಹೆದ್ದಾರಿ (T.M.Road) ಯಲ್ಲಿ ಪಾವನ ತುಂಗಾ ತೀರದಲ್ಲಿರುವ ಹರಿಹರಪುರವು ಯಾಗಭೂಮಿ, ತಪೋಭೂಮಿ ಹಾಗೂ ಜ್ಞಾನಭೂಮಿ** ಹೀಗೆ ತ್ರಿವಿಧ ಪ್ರಖ್ಯಾತಿಗೆ ಪಾತ್ರವಾದ ಒಂದು ಪಾವನ ಕ್ಷೇತ್ರ. ಪರಶಿವನ ಮಾವ ದಕ್ಷಪ್ರಜಾಪತಿಯು ಈ ಸ್ಥಳ ದಲ್ಲಿ ಯಾಗವೊಂದನ್ನು ನಡೆಸಿದನೆಂಬುದು ಈ ಸ್ಥಳದ ಪೌರಾಣಿಕ ಪ್ರಖ್ಯಾತಿ. ಊರಿನ ಸಮೀಪದಲ್ಲಿಯೇ ಅರಣ್ಯದ ನಡುವೆ ಪುರಾತನ ಚಿಕ್ಕ ಶಿಲಾಮಯ ದೇಗುಲ ವೊಂದಿದ್ದು ಲಿಂಗರೂಪದಲ್ಲಿ ನೆಲೆಸಿರುವ ಶಿವನನ್ನು ದಕ್ಷಹರ ಸೋಮೇಶ್ವರನೆಂಬ ಹೆಸರಿನಲ್ಲಿಯೇ ಪೂಜಿಸಲಾಗುತ್ತಿದೆ. **ಈ ಆಧಾರದಿಂದ ಈ ಸ್ಥಳವು ಪವಿತ್ರ ಯಾಗಭೂಮಿ ಮತ್ತು ಈ ಸ್ಥಳಕ್ಕೆ ದಕ್ಷಕ್ಷೇತ್ರವೆಂಬ ಪ್ರಖ್ಯಾತಿ.**

ತಪೋಭೂಮಿ : ಸನಾತನ ವೈದಿಕ ಸಂಸ್ಕೃತಿಯ ಹರಿಕಾರ ಮಹರ್ಷಿ ಅಗಸ್ತ್ಯರ ಹೆಸರಿನಲ್ಲಿ ಹಲವು ತೀರ್ಥಕ್ಷೇತ್ರಗಳು ದಕ್ಷಿಣ ಭಾರತದ ಉದ್ದಗಲಕ್ಕೂ ಹರಡಿಕೊಂಡಿವೆ. ಅವರು ಈ ಕ್ಷೇತ್ರದಲ್ಲಿ **ಶ್ರೀಲಕ್ಷ್ಮೀನೃಸಿಂಹ ಸ್ವಾಮಿಯ ಅರ್ಚನೆ**, ತಪಸ್ಸುಗಳಲ್ಲಿ ನಿರತರಾಗಿ ಕೆಲವು ಕಾಲ ಇದ್ದು, ಇಲ್ಲಿ **ದಕ್ಷಹರ ಸೋಮೇಶ್ವರ** ಸೇವೆಯಲ್ಲಿ ನಿರತರಾಗಿದ್ದ **ಶ್ರೀ ಗೋವಿಂದ ಯೋಗಿಗಳೆಂಬ** ತಮ್ಮ ಶಿಷ್ಯರಿಗೆ ತಾವು ಅರ್ಚಿಸುತ್ತಿದ್ದ **ಶ್ರೀ ನರಸಿಂಹ ಸಾಲಗ್ರಾಮವನ್ನು** ಅನುಗ್ರಹಿಸಿ ಮುಂದಕ್ಕೆ ತೆರಳಿದರು. **ಇದರಿಂದ ಈ ಸ್ಥಳವು ತಪೋಭೂಮಿಯೂ, ಶ್ರೀ ಲಕ್ಷ್ಮೀನೃಸಿಂಹ ಸ್ವಾಮಿಯ ನೆಲೆಯೂ ಆಗಿ ಪರಿಣಮಿಸಿತು.**

ಜ್ಞಾನಭೂಮಿ: ಕ್ರಿ.ಶ. 7-8ನೇ ಶತಮಾನದಲ್ಲಿ ಜಿಲವಾಗುತ್ತಿದ್ದ ಸನಾತನ ವೈದಿಕ ಸಂಸ್ಕೃತಿಯನ್ನು ಉಳಿಸಿ ವೇದಾಂತರ್ಗತ ಅದ್ವೈತ ತತ್ವವನ್ನು ಭಾರತದಲ್ಲಿ ನೆಲೆಗೊಳಿಸಿ ಇಂದಿಗೂ ವಿಶ್ವಮಾನ್ಯರಾಗಿರುವ **ಆಚಾರ್ಯ ಶಂಕರರು** ತಮ್ಮ ಧರ್ಮ ಪ್ರಸಾರ ಪ್ರವಾಸ ಕಾಲದಲ್ಲಿ ಈ ಕ್ಷೇತ್ರಕ್ಕೂ ಭೇಟಿಕೊಟ್ಟರು. ಆಗ್ಯೇ ಇಲ್ಲಿ **ಶ್ರೀ ಲಕ್ಷ್ಮೀನೃಸಿಂಹ ದಕ್ಷಹರ ಸೋಮೇಶ್ವರರ ಅರ್ಚನಾ ತತ್ಪರರಾಗಿ ತಪೋನಿರತರಾಗಿದ್ದ ಗೋವಿಂದ ಯೋಗೀಂದ್ರರ ಶಿಷ್ಯ ಪರಂಪರೆಯ ಶ್ರೀಕೃಷ್ಣ ಯೋಗಿಗಳನ್ನು** ಸಂಧಿಸಿದರು. ತುಂಗಾತೀರದ ಈ ಪ್ರಶಾಂತ ರಮ್ಯ ಪರಿಸರ ದಿಂದ ಹಾಗೂ ಕ್ಷೇತ್ರ ಮಹಿಮೆಯಿಂದ ಪ್ರಭಾವಿತರಾಗಿ **ಜ್ಞಾನ ದೇವತೆ ಶ್ರೀ ಶಾರದೆಯನ್ನು ಶ್ರೀ ಚಕ್ರಯಂತ್ರೋ**

ದ್ಧಾರದ ಮೂಲಕ ನೆರೆಗೊಳಿಸಿ ದೇವಿಯ ಉಪಾಸನೆಯ ಕರ್ತವ್ಯವನ್ನು **ಶ್ರೀಕೃಷ್ಣ ಯೋಗೀಂದ್ರರಿಗೆ** ವಹಿಸಿ **ಮುಂದೆ ಪ್ರಯಾಣ** ಬೆಳೆಸಿದರು. ಹೀಗೆ **ಶ್ರೀ ಆದಿಶಂಕರರು ಸ್ಥಾಪಿಸಿದ ಶ್ರೀ ಶಾರದಾಂಬೆಯ ಸನ್ನಿಧಿಯಿಂದ ಈ ಸ್ಥಳ ಜ್ಞಾನ ಭೂಮಿ ಎನಿಸಿತು.**

ಶ್ರೀಮಠದ ಪರಂಪರೆ ಪ್ರಾರಂಭ: ಪವಿತ್ರ ಕ್ಷೇತ್ರ **ಶೃಂಗೇರಿಯಲ್ಲಿ** (ಹರಿಹರಪುರದಿಂದ 12 ಮೈಲಿ ದೂರದಲ್ಲಿದೆ) **ಆಚಾರ್ಯ ಶ್ರೀ ಶಂಕರರು ಸ್ಥಾಪಿಸಿದ ಶ್ರೀ ದಕ್ಷಿಣಾಮ್ನಾಯ ಶಾರದಾ ಪೀಠದ ಪ್ರಥಮ ಜಗದ್ಗುರು ಶ್ರೀ ಆಚಾರ್ಯ ಸುರೇಶ್ವರರು ಈ ಕೃಷ್ಣ ಯೋಗೀಂದ್ರರಿಗೆ ಸಂನ್ಯಾಸ ದೀಕ್ಷೆ ನೀಡಿ, ಸ್ವಯಂಪ್ರಕಾಶ ಸರಸ್ವತೀ** ಎಂಬ ಯೋಗ ಪಟ್ಟವನ್ನಿತ್ತು ಅನುಗ್ರಹಿಸಿದಾಗ ಈ ಕ್ಷೇತ್ರವು ಧರ್ಮಪೀಠವಾಗಿ ರೂಪುಗೊಂಡು ಮಠದ ಪರಂಪರೆ ಪ್ರಾರಂಭವಾಯಿತು. ಸ್ಕಾಂದ ಪುರಾಣದ ಸಹ್ಯಾದ್ರಿ ಖಂಡದ ತುಂಗಭದ್ರಾ ಮಹಾತ್ಮೆ ಮತ್ತು ಪುರಾತನ ತಾಳೆಗರಿ ಗ್ರಂಥ ಶ್ರೀಮಠ ಮಹಿಮಾ ಸಂಹಿತೆಗಳಲ್ಲಿ ಈ ವಿವರಗಳು ಲಭ್ಯವಿದೆ.

ಐತಿಹಾಸಿಕ ಪ್ರಸಿದ್ಧಿ: 14ನೇ ಶತಮಾನದಲ್ಲಿ **ಮಹಾಯೋಗಿ ಶ್ರೀ ವಿದ್ಯಾರಣ್ಯರ** ಬೆಂಬಲ ಪಡೆದು ಸ್ಥಾಪಿತವಾದ **ವಿಜಯನಗರ ಕನ್ನಡ ಮಹಾಸಾಮ್ರಾಜ್ಯದ ಮೊದಲನೇ ಚಕ್ರವರ್ತಿ ಹರಿಹರರಾಯರು "ಕಪಾಲಂ"** ಎಂಬ ಹೆಸರಿದ್ದ ಈ ಸ್ಥಳವನ್ನು ಅಗ್ರಹಾರವಾಗಿ ರೂಪಿಸಿ - **ಹರಿಹರಪುರ** ಎಂಬುದಾಗಿ ತಮ್ಮ ಹೆಸರನ್ನು ನೀಡಿದರು. ಆಗ್ಯೆ ಶ್ರೀಮಠದ ಪೀಠದಲ್ಲಿ ವಿರಾಜಮಾನರಾಗಿದ್ದ **ಶ್ರೀ ಶ್ರೀ ರಾಮಚಂದ್ರ ಸರಸ್ವತೀ ಸ್ವಾಮಿ ಗಳವರಿಗೆ ಈ ಹರಿಹರಪುರ ಮತ್ತು ಸುತ್ತಮುತ್ತಲಿನ 13 ಹಳ್ಳಿಗಳು** ವಿಜಯನಗರದ ಸಾಮ್ರಾಟರುಗಳಿಂದ ದತ್ತಿಯಾಗಿ ನೀಡಲ್ಪಟ್ಟ ಬಗ್ಗೆ ಶಾಸನಗಳು, ಎಪಿಗ್ರಾಫಿಯಾ ಕರ್ನಾಟಕಾ - ಗೆಝೆಟಿಯರುಗಳ ದಾಖಲೆಗಳು ಲಭ್ಯವಿವೆ.

ಶ್ರೀಮಠಾಧೀಶರ ಪರಂಪರೆ: ಮಹರ್ಷಿ ಅಗಸ್ತ್ಯ ಸಂಪೂಜಿತ **ಲಕ್ಷ್ಮೀನೃಸಿಂಹ ಸ್ವಾಮೀ, ಆಚಾರ್ಯ ಶ್ರೀ ಶಂಕರ ಭಗವತ್ಪಾದ ಪ್ರತಿಷ್ಠಾಪಿತ ಶ್ರೀ ಶಾರದಾಂಬಾ** ನೆರೆಯಾಗಿರುವ **ಈ ಪೀಠದಲ್ಲಿ ಶ್ರೀ ಶ್ರೀ ಸ್ವಯಂಪ್ರಕಾಶ ಸರಸ್ವತೀ ಸ್ವಾಮಿಗಳವರಿಂದ ಆರಂಭಿಸಿ 1999ರಲ್ಲಿ ಬ್ರಹ್ಮೈಕ್ಯರಾದ ಶ್ರೀ ಶ್ರೀ ಸ್ವಯಂ ಪ್ರಕಾಶ ಅಭಿನವ ರಾಮಾನಂದ ಸರಸ್ವತೀ ಸ್ವಾಮಿಗಳವರೆಗೆ 24 ಜನ ಯತೀಂದ್ರರು ವಿರಾಜಮಾನರಾಗಿ ದೇವತಾ ಕೈಂಕರ್ಯ, ತಪಸ್ಸು, ಶಿಷ್ಯ ಸಮುದಾಯ ಮತ್ತು ಜನ ಸಾಮಾನ್ಯರಿಗೆ ಧರ್ಮ ಬೋಧನೆ ಮಾಡುತ್ತ ಸನಾತನ ವೈದಿಕ ಸಂಸ್ಕೃತಿಯ ಮುನ್ನಡೆಗೆ ತಮ್ಮ ಪಾಲು ಸಲ್ಲಿಸಿದರು. 23ನೇ ಪೀಠಾಧೀಶ ಶ್ರೀ ಶ್ರೀ ಸ್ವಯಂಪ್ರಕಾಶ ರಾಮಾನಂದ ಸರಸ್ವತೀ ಸ್ವಾಮಿಗಳವರು ಆಗಾಗ ತಮಿಳು - ಆಂಧ್ರಪ್ರದೇಶಗಳಿಗೆ** ಪ್ರವಾಸ ಹೋಗಿ ಸಂಗ್ರಹವಾದ ಕಾಣಿಕೆ ದ್ರವ್ಯದಿಂದ ಇಲ್ಲಿ ಶ್ರೀಮಠದ ಕಟ್ಟಡಗಳ ಜೀರ್ಣೋದ್ಧಾರ, ಆಗು-ಹೋಗುಗಳನ್ನು ನಿರ್ವಹಿಸುತ್ತಿದ್ದರು. ಕೊನೆಯ ಸಲ 1924ರಲ್ಲಿ ಶ್ರೀಮಠ ದಿಂದ ಪ್ರವಾಸ ಹೊರಟ ಅವರು 12ವರ್ಷ ಪ್ರವಾಸ ಮಾಡುತ್ತಲೇ 1936ರಲ್ಲಿ ಆಂಧ್ರ ಪ್ರದೇಶದ ಪುಂಗನೂರಿನಲ್ಲಿ ಬ್ರಹ್ಮೈಕ್ಯರಾದರು. ಅವರ ಅನುಪಸ್ಥಿತಿಯಲ್ಲಿ ಅವರು 2 ದೊಡ್ಡ ಮರದ ಪೆಠಾರಿಗಳಲ್ಲಿ ತುಂಬಿಸಿಟ್ಟು ಹೋಗಿದ್ದ ಶ್ರೀಮಠದ ಪುರಾತನ ದಾಖಲೆಗಳು, ತಾಳೇಗರಿ ಗ್ರಂಥಗಳು, ಮಾಡಿನಿಂದ ಸೋರಿದ ಮಳೆಯ ನೀರಿನಿಂದ ಗೆದ್ದಲು ಹಿಡಿದು ಪೂರ್ಣ ನಾಶವಾಗಿ ಹೋದವು. ಹೀಗಾಗಿ ಶ್ರೀ ಶ್ರೀಗಳವರ ಖಾಸಗೀ ಸಂಗ್ರಹದಲ್ಲಿರುವ ವ್ಯಾಸಪೂಜೆ, ಚಾತುರ್ಮಾಸ್ಯ ವ್ರತದ ಪುಸ್ತಕದಲ್ಲಿ ಲಭ್ಯವಿರುವ ಹಿಂದಿನ ಪೀಠಾಧೀಶರ ಹೆಸರುಗಳ ಹೊರತು ಉಳಿದಂತೆ ಅವರುಗಳ ಬಗ್ಗೆ ಹೆಚ್ಚಿನ ವಿವರಗಳು ಲಭ್ಯ ವಿಲ್ಲ. **ತುಂಗಭದ್ರಾ** ಮಾಹಾತ್ಮೆ, ಆನೆಗುಂದ ಅಗ್ರಹಾರದಲ್ಲಿ ಶ್ರೀ ಮಠದ ಶಿಷ್ಯ ಪ್ರಮುಖರೊಬ್ಬರ ಸಂಗ್ರಹದಲ್ಲಿದ್ದ **ಶ್ರೀಮಠ ಮಹಿಮಾ ಸಂಹಿತೆ, ಶಾಸನಗಳು, ಗೆಝೆಟಿಯರುಗಳು ಮತ್ತು ಇತರ ಮೂಲಗಳಿಂದ** ದಾಖಲೆ ಕಲೆಹಾಕಿ ಶ್ರೀಮಠದ ಇತಿಹಾಸ ರಚಿಸ ಬೇಕಾಯಿತು. (ಪರಮ ಗುರು **ಶ್ರೀ ಶ್ರೀ ಸ್ವಯಂಪ್ರಕಾಶ ಅಭಿನವ ರಾಮಾನಂದ ಸರಸ್ವತೀ ಸ್ವಾಮಿ** ಗಳವರ ಷಷ್ಠಿಪೂರ್ತಿ ಸಮಾರಂಭವನ್ನು ಶಿಷ್ಯರು ಭಕ್ತಾಭಿಮಾನಿಗಳು ಆಚರಿಸಿದಾಗ (16-4-1981) ಬಿಡುಗಡೆಯಾದ "**ತೋರುಬೆಳಕು**" ಪುಸ್ತಕ). ಈ ಲೇಖಕನಿಗೆ ತಿಳಿದಂತೆ ಈ ಪೀಠದ 3 ಜನ ಯತಿವರ್ಯರು '**ದಕ್ಷಕ್ಷೇತ್ರ**'ವೆಂಬ ಪುರಾಣ ಪ್ರಸಿದ್ಧಿಯುಳ್ಳ ಈ ಪೀಠವನ್ನು '**ದಕ್ಷ**' ಅಂದರೆ ಸ್ವಸಾಮರ್ಥ್ಯದಿಂದಲೇ ಅಭಿವೃದ್ಧಿಗೆ ತಂದು **ದಕ್ಷಪೀಠವನ್ನಾಗಿ** ಪರಿವರ್ತಿಸಿದ್ದಾರೆ ಎಂಬುದು ವಾಸ್ತವಿಕ ಸತ್ಯ.

23ನೇ ಪೀಠಾಧೀಶ ಶ್ರೀ ಶ್ರೀ ಸ್ವಯಂಪ್ರಕಾಶ ಅಭಿನವ ರಾಮಾನಂದ ಸರಸ್ವತೀ ಸ್ವಾಮಿಗಳವರು: ಶೃಂಗೇರಿ ಕಲ್ಲು ದೇವಸ್ಥಾನದ ವೈದಿಕ ಮನೆತನದ **ವೇ|| ಸುಬ್ಬಾಭಟ್ಟರ ಮಗ** 18 ವರ್ಷ ಪ್ರಾಯದ ನೈಷ್ಠಿಕ ಬ್ರಹ್ಮಚಾರಿ **ಶೇಷಗಿರಿ ಭಟ್ಟನೆಂಬ** ಹುಡುಗ ಅಧ್ಯಾತ್ಮದಲ್ಲಿ ಆಸಕ್ತನಾಗಿ ಹರಿಹರಪುರಕ್ಕೆ ಬಂದು ಕೆಲವು ದಿನಗಳಿಂದ ಆಗಿನ ಪೀಠಾಧೀಶ **ಶ್ರೀ ಶ್ರೀ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತೀ** ಸ್ವಾಮಿಗಳವರ ಬಳಿ ಅಧ್ಯಯನ ನಿರತನಾಗಿದ್ದನು. ಶ್ರೀ ಶ್ರೀ ಗಳವರ ದೇಹಾರೋಗ್ಯ ತೀರಾ ಹದಗೆಟ್ಟು ಹೋದಾಗ ಅಧಿಕಾರಿಗಳು **ಶೃಂಗೇರಿ**

ಜಗದ್ಗುರುಗಳವರಲ್ಲಿ ವಿಷಯ ನಿವೇದಿಸಿಕೊಂಡು ಉತ್ತರಾಧಿಕಾರಿಯ ಬಗ್ಗೆ ಸಲಹೆ ಕೇಳಿದರು. ಈಗ ಶ್ರೀಮಠದಲ್ಲಿರುವ **ಶೇಷಗಿರಿ ಭಟ್ಟ**ನಿಗೆ ಸಂನ್ಯಾಸಾಶ್ರಮ ಕೊಡಿಸಿ, ಪೀಠಾಧಿಕಾರ ನೀಡಬಹುದೆಂಬ ಜಗದ್ಗುರುಗಳವರ ಅಪ್ಪಣೆಯಂತೆ **ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ**ಗಳವರು ಇವರನ್ನು ಶಿಷ್ಯರಾಗಿ ಸ್ವೀಕರಿಸಿ **ಶ್ರೀ ಶ್ರೀ ಸ್ವಯಂಪ್ರಕಾಶ ರಾಮಾನಂದ ಸರಸ್ವತಿಗಳೆಂಬ** ಅಭಿದಾನವನ್ನು ನೀಡಿ ಸ್ವಲ್ಪದಿನಗಳಲ್ಲಿಯೇ (1880) ಬ್ರಹ್ಮೈಕ್ಯರಾದರು.

ಇವರು ಆ ಕಾಲದಲ್ಲಿ ಶ್ರೀಮಠವನ್ನು ಜೀರ್ಣೋದ್ಧಾರ ಮಾಡಿ ತಮಿಳು - ಆಂಧ್ರಪ್ರದೇಶಗಳಲ್ಲಿ ಆಗಾಗ ಪ್ರವಾಸ ಕೈಗೊಂಡು ಧರ್ಮ ಪ್ರಚಾರ ಮಾಡುತ್ತ ಇಲ್ಲಿ ಶ್ರೀ ಮಠವನ್ನು ವ್ಯವಸ್ಥಿತವಾಗಿ, ನಿರ್ವಹಿಸುತ್ತ ಕೆಲವು ಕಾಲ ಶ್ರೀ ಮಠದಲ್ಲಿ ಸಂಸ್ಕೃತ ಪಾಠಶಾಲೆಯನ್ನು ನಡೆಸಿದ್ದುಂಟು. ತುಂಬಾ ಆರ್ಥಿಕ ಮುಗ್ಗಟ್ಟಿನ ಆ ದಿನಗಳಲ್ಲಿ ಅವರು ದಕ್ಷತೆಯಿಂದಲೇ ಪೀಠವನ್ನು ನಿರ್ವಹಿಸಿದರು. ಕೊನೆಯದಾಗಿ 1924ರಲ್ಲಿ ಪ್ರವಾಸ ಹೋದ ಅವರು 1936ರಲ್ಲಿ ಆಂಧ್ರ ಪ್ರದೇಶದ ಪುಂಗನೂರಿನಲ್ಲಿ ಬ್ರಹ್ಮೈಕ್ಯರಾದರು. (ಆ ಅವಧಿಯಲ್ಲಿಯೇ ಹಿಂದೆ ಹೇಳಿದಂತೆ ಶ್ರೀಮಠದ ಪುರಾತನ ದಾಖಲೆಗಳು ನಾಶವಾದುದಲ್ಲದೆ ಶ್ರೀಮಠದ ಕಟ್ಟಡಗಳು ಜೀರ್ಣಾವಸ್ಥೆಗೆ ಬಂದವು).

ಪರಮಗುರುಗಳು: ಮುಂದೆ ಪೀಠಕ್ಕೆ ಬಂದವರು ಶೃಂಗೇರಿಯ ಸಮೀಪ ಆನೆಗುಂದ ಅಗ್ರಹಾರದ ದೀಕ್ಷಿತ ಮನೆತನದ **ಶ್ರೀನಿವಾಸ ದೀಕ್ಷಿತರು, ಶೃಂಗೇರಿ ಜಗದ್ಗುರು ಪೀಠದ ಮಹಾತಪಸ್ವಿ ಜೀವನ್ಮುಕ್ತ ಪ್ರಮಪೂಜ್ಯ ಶ್ರೀ ಶ್ರೀ ಚಂದ್ರ ಶೇಖರ ಭಾರತೀ ಮಹಾಸ್ವಾಮಿಗಳವರ ಸಲಹೆಯಂತೆ ಸಂನ್ಯಾಸ ಸ್ವೀಕರಿಸಿ ಶ್ರೀ ಶ್ರೀ ಸ್ವಯಂಪ್ರಕಾಶ ಅಭಿನವ ರಾಮಾನಂದ ಸರಸ್ವತೀ ಎಂಬ ಯೋಗ ಪಟ್ಟ ಪಡೆದು** 18ನೇ ವಯಸ್ಸಿನಲ್ಲಿ 24ನೇ ಪೀಠಾಧೀಶರಾದ ಇವರ ಹಲವು ಮುಖದ ದಕ್ಷಪೂರ್ಣ ಸಾಧನೆಯಿಂದ ಜೀರ್ಣವಾಗಿ ಹೋಗುತ್ತಿದ್ದ ಈ ಪುರಾತನ ಧರ್ಮಪೀಠಕ್ಕೆ ಕಾಯಕಲ್ಪನೀಡಿ - ಈ ಮಲೆನಾಡು ಪ್ರದೇಶದಲ್ಲಿ ಎಲ್ಲ ಜನರ ಅನುಕೂಲಕ್ಕಾಗಿ ವಿದ್ಯಾಸಂಸ್ಥೆಗಳ ಸ್ಥಾಪನೆ, ಆರೋಗ್ಯ, ಅಭಿವೃದ್ಧಿಗೆ ಸಹಾಯ ನೀಡುತ್ತ ಹಿಂದಿನ ಗುರುಗಳು ಶ್ರೀಮಠಕ್ಕೆ ಗಳಿಸಿಕೊಟ್ಟಿದ್ದ ಕೀರ್ತಿಯನ್ನು ವಿಸ್ತಾರಗೊಳಿಸಿದರು. 1939ರಿಂದ 1999ರ ವರೆಗೆ 60 ವರ್ಷಗಳ ದೀರ್ಘಕಾಲ ದಕ್ಷತೆ ಸಾಮರ್ಥ್ಯಗಳಿಂದ ಹರಿಹರಪುರ ಶ್ರೀಮಠದ ಪೀಠವನ್ನು ಜನೋಪಯೋಗಿಯಾಗುವಂತೆ ಮುನ್ನಡೆಸಿ 1999ರಲ್ಲಿ ಬ್ರಹ್ಮೈಕ್ಯರಾದ ಇವರು ಜನರ ನೆನಪಿನಲ್ಲಿ ಈಗಲೂ ಉಳಿದಿದ್ದಾರೆ.

ಈಗಿನ ಗುರುವರ್ಯರು: 'ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ' ಈ ವೇದೋಕ್ತಿಯ ಪ್ರಕಾರ ಎಲ್ಲ ಪ್ರಾಪಂಚಿಕ ವಿಷಯಗಳ ತ್ಯಾಗವೇ "**ಮೋಕ್ಷಪ್ರಾಪ್ತಿಗೆ ಸಾಧನ**" ಇದು ಸಂನ್ಯಾಸಿಗಳ ಪ್ರಪಥಮ ಅವಶ್ಯಕತೆ ಎಂಬುದನ್ನು ಆಚರಿಸಿ ತೋರಿಸಿ ಸಂನ್ಯಾಸ ಸ್ವೀಕರಿಸಿದವರು. ಶೃಂಗೇರಿಯ ಸಮೀಪದ ಉಳುವೆ ಗ್ರಾಮ ದಲ್ಲಿ **ಕೃಷಿಕ ವೈದಿಕ ಸದ್ಗೃಹಸ್ಥ ಶ್ರೀ ಗೋಪಾಲರಾಯರ 3 ಮಕ್ಕಳಲ್ಲಿ ಒಬ್ಬರಾದ ನಾಗರಾಜ್**, ಕೇವಲ ಪ್ರತಿಭೆ ಯಿಂದಲೇ ಕಂಪ್ಯೂಟರ್ ಸೈನ್ಸ್ ಇಂಜಿನಿಯರ್ ಪದವಿ ಗಳಿಸಿ, **ಸೆಂಟ್ರಲ್ ಸೈಂಟಿಫಿಕ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ನ ಬೆಂಗಳೂರು - ಹೈದ್ರಾಬಾದ್ ಮತ್ತು ಚೆನ್ನೈ (ಮದರಾಸು)** ಕೇಂದ್ರಗಳಲ್ಲಿ ಉನ್ನತ ಅಧಿಕಾರದಲ್ಲಿದ್ದು ಕೈ ತುಂಬ ಸಂಪಾದಿಸುತ್ತ ಭೋಗ ಜೀವನ ನಡೆಸುತ್ತಿದ್ದವರು. ಅಕಸ್ಮಾತ್ **ಶ್ರೀ ರಾಮಕೃಷ್ಣಾಶ್ರಮದ** ಸಂಬಂಧ ಉಂಟಾಗಿ ವೇದಾಂತ ಗ್ರಂಥಗಳನ್ನು ಓದುತ್ತ ತೀವ್ರ ಅಧ್ಯಾತ್ಮಿಕ ಪ್ರವೃತ್ತಿಗೆ ಒಳಗಾಗಿ ಎಲ್ಲವನ್ನೂ ತ್ಯಜಿಸಿ ಶೃಂಗೇರಿಯ ಈಗಿನ **ಜಗದ್ಗುರು ಪರಮ ಪೂಜ್ಯ ಭಾರತೀ ತೀರ್ಥ ಮಹಾಸ್ವಾಮಿಗಳವರ ಸಲಹೆಯಂತೆ** ಶೃಂಗೇರಿಗೆ ಬಂದು ಅವರ ಸನ್ನಿಧಿಯಲ್ಲಿ ಸಂಸ್ಕೃತ ವೇದಾಂತಗಳ ಅಧ್ಯಯನ ನಿರತರಾಗಿ 4 ವರ್ಷದಿಂದ ನೈಷ್ಠಿಕ ಬ್ರಹ್ಮಚರ್ಯ ಪಾಲಿಸುತ್ತಿದ್ದರು. ಹಿಂದಿನ ಗುರು ವರ್ಯರು ಶಿಷ್ಯಪರಿಗ್ರಹ ಮಾಡದೆ ಮುಕ್ತರಾಗಿ ಸೂಕ್ತ ಉತ್ತರಾಧಿಕಾರಿಗಾಗಿ ಹುಡುಕಾಟ ನಡೆದಾಗ **ಶೃಂಗೇರಿಯ ಜಗದ್ಗುರು ಪರಮ ಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನದವರು** ತಮ್ಮ ಬಳಿ ಅಧ್ಯಯನ ನಿರತರಾಗಿದ್ದ **ಈ ನೈಷ್ಠಿಕ ಬ್ರಹ್ಮಚಾರಿ ನಾಗರಾಜ ಶರ್ಮರನ್ನು ಆಶೀರ್ವದಿಸಿ ಶ್ರೀಮಠದ ಪೀಠಕ್ಕೆ ಉತ್ತರಾಧಿಕಾರಿಯನ್ನಾಗಿ ಕಳಿಸಿಕೊಟ್ಟರು.** 2001ನೇ ಮೇ ತಿಂಗಳಲ್ಲಿ ಸಂನ್ಯಾಸ ಸ್ವೀಕರಿಸಿ **ಶ್ರೀ ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳೆಂಬ ಯೋಗಪಟ್ಟ ಪಡೆದು ಶ್ರೀ ಶ್ರೀಗಳವರು "ಜ್ಞಾನಂ ವಿಜ್ಞಾನ ಸಹಿತಂ"** ಎಂಬಂತೆ ವೇದಾಂತರ್ಗತವಾದ ಪುರಾತನ ಮೌಲ್ಯಗಳನ್ನು ಅಧುನಿಕ ವಿಜ್ಞಾನದೊಡನೆ ಸಮೀಕರಿಸಿಕೊಂಡು ಪೀಠದ ಸಮಗ್ರ ಪುನರುತ್ಥಾನ - ಆಧ್ಯಾತ್ಮಿಕ ಮೌಲ್ಯಗಳ ಪ್ರಚಾರ ಮತ್ತು ಮಹಿಳೆಯರು - ದಲಿತರು - ದುರ್ಬಲರು ಸೇರಿದಂತೆ ಸಮಗ್ರ ಸಮಾಜದ ಅಭಿವೃದ್ಧಿಗಾಗಿ ಯೋಜನೆ ಗಳನ್ನು ಹಾಕಿಕೊಂಡು ಈಗಾಗಲೇ ಸಾಧಿಸಿರುವ ಕಾರ್ಯಗಳ ವಿವರ ವಿಸ್ತಾರವಾದುದು. ಪುರಾತನ

ವೇದ, ಪುರಾಣ, ಉಪನಿಷತ್ತುಗಳ ವಿಶ್ವವ್ಯಾಪನೆಯ ಮೌಲ್ಯಗಳನ್ನು ಸರಳ ರೀತಿಯಲ್ಲಿ ಸಮಾಜದ ಸಾಮಾನ್ಯ ಜನರಿಗೆ ಅರಿವು ಮಾಡಿಕೊಡಲು ಶ್ರೀ ಶ್ರೀ ಗಳವರು ಪೀಠಕ್ಕೆ ಬಂದೊಡನೆ ಸ್ಥಾಪಿಸಿದ **'ಸ್ವಯಂಪ್ರಕಾಶ'** ಕನ್ನಡ ಮಾಸ ಪತ್ರಿಕೆ ಯಶಸ್ವಿಯಾಗಿ ಪ್ರಕಟವಾಗುತ್ತ ಮುನ್ನಡೆಯುತ್ತಿದೆ. ಕನ್ನಡೇತರ ಭಾಷೆಯ ಓದುಗರಿಗಾಗಿ **'ಸದ್ಗುರೂಸ್ ಬ್ಲೆಸ್ಸಿಂಗ್ಸ್'** ಆಂಗ್ಲ ಪತ್ರಿಕೆಯೂ ಪ್ರಕಟವಾಗುತ್ತಿದೆ. ಸ್ವಯಂ ಪ್ರಕಾಶ ವೇದ ಸಂಸ್ಕೃತ ಪಾಠಶಾಲೆ, ಭವ್ಯವಾದ **ಶ್ರೀ ಸೋಮೇಶ್ವರ ಯಾಗಶಾಲೆ** ಹರಿಹರಪುರದಲ್ಲಿ **ಆಯುರ್ವೇದ ಆಸ್ಪತ್ರೆ**, ಹಿಂದಿನ ಗುರುವರ್ಯರು ಸ್ಥಾಪಿಸಿದ **ವಿದ್ಯಾಸಂಸ್ಥೆಗಳ ಮುಂದುವರಿಕೆ, ಅಭಿವೃದ್ಧಿ ದೇಗುಲಗಳ ಪುನರು ಜ್ಜೀವನ, ಆಕರ್ಷಕ ಸುಸಜ್ಜಿತ ಅತಿಥಿಗೃಹ, ಧರ್ಮ ಪ್ರಚಾರ ದೇವತಾ ಪ್ರತಿಷ್ಠೆಗಳಿಗಾಗಿ** ರಾಜ್ಯ, ಹೊರರಾಜ್ಯಗಳಲ್ಲಿ ಮೇಲಿಂದ ಮೇಲೆ ನಡೆಸುತ್ತಿರುವ ಪ್ರವಾಸಗಳು ಹೀಗೆ ಎಷ್ಟೋ ಇವೆ.

ಶ್ರೀ ಶ್ರೀಗಳವರ ಮುಂದಿನ ಮುಖ್ಯ ಯೋಜನೆಗಳು : ಈಗಾಗಲೇ ಶ್ರೀ ಶ್ರೀಗಳವರು ಸ್ಥಾಪಿಸಿ ಮುನ್ನಡೆಸುತ್ತಿರುವ **ವಿಶ್ವಗಾಯತ್ರೀ ಉಪಾಸಕ್ ಪರಿಷತ್** ಮನುಕುಲದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾದ **ವೇದಮಾತೆ ಗಾಯತ್ರೀ ದೇವಿಯನ್ನು** ಯಾವ ಪರಿಭೇದವಿಲ್ಲದೆ ಪ್ರತಿಯೊಬ್ಬರೂ ಅವರವರ ನೆಲೆಯಲ್ಲಿ ಸೂಕ್ತವಾಗುವಂತೆ ಉಪಾಸನೆ ನಡೆಸಲು ಮಾರ್ಗದರ್ಶನ ನೀಡುತ್ತ ಎಲ್ಲ ಕಡೆ ಕಾರ್ಯ ರೂಪಕ್ಕೆ ಬರುವಂತಹ ಯೋಜನೆಯನ್ನು ಸರ್ವತ್ರ ವ್ಯಾಪಕವಾಗಿಸಲು ಪ್ರಯತ್ನಿಸುತ್ತಿದ್ದಾರೆ.

ಲಿವ್ ಹ್ಯಾಪಿಲಿ ಫೌಂಡೇಷನ್: **"ಶತಂ ಜೀವ ಶರದೋ ವರ್ಧಮಾನಃ" "ಯಾವಜ್ಜೀವೇತ್ ಸುಖಂ ಜೀವೇತ್"** ನೂರು ವರ್ಷ ಅಭಿವೃದ್ಧಿ ಹೊಂದುತ್ತ ಬಾಳಬೇಕು, ಬದುಕಿರುವಷ್ಟು ಕಾಲ ಸುಖದಿಂದಿರಬೇಕು! ಈ ವೇದ ಸೂಕ್ತಿಗಳ ಪ್ರಕಾರ ಮಾನವನ ಸುಖಬಾಳ್ವೆಗೆ ಮಾರ್ಗದರ್ಶಕವಾದ **ಲಿವ್ ಹ್ಯಾಪಿಲಿ ಫೌಂಡೇಷನ್**. ಇದು ಶ್ರೀ ಶ್ರೀ ಗಳವರು ಸ್ಥಾಪಿಸಿರುವ ಪ್ರತಿಷ್ಠಾನ. ಇದರ ಮೂಲಕ

1) **ಜ್ಞಾನಜ್ಯೋತಿ ಯೋಜನೆ:** ಒಬ್ಬ ವಿದ್ಯಾರ್ಥಿಗೆ ವೃತ್ತಿಪರ ಉನ್ನತ ವಿದ್ಯಾಭ್ಯಾಸಕ್ಕೆ ಸಹಾಯ (ಪ್ರತಿ ವರ್ಷ) ಇದು ಈಗ ಜಾರಿಯಲ್ಲಿದೆ.

2). **ಆರೋಗ್ಯ ಜ್ಯೋತಿ ಯೋಜನೆ:** ಈ ಯೋಜನೆಯ ಅಡಿಯಲ್ಲಿ **ಹರಿಹರಪುರ ಶ್ರೀ ಸರಸ್ವತೀ ಸೇವಾ ಆಸ್ಪತ್ರೆ** ತೆರೆಯಲಾಗಿದ್ದು ಗ್ರಾಮೀಣ ಬಡರೋಗಿಗಳಿಗೆ ಚಿಕಿತ್ಸೆ - ಔಷಧ ನೀಡಲಾಗುತ್ತದೆ. ಇದನ್ನು ಇನ್ನೂ ಹೆಚ್ಚು ಸೌಲಭ್ಯಗಳಿಂದ ಅಭಿವೃದ್ಧಿಪಡಿಸುವ ಯೋಜನೆ ಕಾರ್ಯಗತವಾಗಲಿದೆ.

3) **ಆನಂದ ಜ್ಯೋತಿ ಯೋಜನೆ:** ಇದರ ಅಡಿಯಲ್ಲಿ ಒಂದು ಅಧ್ಯಯನ ಕೇಂದ್ರ ಸ್ಥಾಪನೆಗೆ ಪ್ರಯತ್ನ ಕೈಗೊಳ್ಳಲಾಗಿದೆ.

ಹಿಂದೂ ಸಮಾಜ ದೇಶದ ಐಕ್ಯತೆ: ಮುನ್ನಡೆಗಳಿಗೆ ಮಾರಕವಾದ ಅಸ್ಪೃಶ್ಯತೆಯನ್ನು ತೊಡೆದು ಹಾಕಿ **"ಕೃಣ್ವಂತೋ ವಿಶ್ವ ಮಾರ್ಯಂ"** ಎಂಬ ವೇದೋಕ್ತಿ - **ಆಚಾರ್ಯ ಶ್ರೀ ಶಂಕರರ ವಿಶ್ವವೆಲ್ಲ ಒಂದು ಎಂಬ ಏಕತೆ - ಸಮಾನತೆಯನ್ನು** ಸರ್ವತ್ರ ನೆಲೆಗೊಳಿಸಬೇಕೆಂಬ ಮಹಾ ಪ್ರಯತ್ನ ಶ್ರೀ ಶ್ರೀಗಳವರದು. ತರುಣ ಸಂನ್ಯಾಸಿ ಸ್ವಾಮೀ ವಿವೇಕಾನಂದರಂತೆ ಸಮಾಜ - ಧರ್ಮಗಳ ಸರ್ವತೋಮುಖ ಅಭಿವೃದ್ಧಿ ಸಾಧನೆಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟಿರುವ **ಈ ತರುಣ ಸಂನ್ಯಾಸಿ ಶ್ರೀ ಶ್ರೀ ಸಚ್ಚಿದಾನಂದ ಸ್ವಾಮಿಗಳು ಸ್ವಯಂಪ್ರಕಾಶರೇ** ಆಗಿದ್ದಾರೆ.

ಅಕ್ರೋಧೇನ ಜಯೇತ್ ಕ್ರೋಧಮಸಾಧುಂ
ಸಾಧುನಾ ಜಯೇತ್ ।
ಜಯೇತ್ ಕದರ್ಯಂ ದಾನೇನ ಜಯೇತ್
ಸತ್ಯೇನ ಚಾನೃತಮ್ ॥
(ಮಹಾಭಾರತ, ಉದ್ಯೋಗ, 39-72)

ತಾಳ್ಮೆಯಿಂದ ಕೋಪವನ್ನು ಒಳ್ಳೆಯದರಿಂದ ಕೆಟ್ಟದ್ದನ್ನೂ ಜಯಿಸಬೇಕು. ಜಿಪುಣನನ್ನು ದಾನದಿಂದಲೂ, ಸುಳ್ಳನ್ನು ಸತ್ಯದಿಂದಲೂ ಜಯಿಸಬೇಕು.

ಅಜರಾಮರವತ್ ಪ್ರಾಜ್ಞೋ
ವಿದ್ಯಾಮರ್ಥಂ ಚ ಸಾಧಯೇತ್ ।
ಗೃಹೀತ ಇವ ಕೇಶೇಷು
ಮೃತ್ಯುನಾ ಧರ್ಮಮಾಚರೇತ್ ॥
(ಸಮಯೋಚಿತ ಪದ್ಯಮಾಲಿಕಾ)

ನನಗೆ ಮುಪ್ಪೂ ಇಲ್ಲ ಮರಣವೂ ಇಲ್ಲ - ಎಂಬಂತೆ ಬುದ್ಧಿಶಾಲಿಯಾದವನು ವಿದ್ಯೆಯನ್ನೂ ಧನವನ್ನೂ ಸಂಪಾದಿಸಬೇಕು. ಮೃತ್ಯು ಬಂದು ಜುಟ್ಟನ್ನು ಹಿಡಿದು ಕೊಂಡಿದೆಯೋ ಎಂಬಂತೆ ಹೆದರಿಕೆಯಿಂದ ಧರ್ಮವನ್ನಾಚರಿಸಬೇಕು

ಭಾರತೀಯರ ಧರ್ಮ ಮತ್ತು ಸಂಸ್ಕೃತಿ

ಮಹಾಮಹೋಪಾಧ್ಯಾಯ
ವಿದ್ವಾನ್ ರಂಗನಾಥ ಶರ್ಮಾ, ಬೆಂಗಳೂರು

ಭಾರತೀಯರಿಗೆ ವೇದಗಳು ಆಧಾರ ಗ್ರಂಥಗಳು. ಇವುಗಳ ಆಧಾರದಿಂದಲೇ ನಮ್ಮ ಪೂರ್ವಜರು ತಮ್ಮನ್ನು ಪರಿಷ್ಕರಿಸಿ ಕೊಂಡು ನೆಮ್ಮದಿಯಿಂದ ಬಾಳಿದರೆಂದು ನಮ್ಮೆಲ್ಲರ ವಿಶ್ವಾಸವಾಗಿದೆ. ವೇದವನ್ನು ಪ್ರಮಾಣ ಗ್ರಂಥವೆಂದು ತಿಳಿಯಲು ಅದು ಬೋಧಿಸಿದ ಅತ್ಯುತ್ತಮವಾದ ಕರ್ಮ ಮಾರ್ಗವೂ ಜ್ಞಾನ ಮಾರ್ಗವೂ ಮುಖ್ಯ ಕಾರಣವಾಗಿದೆ. ಇದು ಶ್ರೇಷ್ಠವಾದ ಜೀವನ ಮಾರ್ಗವನ್ನು ಬೋಧಿಸಲು ಶ್ರೇಷ್ಠ ವ್ಯಕ್ತಿಯಿಂದ ಉಕ್ತವಾದದ್ದೇ ನಿಮಿತ್ತವಾಗಿದೆ. ಅಂತಹ ಶ್ರೇಷ್ಠ ವ್ಯಕ್ತಿಯು ಈಶ್ವರನೇ ಹೊರತು ಇನ್ನೊಬ್ಬನಲ್ಲ. ಆದ್ದರಿಂದ ಶ್ರೀಶಂಕರಾಚಾರ್ಯರು '**ನ ಹಿ ಈದೃಶಸ್ಯ ಶಾಸ್ತ್ರಸ್ಯ ಋಗ್ವೇದಾದಿ ಲಕ್ಷಣಸ್ಯ ಸರ್ವಜ್ಞಾದಿಗುಣಾನ್ವಿತಸ್ಯ ಸರ್ವಜ್ಞಾದನ್ಯತಃ ಸಂಭವೋಽಸ್ತಿ**' ಎಂದು ಹೇಳಿದ್ದಾರೆ. (ಸೂತ್ರ ಭಾಷ್ಯ 1-1-3).

"**ಋಗ್ವೇದಾದಿ ಶಾಸ್ತ್ರವು ಸರ್ವಾರ್ಥಪ್ರಕಾಶನ ಸಮರ್ಥ ವಾಗಿ ಸರ್ವಜ್ಞಸದೃಶವಾಗಿದೆ. ಇಂತಹ ವೇದವು ಸರ್ವಜ್ಞ ನಲ್ಲದೇ ಇನ್ನೊಬ್ಬನಿಂದ ಉತ್ಪನ್ನವಾಗಲಾರದು**" ಆದ್ದರಿಂದಲೇ ವೇದವು ಅಪೌರುಷೇಯವೆಂದು ನಮ್ಮ ಶಾಸ್ತ್ರಜ್ಞರು ಹೇಳಿದ್ದಾರೆ. ಅಪೌರುಷೇಯವೆಂದರೆ ಯಾವನೋ ಒಬ್ಬ ಮನುಷ್ಯನಿಂದ ನಿರ್ಮಿತವಾದದ್ದಲ್ಲ ಎಂದರ್ಥ. ನಮ್ಮ ಪ್ರಾಚೀನ ಋಷಿಗಳು ತಪಸ್ಸು ಮಾಡುತ್ತಾ ಸಮಾಧಿಸ್ಥರಾದಾಗ ಅವರ ಬಾಯಿಯಿಂದ ವೇದದ ನಾನಾ ಮಂತ್ರಗಳು ಹೊರಬಂದವು. ಆದ್ದರಿಂದ ಅಲ್ಲಲ್ಲಿ ವಾಮದೇವ ಋಷಿಃ, ವಿಶ್ವಾಮಿತ್ರ ಋಷಿಃ ಎಂಬ ಮಾತುಗಳು ಬರುತ್ತವೆ. ಋಷಿ ಎಂದರೆ ಆ ಮಂತ್ರದ ದ್ರಷ್ಟ್ಯ ಎಂದರ್ಥ. ಋಷಿಗಳು ಮಂತ್ರ ದ್ರಷ್ಟಾರರೇ ಹೊರತು ಕರ್ತಾರರಲ್ಲ.

ಈ ವೇದಗಳು ಮಾನವ ಜಾತಿಯ ಹಿತಕ್ಕಾಗಿ ಕೆಲವು ಕರ್ತವ್ಯ ಕರ್ಮಗಳನ್ನು ಉಪದೇಶಿಸುತ್ತವೆ. ಇದನ್ನೇ ನಾವು ಧರ್ಮ ಎನ್ನುತ್ತೇವೆ. ಈ ಧರ್ಮದ ಆಚರಣೆಯಿಂದ ಮನುಷ್ಯನು ಇಹದಲ್ಲಿ ಸುಖವಾಗಿದ್ದು ಪರದಲ್ಲಿ ಸದ್ಗತಿಯನ್ನು ಪಡೆಯುತ್ತಾನೆ ಎಂಬುದು ನಮ್ಮೆಲ್ಲರ ನಂಬಿಕೆಯಾಗಿದೆ.

"**ಯತೋಽಭ್ಯುದಯ ನಿಃಶ್ರೇಯಸಸಿದ್ಧಿಃ ಸ ಧರ್ಮಃ**" ಎಂದು ಶಾಸ್ತ್ರಕಾರರು ಹೇಳಿದ್ದಾರೆ. ಯಾವುದರಿಂದ ಅಭ್ಯುದಯ ಮತ್ತು ನಿಃ ಶ್ರೇಯಸ್ಸು ಸಿದ್ಧಿಸುತ್ತದೆಯೋ ಅದು ಧರ್ಮ ಎಂದು ಅರ್ಥ. ಅಭ್ಯುದಯವೆಂದರೆ ಸುಖ ಭೋಗ ಗಳ ಪ್ರಾಪ್ತಿ. ನಿಃಶ್ರೇಯಸವೆಂದರೆ ಮೋಕ್ಷ. ಮನುಷ್ಯನ ಬಯಕೆಗಳು ಇವೇ ಆಗಿರುತ್ತವೆ. ಆದ್ದರಿಂದಲೇ ಧರ್ಮ, ಅರ್ಥ, ಕಾಮ, ಮೋಕ್ಷ ಇವು ನಾಲ್ಕು ಪುರುಷಾರ್ಥಗಳೆಂದು ಹೇಳಿದ್ದಾರೆ. ಸಾಮಾನ್ಯವಾಗಿ ಮನುಷ್ಯರೆಲ್ಲರೂ ಬಯಸುವುದು ಅರ್ಥ ಕಾಮಗಳನ್ನು. ಅರ್ಥವೆಂದರೆ ಹಣ ಮುಂತಾದ ಭೋಗ ಸಾಮಗ್ರಿ. ಕಾಮವೆಂದರೆ ಈ ಅರ್ಥದಿಂದ ದೊರೆಯುವ ನಾನಾ ಬಗೆಯ ಸುಖಭೋಗಗಳು. ಇವನ್ನು ಧರ್ಮದಿಂದಲೇ ದೊರಕಿಸಿಕೊಳ್ಳಬೇಕೆಂದು ಶಾಸ್ತ್ರವು ಉಪದೇಶಿಸುತ್ತದೆ. ನಿಃಶ್ರೇಯಸವೆಂದರೆ ಮೋಕ್ಷ, ಇದೇ ಪರಮ ಪುರುಷಾರ್ಥ. ಹೀಗೆ ಮನುಷ್ಯನ ಹಿತಗಳೆಲ್ಲವೂ ಧರ್ಮದಲ್ಲಿ ಅಡಗಿವೆ. ಧರ್ಮದ ನಾನಾ ಬಗೆಯ ಆಚರಣೆಗಳನ್ನು ವೇದೋಪನಿಷತ್ತುಗಳು, ಧರ್ಮಶಾಸ್ತ್ರಗಳು, ಪುರಾಣಗಳು ಬೋಧಿಸುತ್ತವೆ. ಈ ಆಚರಣೆಗಳ ಮೂಲವು ಜನರ ಸ್ಮರಣೆಯಲ್ಲಿ ಇಲ್ಲದಿದ್ದರೂ ನಡತೆಯಲ್ಲಿ ಪ್ರತಿಬಿಂಬಿಸಿಬಿಟ್ಟಿರುತ್ತವೆ. ಈ ನಡತೆಗಳನ್ನು ನಾವು ಭಾರತೀಯ ಸಂಸ್ಕೃತಿ ಎನ್ನುತ್ತೇವೆ.

ಸಂಸ್ಕೃತಿಯೆಂದರೆ ಈ ಧರ್ಮೋಪದೇಶಗಳಿಂದಾದ ಚಿತ್ತ ಸಂಸ್ಕಾರ. ಈ ಸಂಸ್ಕಾರವು ಪರಂಪರೆಯಿಂದ ಜನಜೀವನ ದಲ್ಲಿ ಹಾಸುಹೊಕ್ಕಾಗಿ ಸೇರಿಹೋಗಿವೆ. ಈ ಸಂಸ್ಕೃತಿಯು ನಮ್ಮ ದೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠವಾದದ್ದು. ಇದನ್ನು ನಾವು ಅವಶ್ಯವಾಗಿ ಉಳಿಸಿಕೊಳ್ಳಬೇಕು. ಇದನ್ನು ಒಂದು ದೃಷ್ಟಾಂತ ದಿಂದ ಸ್ಪಷ್ಟೀಕರಿಸಬಹುದು.

ಭೃಗೋಪನಿಷತ್ತಿನಲ್ಲಿ "**ಅತಿಥಿ ದೇವೋ ಭವ**" ಎಂಬ ವಾಕ್ಯ ಇದೆ. ಗುರುಕುಲದಿಂದ ನಿರ್ಗಮಿಸುವ ಶಿಷ್ಯನಿಗೆ ಆಚಾರ್ಯನು ಉಪದೇಶಿಸುವ ನೀತಿಮಾರ್ಗವಿದು. ಅತಿಥಿಯನ್ನು ದೇವರಂತೆ ಕಾಣತಕ್ಕವನಾಗು ಎಂದು ಈ ಮಾತಿನ ಅರ್ಥ. ಅತಿಥಿಯೆಂದರೆ ಪರಸ್ಥಳದಿಂದ ಬಂದಿರುವ ಆಶ್ರಯಾಪೇಕ್ಷಿಯಾದ ಒಬ್ಬ ಮನುಷ್ಯ. ಅವನು ಬಂಧುವಲ್ಲ, ಆಪ್ತಮಿತ್ರನೂ ಅಲ್ಲ, ಅಪರಿಚಿತ ಸ್ಥಳವಾದ್ದರಿಂದಲೋ ಅಥವಾ ಬೇರೆ ಕಾರಣದಿಂದಲೋ ಈತನು ಮನೆಯಲ್ಲಿ ತಂಗಲು ಬಂದವನು. ಅವನಿಗೆ ಊಟ ಉಪಚಾರಗಳನ್ನಿತ್ತು ಒಳ್ಳೆಯ ಮಾತಿನಿಂದ ಗೌರವಿಸುವುದು ಆತಿಥೇಯನ ಕರ್ತವ್ಯವಾಗಿದೆ. ಇದು ನಗರಗಳಲ್ಲಿ ಕಾಣೆಯಾದರೂ ಹಳ್ಳಿಗಳಲ್ಲಿ ಇನ್ನೂ ಉಳಿದುಕೊಂಡಿದೆ. ಅತಿಥಿಯು ಸಾಮಾನ್ಯವಾಗಿ ಮಧ್ಯಾಹ್ನ

ದಲ್ಲಿ ಅಥವಾ ಸಂಜೆ ಬರಬಹುದು. ಗೃಹಸ್ಥನು ಅತಿಥಿಯು ಬರಬಹುದೆಂಬ ಊಹೆಯಿಂದ ಮಧ್ಯಾಹ್ನದ ಊಟಕ್ಕೆ ಮೊದಲು ಹೊರಬಾಗಿಲನ್ನು ತೆರೆದು ಸ್ವಲ್ಪ ಹೊತ್ತು ಕಾಯಬೇಕೆಂದು ಶಾಸ್ತ್ರವಿಧಿಯಿದೆ. ಅದರಂತೆ ನಡೆದುಕೊಳ್ಳುವವರು ಈಗಲೂ ಇದ್ದಾರೆ. ಹಾಗೆಯೇ ಸಂಜೆಯ ಹೊತ್ತು ಹೆಬ್ಬಾಗಿಲನ್ನು ತೆರೆದಿರಬೇಕೆಂದು, ದೀಪವನ್ನು ಹಚ್ಚಬೇಕೆಂದೂ ಹೇಳುವುದು ಅತಿಥಿಯ ಬರುವಿನ ನಿರೀಕ್ಷೆಯಿಂದಲೇ. ಹೀಗೆ ಬಂದ ಅತಿಥಿಯನ್ನು ಗೌರವದಿಂದ ಸತ್ಕರಿಸುವುದು ನಮ್ಮ ಸಂಸ್ಕೃತಿ. ಬಂದ ಅತಿಥಿಯನ್ನು ಸ್ವಾಗತಿಸಿ ಕುಳ್ಳಿರಿಸುತ್ತಾರೆ. ಅನಂತರ ಗೃಹಿಣಿಯು ಬಂದು ತಂಬಿಗೆ ನೀರನ್ನು ತಂದು ಅತಿಥಿಯ ಮುಂದಿಟ್ಟು ನಮಸ್ಕರಿಸಿ ಹೋಗುತ್ತಾಳೆ. ಈ ಪದ್ಧತಿ ಈಗಲೂ ಕೆಲವು ಪ್ರದೇಶದಲ್ಲಿದೆ. ಒಂದು ವೇಳೆ ಗೃಹಸ್ಥನು ಬಡವನಾಗಿದ್ದು ಅತಿಥಿಯನ್ನು ಉಪಚರಿಸಲು ಅಶಕ್ತನಾದರೆ ಏನು ಮಾಡಬೇಕು? ಧರ್ಮಶಾಸ್ತ್ರ ಹೇಳುತ್ತದೆ.

ತೃಣಾನಿ ಭೂಮಿರುದಕಂ ವಾಕ್ ಚತುರ್ಥೀ ಚ ಸೂನೃತಾ।
ಏನಾನಿತುಸತಾಂ ಗೇಹೇ ನ ಕ್ಷೀಯಂತೇ ಕದಾಚನ॥

ಕುಳಿತುಕೊಳ್ಳಲು ಹುಲ್ಲಿನ ಚಾಪೆ, ನೆಲ, ನೀರು, ನಾಲ್ಕನೆಯದಾಗಿ ಒಂದು ಒಳ್ಳೆಯ ಮಾತು. ಇವು ಸಜ್ಜನರ ಮನೆಗಳಲ್ಲಿ ಎಂದೂ ಇಲ್ಲದೆ ಹೋಗುವುದಿಲ್ಲ.

"**ಮಾತೃದೇವೋ ಭವ**" ಎಂಬುದು ಇನ್ನೊಂದು ವಾಕ್ಯ. ಇಲ್ಲಿಯೂ ತಾಯಿಯನ್ನು ದೇವಿಯನ್ನು ಪೂಜಿಸುವಂತೆ ಗೌರವಿಸು ಎಂದು ವಾಕ್ಯಾರ್ಥ. ನವಮಾಸಗಳವರೆಗೆ ಗರ್ಭವನ್ನು ಹೊತ್ತು ತನ್ನ ರಕ್ತದಿಂದಲೇ ಆ ಮಗುವನ್ನು ತಾಯಿ ಪೋಷಿಸಿರುತ್ತಾಳೆ. ಅನಂತರ ವರ್ಣಿಸಲು ಅಶಕ್ಯವಾದ ಯಾತನೆಯನ್ನು ಅನುಭವಿಸುತ್ತಾ ಪ್ರಸವಿಸಿ ವಾತ್ಸಲ್ಯದಿಂದ ಸಾಕುತ್ತಾಳೆ. ವರ್ಷಗಟ್ಟಲೆ ಆ ಮಗುವಿನೊಡನೆ ಕೊಳಕು ಹಾಸಿಗೆಯಲ್ಲಿ ಮಲಗಿ ನಿದ್ರೆಗೆಟ್ಟು ಮಗುವನ್ನು ಸಾಕುತ್ತಾಳೆ. ಆ ಶಿಶು ದೊಡ್ಡದಾಗುವವರೆಗೂ ಅವಳ ಪ್ರೀತಿಯ ಪಾಲನಾ ಕಾರ್ಯ ಒಂದೇ ಸಮನೆ ನಡೆದೇ ಇರುತ್ತದೆ. ಇಷ್ಟು ಉಪಕಾರವನ್ನು ಮಾಡಿರುವ ತಾಯಿ ಪುತ್ರನಿಗೆ ಪ್ರತ್ಯಕ್ಷ ದೇವತೆಯಲ್ಲದೇ ಇನ್ನೇನಾದಾಳು? ಅವಳು ಬದುಕಿರುವವರೆಗೂ ಆಕೆಯ ಸೇವೆಯನ್ನು ಮಾಡಿದರೂ ಮಾತೃಋಣವು ತೀರುವುದಿಲ್ಲ. ಕಾರಣಾಂತರದಿಂದ ಪುತ್ರನು ದುಷ್ಟನಾಗಿ ಅವಳನ್ನು ದ್ವೇಷಿಸಬಹುದು. ಆದರೆ ತಾಯಿಯಾದವಳು ಹಡೆದ ಮಗನಿಗೆ ಎಂದೂ ಕೇಡನ್ನು ಬಯಸುವುದಿಲ್ಲ. ಆದ್ದರಿಂದಲೇ ಶ್ರೀ ಶಂಕರಾಚಾರ್ಯರು "**ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ**" ಎಂದು ಹೇಳಿದ್ದಾರೆ. ತಾವು ಸಂನ್ಯಾಸಿಗಳಾದರೂ ತಾಯಿಯ ಅನಾರೋಗ್ಯದ ವಿಷಯವನ್ನು ತಿಳಿದು, ಸ್ವಗ್ರಾಮವಾದ ಕಾಲಟಿಗೆ ಧಾವಿಸಿ ಬಂದರು. ತಾಯಿ ಆರ್ಯಾಂಬೆ ಮರಣ ಹೊಂದಲಾಗಿ ದಾಯಾದಿಗಳು ಯಾರೂ ಅವಳ ಉತ್ತರ ಕ್ರಿಯೆಯನ್ನು ಮಾಡಲು ಬರಲಿಲ್ಲ. ಇದರಿಂದ ತುಂಬ ಬೇಸರಗೊಂಡ ಆಚಾರ್ಯರು ತಾಯಿಯ ಉತ್ತರ ಕ್ರಿಯೆಯನ್ನು ಸ್ವತಃ ತಾವೇ ಮಾಡಿದರು. ಸಂನ್ಯಾಸ ಧರ್ಮಕ್ಕೆ ಇದು ವ್ಯತಿರಿಕ್ತವಾದರೂ ಅದನ್ನು ಮಾತೃಗೌರವದಿಂದ ಲೆಕ್ಕಿಸಲಿಲ್ಲ. ಮನುಸ್ಮೃತಿಯಲ್ಲಿ "**ಪಿತು ರ್ದಶಗುಣಂ ಮಾತಾ ಗೌರವೇಣಾತಿರಿಚ್ಯತೇ**" ಎಂದು ಹೇಳಿದ್ದಾರೆ. ತಂದೆಗಿಂತ ಹತ್ತರಷ್ಟು ಗೌರವವು ತಾಯಿಗೆ ಸಲ್ಲುತ್ತದೆ ಎಂದು ಅದರ ಅಭಿಪ್ರಾಯ. ಆದ್ದರಿಂದಲೇ ಸಂನ್ಯಾಸಿಯಾದ ಪುತ್ರನಿಗೆ ತಾಯಿ ನಮಸ್ಕರಿಸಕೂಡದೆಂದು ಸಂನ್ಯಾಸಿಯೇ ತಾಯಿಗೆ ನಮಸ್ಕರಿಸಬೇಕೆಂದೂ ಶಿಷ್ಟಾಚಾರವಿದೆ. ಹೀಗೆ ಮಾತೃ ಸೇವೆಯೆಂಬುದು ಭಾರತೀಯರ ಒಂದು ಉತ್ತಮ ಸಂಸ್ಕೃತಿಯಾಗಿದೆ. ಹೀಗೆಯೇ '**ಪಿತೃದೇವೋಭವ, ಆಚಾರ್ಯ ದೇವೋ ಭವ**' ಎಂಬ ವಾಕ್ಯಗಳಿಗೂ ಅರ್ಥ ಮಾಡಿಕೊಳ್ಳಬೇಕು. ವೃದ್ಧರಾದ ಮಾತಾಪಿತೃಗಳ ಸೇವೆ, ಅವರ ಪೋಷಣೆ ಮುಂತಾದ ಕರ್ತವ್ಯಗಳನ್ನು ಮಕ್ಕಳು ಮಾಡಬೇಕು ಎಂಬುದು ಉತ್ತಮವಾದ ಸಂಸ್ಕೃತಿಯ ಲಕ್ಷಣ. ಈಗಲೂ ಈ ಪದ್ಧತಿಯನ್ನು ನಮ್ಮ ದೇಶದಲ್ಲಿ ಯಥೇಚ್ಛವಾಗಿ ಕಾಣಬಹುದು. ಈಗಿನ ವಿಜ್ಞಾನ ಪೋಷಿತವಾದ ನವನಾಗರಿಕತೆ ಹುಟ್ಟಿದ ಮೇಲೆ ವೃದ್ಧಾಶ್ರಮಗಳು ಅಲ್ಲಲ್ಲಿ ಹುಟ್ಟಿಕೊಂಡವು. ಇದೊಂದು ಉದಾಹರಣೆ.

ಉಪಾಧ್ಯಾಯರನ್ನು ಭಕ್ತಿಯಿಂದ ಗೌರವಿಸುವುದು ಶಿಷ್ಯರ ಕರ್ತವ್ಯವಾಗಿದೆ. ಗುರುವು ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕನಾಗಿರಬಹುದು. ಶಿಷ್ಯನು ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿ ಪದವೀಧರನಾಗಿ ದೊಡ್ಡ ಹುದ್ದೆಯನ್ನು ಅಲಂಕರಿಸಿರಬಹುದು. ಆದರೂ ಪ್ರಾಥಮಿಕ ಶಾಲೆಯಲ್ಲಿ ಅಕ್ಷರಾಭ್ಯಾಸ ಮಾಡಿಸಿ ಜ್ಞಾನದ್ವಾರವನ್ನು ತೆಗೆಸಿಕೊಟ್ಟವನು ಪ್ರಾಥಮಿಕ ಶಾಲೆಯ ಉಪಾಧ್ಯಯನೇ. ಆತನಿಗೆ ಪದವೀಧರನಿಂದಲೂ ಗೌರವ ಸಲ್ಲಬೇಕು. ಹಾಗೆ ಸಲ್ಲುತ್ತಿರುವುದನ್ನು ನಮ್ಮ ಭಾರತ ದೇಶದಲ್ಲಿ ಅಲ್ಲಲ್ಲಿ ನೋಡಬಹುದು.

ವೇದವು '**ಸತ್ಯಂ ವದ ಧರ್ಮಂ ಚರ**' ಮುಂತಾದ ಹಲವಾರು ಉಪದೇಶಗಳನ್ನು ಜನತೆಗಾಗಿ ನೀಡಿದೆ. ಇದೇ ನೀತಿ ದೇಶಾಂತರಗಳಲ್ಲಿಯೂ ಹರಡಿರುತ್ತದೆ. ಭಾರತೀಯರಿಂದ ಈ ನೀತಿಯನ್ನು ವಿದೇಶಿಯರು ಕಲಿತುಕೊಂಡಿರಬಹುದು. ಮನುಸ್ಮೃತಿಯಲ್ಲಿ

ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ।
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ॥

ಎಂಬ ಉಪದೇಶವು ದೊರೆಯುತ್ತದೆ. " **ಈ ಭಾರತದೇಶದಲ್ಲಿ ಹುಟ್ಟಿದ ಬ್ರಾಹ್ಮಣನಿಂದ ಜಗತ್ತಿನಲ್ಲಿರುವ ಎಲ್ಲ ಮನುಷ್ಯರೂ ತಮ್ಮ ತಮ್ಮ ನಡತೆಗಳನ್ನು ಕಲಿತುಕೊಳ್ಳಬೇಕು**" ಎಂದು ಈ ಶ್ಲೋಕದ ತಾತ್ಪರ್ಯ. ಈವೊಂದು ಮಾನವ ಸಂಸ್ಕೃತಿಯು ನಾನಾ ರೂಪದಲ್ಲಿ ಈಗ ದೊರೆಯುತ್ತಿರುವುದಕ್ಕೆ ವೇದವೇ ಮೂಲವೆಂದು ಹೇಳಬಹುದು. ಸತ್ಯಮಾರ್ಗ, ಗುರುಹಿರಿಯರಲ್ಲಿ ವಿಧೇಯತೆ, ಪರೋಪಕಾರ, ಅಹಿಂಸೆ ಮುಂತಾದವು ಮಾನವನ ಚಿತ್ತ ಸಂಸ್ಕಾರದ ಫಲವೆಂಬುದು ಸ್ಪಷ್ಟವಾಗಿದೆ. ಚಿತ್ತ ಸಂಸ್ಕಾರವು ಸ್ವತಃ ಬರತಕ್ಕದ್ದಲ್ಲ. ಡಾರ್ವಿನ್ನನ ವಿಕಾಸವಾದದಂತೆ ಮನುಷ್ಯನು ಕ್ರಮವಾಗಿ ಉತ್ತಮ ಸಂಸ್ಕಾರವನ್ನು ಪಡೆದು ಸತ್ಪುರುಷನಾಗುತ್ತಾನೆ ಎಂಬುದು ವಿಶ್ವಸನೀಯವಲ್ಲ. ಇಂದಿಗೂ ಜನಸಂಪರ್ಕವಿಲ್ಲದ ಕಾಡು ಜನರು ಭಾರತ, ಆಫ್ರಿಕಾ, ದಕ್ಷಿಣ ಅಮೇರಿಕಾ ಮುಂತಾದ ದೇಶಗಳಲ್ಲಿ ಕಂಡುಬರುತ್ತಾರೆ. ಅವರ ಬಾಳು ಮಂಗಗಳ ಬಾಳಿನಂತೆ ಇದೆಯೇ ಹೊರತು ಶಿಷ್ಟನಾದ ಒಬ್ಬ ನಾಗರಿಕನ ಬಾಳಿನಂತೆ ಇಲ್ಲ. ವಿಕಾಸವಾದದಂತೆ ಅವರೇಕೆ ಇನ್ನೂ ವಿಕಾಸಗೊಂಡಿಲ್ಲ? ಎಂಬ ಪ್ರಶ್ನೆಗೆ ಸರಿಯಾದ ಉತ್ತರ ದೊರೆಯುವುದಿಲ್ಲ.

ಇನ್ನು ನಮ್ಮ ಸಂಸ್ಕೃತಿಯನ್ನು ರೂಪಿಸಿದವು ರಾಮಾಯಣಾದಿ ಗ್ರಂಥಗಳು. ಹಾಗೆಯೇ ಸುಭಾಷಿತ ಗ್ರಂಥಗಳು. ಕಾಳಿದಾಸಾದಿ ಮಹಾಕವಿಗಳ ಕಾವ್ಯಗಳೂ ಸಹ ವೈದಿಕ ಸಂಸ್ಕೃತಿಯನ್ನು ವಿಸ್ತರಿಸುವುದಕ್ಕೆ ತುಂಬ ಸಹಾಯ ಮಾಡಿರುತ್ತವೆ. ಕಾವ್ಯದ ಉದ್ದೇಶಗಳಲ್ಲಿ "**ಕಾಂತಾಸಂಮಿತತಯಾ ಉಪದೇಶಯುಜೇ**" ಎಂಬ ಅಲಂಕಾರಿಕರ ನುಡಿಯು ಇದಕ್ಕೆ ಸಾಕ್ಷಿಯಾಗಿದೆ.

ಅಜ್ಞಾನಾದ್ಯದಿ ವಾ ಜ್ಞಾನಾತ್ಕೃತ್ವಾ ಕರ್ಮ ವಿಗರ್ಹಿತಮ್ । ತಸ್ಮಾದ್ವಿಮುಕ್ತಿಮನ್ವಿಚ್ಛನ್ ದ್ವಿತೀಯಂ ನ ಸಮಾಚರೇತ್ ॥

(ಮನುಸ್ಮೃತಿ, 11-232)

ತಿಳಿದಾಗಲೀ ತಿಳಿಯದೇ ಆಗಲಿ ನಿಂದಿತವಾದ ಕರ್ಮವನ್ನು ಮಾಡಿದಮೇಲೆ, ಆ ಪಾಪಕರ್ಮದಿಂದ ಬಿಡುಗಡೆಯಾಗಬೇಕಾದರೆ ಮತ್ತೊಮ್ಮೆ ಅಂಥ ಕೆಲಸವನ್ನು ಮಾಡಬಾರದು.

ಅತಿವಾದಾಂಸ್ತಿತಿಕ್ಷೇತ ನಾವಮನ್ಯೇತ ಕಂಚನ । ನಚೇಮಂ ದೇಹಮಾಶ್ರಿತ್ಯ ವೈರಂ ಕುರ್ವೀತ ಕೇನಚಿತ್ ॥

(ಮನುಸ್ಮೃತಿ, 6-87)

ಬೇರೆಯವರು ಅತಿಕ್ರಮಿಸಿ ಮಾತನಾಡಿದರೂ ಸಹಿಸಬೇಕು. ಯಾರನ್ನೂ ಅವಮಾನಗೊಳಿಸಬಾರದು. ಅನಿಶ್ಚಿತವಾದ ಈ ಶರೀರಕ್ಕಾಗಿ ಯಾರೊಡನೆಯೂ ಹಗೆತನವಿರಬಾರದು.

ಅತಿಸಾಹಸಮತಿದುಷ್ಕರಮತ್ಯಾಶ್ಚರ್ಯಂ ಚ ದಾನಮರ್ಥಾನಾಮ್। ಯೋ ಹಿ ದದಾತಿ ಶರೀರಂ ನ ದದಾತಿ ಸ ವಿತ್ತಲೇಶಮಪಿ ॥

ಸುಭಾಷಿತಸುಧಾನಿಧಿ (ಕಲಾವಿಲಾಸ)

ಹಣವನ್ನು ದಾನಮಾಡುವುದು ದೊಡ್ಡ ಸಾಹಸ, ಅತ್ಯಂತ ಕಠಿಣವಾದ ಕೆಲಸ ಇದು; ಇದು ಅತ್ಯಂತ ಆಶ್ಚರ್ಯಕರವಾದುದು. ಏಕೆಂದರೆ, ತನ್ನ ದೇಹವನ್ನಾದರೂ ಒಬ್ಬನು ತ್ಯಜಿಸಿಯಾನು, ಸ್ವಲ್ಪ ಹಣವನ್ನು ಮಾತ್ರ ಅವನು ಕೊಡುವುದಿಲ್ಲ.

ಅಂಧಃ ಸ ಏವ ಶ್ರುತವರ್ಜಿತೋ ಯಃ ಶಠಃ ಸ ಏವಾರ್ಥಿನಿರರ್ಥಕೋ ಯಃ ।
ಮೃತಃ ಸ ಏವಾಸ್ತಿ ಯಶೋ ನ ಯಸ್ಯ ಧರ್ಮೇ ನ ಧೀರ್ಯಸ್ಯ ಸ ಏವ ಶೋಚ್ಯಃ ॥

(ಚತುರ್ವರ್ಗಸಂಗ್ರಹ, 1-8)

ವಿದ್ಯೆ ಇಲ್ಲದವನೇ ಕುರುಡ. ಯಾಚಕರಿಗೆ ಏನನ್ನೂ ಕೊಡದವನೇ ದುಷ್ಟ. ಕೀರ್ತಿಯನ್ನು ಗಳಿಸದವನು ಮೃತನೇ ಸರಿ. ಧರ್ಮದಲ್ಲಿ ಯಾರಿಗೆ ಆಸಕ್ತಿ ಇಲ್ಲವೋ ಅವನು ಶೋಚನೀಯ.

ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ । ನಿತ್ಯಂ ಸಂನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ ॥

(ಸ್ವಯೋಚಿತ ಪದ್ಯಮಾಲಿಕಾ)

ದೇಹಗಳು ನಶ್ವರವಾದವು. ಸಂಪತ್ತು ಶಾಶ್ವತವಲ್ಲ, ಮೃತ್ಯು ಸದಾ ಸಮೀಪದಲ್ಲೇ ಇರುತ್ತದೆ. ಆದ್ದರಿಂದ ಒಳ್ಳೆಯ ಕೆಲಸವನ್ನು ಹೆಚ್ಚಾಗಿ ಮಾಡಬೇಕು.

ಹಿಂದೂ ಧರ್ಮ : ಒಂದು ಒಳನೋಟ

ಡಾ॥ ಹೆಚ್.ವಿ. ನರಸಿಂಹಮೂರ್ತಿ
ಕುಂದಾಪುರ

ಅನೇಕ ಜಾತಿ-ಮತ-ಪಂಥಗಳನ್ನೊಳಗೊಂಡ ನಮ್ಮ ಹಿಂದೂ ಧರ್ಮ ವಿಶ್ವವಿಶಾಲ ಹರಹುಳ್ಳ, ಶಾಖೋಪಶಾಖೆ ಗಳಿಂದ ಕೂಡಿದ ಒಂದು ಮಹಾವಟವೃಕ್ಷ. ಅನೇಕ ರೆಂಬೆ - ಕೊಂಬೆಗಳಂತಿರುವ ಜಾತಿ - ಮತ - ಪಂಥಗಳಿಗೆ ಜೀವ ಸ್ರೋತವಾಗಿ, ಪ್ರಾಣಸ್ಪಂದಿಯಾಗಿ, ಶಕ್ತಿದಾಯಿಯಾಗಿ, ಪುಷ್ಟಿವರ್ಧಿನಿಯಾಗಿ ತಾಯಿ ಬೇರಿನಂತಿದೆ ಈ ಹಿಂದೂ ಧರ್ಮ. ಇಹವನ್ನು ಹಳಿಯದೆ, ಪರವನ್ನು ಬಿಡದೆ, ಸುಂದರ ಸುವ್ಯವಸ್ಥಿತ ಸಾರ್ಥಕ ಜೀವನ ಕಲೆಯ ತತ್ತ್ವಗಳನ್ನುಳ್ಳ - ಉಚ್ಚ ಜೀವನ ಮೌಲ್ಯವನ್ನು ಪ್ರತಿಪಾದಿಸುವ ಹಿರಿಯ ಧರ್ಮ ಇದು. ವ್ಯಕ್ತಿ - ವ್ಯಕ್ತಿಗಳನ್ನು ಒಂದುಗೂಡಿಸಿ, ಶಾಂತಿ ಸಹನೆ - ಸೌಹಾರ್ದದಿಂದ ಬಾಳುವಂತೆ ಮಾಡಿ - ಬದುಕನ್ನು ಬಂಗಾರವಾಗಿಸುವ ಉದಾತ್ತ ಧರ್ಮ, ಈ ಹಿಂದೂ ಧರ್ಮ.

ವಿಶಿಷ್ಟ ಹೆಸರು: '**ಸನಾತನ ಧರ್ಮ**' ಎಂಬುದು ಹಿಂದೂ ಧರ್ಮದ ನಿಜವಾದ ಹೆಸರು. '**ಸನಾ ಆತನೋತಿ ಇತಿ ಸನಾತನಃ**' - ಅಂದರೆ ಬದುಕನ್ನು ಬಂಗಾರಗೊಳಿಸುವ ಶಾಶ್ವತ ಮೌಲ್ಯಗಳುಳ್ಳದ್ದರಿಂದ ಇದು ಸನಾತನ ಧರ್ಮ ("**ಏಷ ಧರ್ಮಃ ಸನಾತನಃ**" ಮನು). ವೇದ ಪ್ರಣೀತ ಧರ್ಮವಾದ್ದರಿಂದ '**ವೈದಿಕ ಧರ್ಮ**' '**ಆರ್ಯಧರ್ಮ**' ಎಂಬುದು ಸನಾತನ ಧರ್ಮದ ಮತ್ತೊಂದು ಹೆಸರು. ಈ '**ಆರ್ಯ**' ಎಂಬ ಪದವೇ ಬಹಳ ವಿಶಿಷ್ಟವಾದುದು. ಏನೆಲ್ಲ ಸಭ್ಯತೆ, ಸಂಸ್ಕೃತಿ, ಶ್ರೇಷ್ಠತೆಯುಂಟೋ ಅವೆಲ್ಲವನ್ನು ಮೈಗೂಡಿಸಿಕೊಂಡವ '**ಆರ್ಯ**'. (ಕುಲಂ ಶೀಲಂ ದಯಾ ದಾನಂ ಸತ್ಯಧರ್ಮಃ ಕೃತಜ್ಞತಾ। ಅದ್ರೋಹ ಇತಿ ಏಷ್ವೇತತ್ ತಾನಾರ್ಯಾನ್ ಸಂ ಪ್ರಚಕ್ಷತೇ ॥) ಅಂಥವನು ಯಾವ ಜಾತಿ - ಮತ - ಪಂಥದವನಾದರೇನು? ಅವನ ಬಣ್ಣ ಕಪ್ಪೋ, ಬಿಳುಪೋ, ಕೆಂಪೋ ಆಗಿದ್ದರೇನು? ಅವನು ತನ್ನ ದೇಶದವನಲ್ಲದ್ದರೇನು? ಹೊರದೇಶದವನಲ್ಲದ್ದರೇನು? ಅವನು ಎಂದೆಂದೂ ಆರ್ಯನೇ. ಇಂತಹ ಆರ್ಯನು ಯಾವ ವಿಶಿಷ್ಟ ಜೀವನ ವಿಧಾನ ಅನುಸರಿಸುವನೋ (ಕರ್ತವ್ಯಮಾಚರನ್ ಕರ್ಮ ಅಕರ್ತವ್ಯ ಮನಾಚರನ್ । ತಿಷ್ಠತಿ ಪ್ರಕೃತಾಚಾರೇ ಸವಾ ಆರ್ಯ ಇತಿ ಸ್ಮೃತಃ॥) ಅದೇ ಆರ್ಯಧರ್ಮ.

ಹಾಗಾದರೆ ಈ ಸನಾತನ - ಆರ್ಯ - ವೈದಿಕ ಧರ್ಮಕ್ಕೆ 'ಹಿಂದೂ ಧರ್ಮ'ವೆಂದು ಹೆಸರು ಬಂದುದು ಹೇಗೆ? ಸಿಂಧೂ ನದಿ ಬಯಲಿನಲ್ಲಿ ನಮ್ಮ ಹಿರಿಯರು ನೆಲೆಸಿದ್ದರಷ್ಟೆ ! ಪರ್ಷಿಯನ್ನರು ನಮ್ಮ ಆರ್ಯಭೂಮಿಯ ಒಂದು ಭಾಗವಾದ ಸಿಂಧೂ ನದಿಯ ಬಯಲಿಗೆ ಬಂದರು. ತಿಳಿ ನೀರಿನಿಂದ ತುಂಬಿ ಜುಳು ಜುಳು ಹರಿಯುವ ಸಿಂಧೂ ನದಿಯನ್ನು ಕಂಡು ಕೈ ಮುಗಿದರು. ಅವರ ಭಾಷೆಯ ಉಚ್ಚಾರಣೆಯಲ್ಲಿ ಸಂಸ್ಕೃತದ '**ಸ**' ಕಾರವೆಲ್ಲ '**ಹ**' ಕಾರವಾಗುತ್ತದೆ. ಹಾಗಾಗಿ '**ಸಿಂಧೂ**' ಎಂಬ ಪದ ಅವರ ಬಾಯಲ್ಲಿ '**ಹಿಂದೂ**' ಆಯಿತು. ಸಿಂಧೂ ನದಿಯ ಬಯಲಿನ ಆರ್ಯರು ಆಚರಿಸುತ್ತಿದ್ದ ಧರ್ಮ '**ಹಿಂದೂ ಧರ್ಮ**' ಆಯಿತು. ಇದು ವೇದಾಂತ ಕೇಸರಿ ಸ್ವಾಮಿ ವಿವೇಕಾನಂದರ ಅಭಿಪ್ರಾಯ. (The complete works of Swami Vivekananda - Vol III: Page 228).

ಹಿಂದೂ ಧರ್ಮ ಎಂಬುದು ಬೇರೆಯವರು ಕೊಟ್ಟ ಹೆಸರಲ್ಲ; ನಮ್ಮವರೇ ಇಟ್ಟ ಹೆಸರು ಎಂಬುದು ಕೆಲವರ ಅಭಿಮತ. ಅವರ ಅರ್ಥದಲ್ಲಿ '**ಹೀನಂ ದೂಷಯತಿ ಇತಿ ಹಿಂದುಃ**' - ಹೀನವಾದುದನ್ನು, ದೂಷ್ಯವಾದುದನ್ನು - ದೂಷಿಸುವವನು ಹಿಂದು. ಅವನು ಅನುಸರಿಸುವ ಉದಾತ್ತ ಜೀವನ ವಿಧಾನ ಹಿಂದೂ ಧರ್ಮ. '**ಹಿಮಾಲಯಂ ಸಮಾರಭ್ಯ ಯಾವದಿಂದು ಸರೋವರಂ ' ತಂ ದೇವ ನಿರ್ಮಿತಂ ದೇಶಂ ಹಿಂದೂ ಸ್ಥಾನಂ ಪ್ರಚಕ್ಷತೇ**'" - ಎಂದು ಬೃಹಸ್ಪತಿ ಆಗಮದಲ್ಲಿ ಬರುವ ಈ ಶ್ಲೋಕ ಹಿಂದೂ ದೇಶದ ಗಡಿಯನ್ನು ಗುರುತಿಸುತ್ತದೆ. ಮಾತ್ರವಲ್ಲ, ದೇವ ನಿರ್ಮಿತವಾದ ಮತ್ತು ಹಿಮಾಲಯದಿಂದ ಇಂದು ಸರೋವರದವರೆಗೆ ವ್ಯಾಪಿಸಿರುವ ದಿವ್ಯ-ಭವ್ಯ ಪ್ರದೇಶವೇ '**ಹಿಂದೂ ದೇಶ**' ಎಂದು ಸೂಚಿಸುತ್ತದೆ. ಒಟ್ಟಿನಲ್ಲಿ ಹೆಸರು ಏನೇ ಇರಲಿ, ಹೇಗೇ ಬಂದಿರಲಿ - ಪ್ರತಿಯೊಬ್ಬ ಮಾನವನ ವ್ಯಕ್ತಿತ್ವವು ಪೂರ್ಣ ಪ್ರಮಾಣದಲ್ಲಿ ವಿಕಾಸಗೊಂಡು, ಇಂದಲ್ಲ ನಾಳೆ, '**ಜೀವ**'ನು '**ದೇವ**' ನಾಗುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿರುವ ಜೀವನ ವಿಕಾಸ ವಿಧಾನವೇ ಸನಾತನ ಹಿಂದೂ ಧರ್ಮ.

ಅನಾದಿ - ಅನಂತ : ಜಗತ್ತಿನ ಯಾವುದೇ ಇತರ ಧರ್ಮವನ್ನು ಪರಿಶೀಲಿಸಿದರೂ ಅದಕ್ಕೊಬ್ಬ ಸಂಸ್ಥಾಪಕನಿರುವುದು ಕಂಡು ಬರುತ್ತದೆ. ಅವನ ಹೆಸರಿನಲ್ಲಿ ಆ ಧರ್ಮ ಪ್ರಸಾರವಾಗಿ ಬೆಳಕಿಗೆ ಬರುತ್ತದೆ. ಕ್ರಿಸ್ತನಿಂದ ಕ್ರೈಸ್ತ ಧರ್ಮ. ಮೊಹಮ್ಮದನಿಂದ ಇಸ್ಲಾಂ ಧರ್ಮ. ಹಾಗೆಯೇ ಇತರ ಧರ್ಮಗಳೂ ಸಹ. ಆದರೆ ನಮ್ಮ ಸನಾತನ ಹಿಂದೂ ಧರ್ಮಕ್ಕೆ ಯಾರೋ ಒಬ್ಬ ಸಂಸ್ಥಾಪಕನಾಗಲಿ, ಪ್ರವರ್ತಕನಾಗಲಿ ಇಲ್ಲದೆ ಇರುವುದೇ

ಅದರ ವೈಶಿಷ್ಟ್ಯ. ಪ್ರಾಚೀನ ಭಾರತದಲ್ಲಿ ವ್ಯಕ್ತಿಗಲ್ಲ ಪುರಸ್ಕಾರ, ತತ್ತ್ವಕ್ಕೆ! ಪ್ರಪಂಚದ ಯಾವುದೇ ಭಾಗದಲ್ಲಿ ಇನ್ನೂ ಸಂಸ್ಕೃತಿ - ನಾಗರಿಕತೆಗಳು ಮೂಡದೆ ಇದ್ದ ಅಂಧಕಾರ ಕಾಲ! ಆದರೆ ಆಗಲೇ ಪವಿತ್ರ ಭಾರತದಲ್ಲಿ ಉನ್ನತ ಮಟ್ಟದ ಸಂಸ್ಕೃತಿ - ಸಭ್ಯತೆಗಳು ಅರಳಿ ಜಗತ್ತಿಗೇ ತಮ್ಮ ಸೌರಭ ಬೀರುತ್ತಿದ್ದುವು. ಜನ ಸಾಮಾನ್ಯರೂ ಸಹ ಜೀವ, ಜಗತ್ತು, ಈಶ್ವರ - ಈ ಮೂರರ ಕುರಿತು ಚಿಂತಿಸುತ್ತಿದ್ದರು. ಅಂದಾಗ ಈ ಹಿಂದೂ ಧರ್ಮ ಎಷ್ಟೊಂದು ಪ್ರಾಚೀನ ಎಂಬುದನ್ನು ಯೋಚಿಸಲೂ ಸಹ ಆಗುವುದಿಲ್ಲ. ಕ್ರಿಸ್ತ, ಮೊಹಮ್ಮದ ಇವರೆಲ್ಲ ಐತಿಹಾಸಿಕ ವ್ಯಕ್ತಿಗಳು ಅವರು ಪ್ರತಿಪಾದಿಸಿದ ಧರ್ಮಗಳು ಆರಂಭವಾದ ಕಾಲ, ಅವರ ಬೈಬಲ್, ಕುರಾನ್ ಗ್ರಂಥಗಳು ಬರೆಯಲ್ಪಟ್ಟ ಕಾಲಗಳನ್ನು ಗುರುತಿಸಬಹುದು. ಆದರೆ ಈ ಐತಿಹಾಸಿಕ ಕಾಲಕ್ಕಿಂತ ಸಹಸ್ರಾರು ವರ್ಷಗಳ ಹಿಂದೆ ನಮ್ಮ ಋಷಿಮುನಿಗಳು ಪವಿತ್ರ ವೇದಗಳನ್ನು ಸಾಕ್ಷಾತ್ಕರಿಸಿಕೊಂಡು ಮಂತ್ರ ದ್ರಷ್ಟಾರರಾಗಿದ್ದರು. ಒಬ್ಬ ಸಂತನಿಂದಲೋ, ಮಹಾತ್ಮನಿಂದಲೋ ರಚಿಸಲ್ಪಡದೆ ಸಹಸ್ರ - ಸಹಸ್ರ ಋಷಿಮುನಿಗಳು, ಸಾಧು - ಸಂತರು, ದಾರ್ಶನಿಕರು, ತಮ್ಮ ಆತ್ಮವೆಂಬ ಪ್ರಯೋಗ ಶಾಲೆ ಯಲ್ಲಿ ಸಂಶೋಧಿಸಿ, ತಾವು ಕಂಡುಂಡ ಸತ್ಯವನ್ನು ಪ್ರತಿಪಾದಿಸಿ, ಲೋಕಸಂಗ್ರಹಾರ್ಥವಾಗಿ ಪೀಳಿಗೆಯಿಂದ ಪೀಳಿಗೆಗೆ ದತ್ತಿ ಬಿಟ್ಟು ಹೋಗಿರುವ ಅಧ್ಯಾತ್ಮ ನಿಧಿಯ, ಜೀವನಮೌಲ್ಯಗಳ ಒಟ್ಟು ಮೊತ್ತವೇ ವೇದ. ಜ್ಞಾನಾರ್ಥವಾದ **'ವಿದ್'** ಧಾತುವಿನಿಂದ **'ವೇದ'** ಶಬ್ದ ಮೂಡಿ ಬಂದಿದೆ. ಯಾವ ಒಂದನ್ನು ತಿಳಿದರೆ ಬೇರೆಲ್ಲದರ ತಿಳುವಳಿಕೆಯಾಗುವುದೋ (ಯಸ್ಮಿನ್ ಖಲು ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ) ಆ ತಿಳಿವನ್ನು ವೇದವು ಪ್ರತಿಪಾದಿಸುತ್ತದೆ. ಈ ವೇದವು ಅಪೌರುಷೇಯ; ಅನಾದಿ. ಆದಿ ಇದ್ದರೆ ತಾನೇ ಅಂತ್ಯ. ಹಾಗಾಗಿ ವೇದದ ತಳಹದಿಯ ಮೇಲೆ ಭದ್ರವಾಗಿ ನಿಂತಿರುವ ಸನಾತನ ಧರ್ಮವೂ ಅನಾದಿ; ಅನಂತ.

ಆಕರ ಗ್ರಂಥಗಳು: ಈ ವೇದಗಳು ಮಾತ್ರವಲ್ಲದೆ ಉಪನಿಷತ್ತು, ಬ್ರಹ್ಮ ಸೂತ್ರ ಮತ್ತು ಭಗವದ್ಗೀತೆಗಳು ಸನಾತನ ಹಿಂದೂ ಧರ್ಮದ ಆಕರ ಗ್ರಂಥಗಳು. ಆಚಾರ್ಯತ್ರಯ ರಿಂದಲೂ, ಮಾನ್ಯತೆ ಪಡೆದ ಪ್ರಸ್ಥಾನ ತ್ರಯಗಳು. ಇವು ರಾಮಾಯಣ - ಮಹಾಭಾರತಗಳು, ಹಿಂದೂ ಸಮಾಜದ ಮತ್ತು ಸಂಸ್ಕೃತಿಯ ಇತಿಹಾಸಗಳಾಗಿ ಸನಾತನ ಧರ್ಮದ ಆಧಾರ ಗ್ರಂಥಗಳಾಗಿವೆ. ಮನು - ಯಾಜ್ಞವಲ್ಕ್ಯ - ಪರಾಶರ ಸ್ಮೃತಿಗಳು, ಶ್ರೀಮದ್ಭಾಗವತವನ್ನು ಒಳಗೊಂಡ ಪುರಾಣಗಳು ಮತ್ತು ಉಪಪುರಾಣಗಳು, ಆಗಮಗಳು ಹಾಗೂ ದರ್ಶನ ಗ್ರಂಥ ಗಳು - ಇವೆಲ್ಲ ವೇದಗಳೆಂಬ ಭದ್ರ ಬುನಾದಿಯ ಮೇಲೆ ಎದ್ದು ನಿಂತಿರುವ ಸನಾತನ ಹಿಂದೂ ಧರ್ಮವೆಂಬ ಮಹಾಸೌಧದ ಇಟ್ಟಿಗೆಗಳು. ಈ ಎಲ್ಲ ಗ್ರಂಥಗಳಲ್ಲಿ ಪ್ರತಿಪಾದಿತವಾದ ಮೂಲ ತತ್ತ್ವಗಳನ್ನು ಯಾರು ಬೇಕಾದರೂ, ಎಲ್ಲಿಯಾದರೂ, ಯಾವಾಗಲಾದರೂ ತಮ್ಮ ಜೀವನದಲ್ಲಿ ಪ್ರಯೋಗಕ್ಕೆ ಅಳವಡಿಸಿಕೊಂಡು ಅಧ್ಯಾತ್ಮ ಸಿದ್ಧಿ ಪಡೆಯಬಹುದು. ಒಬ್ಬ ವಿಜ್ಞಾನಿ ತನ್ನ ಪ್ರಯೋಗಶಾಲೆಯಲ್ಲಿ **'ವೈಜ್ಞಾನಿಕ ಸತ್ಯ ಶೋಧನೆ'** ಮಾಡುವಂತೆ ಸಾಧಕ ತನ್ನ ಬದುಕೆಂಬ ಪ್ರಯೋಗ ಶಾಲೆಯಲ್ಲಿ **'ಅಧ್ಯಾತ್ಮ ಸತ್ಯಶೋಧನೆ'** ನಡೆಸಲು ವಿಪುಲವಾದ ಅವಕಾಶವಿದೆ. ನಮ್ಮ ಧರ್ಮದಲ್ಲಿ ಇಷ್ಟೊಂದು ಉದಾರ ಸ್ವಾತಂತ್ರ್ಯ ಪ್ರಾಯಶಃ ಜಗತ್ತಿನ ಯಾವ ಧರ್ಮದಲ್ಲೂ ಇಲ್ಲ.

ಧರ್ಮಸಂದೇಶ : ಸರಳವಾಗಿ ಹೇಳಬೇಕಾದರೆ **'ಧರ್ಮ'** ವೆಂದರೆ ಆಚಾರ ಸಂಹಿತೆ. ಮಾನವನ ಆಚಾರ - ವಿಚಾರ, ನಡೆ - ನುಡಿ ಎಲ್ಲವೂ ಒಳಿತಾಗಿರಬೇಕು. ಅವನು ಮಾಡುವ ಪ್ರತಿಯೊಂದು ಕಾರ್ಯದ ಹಿಂದೆ **'ಅಪೂರ್ವ ಶಕ್ತಿ'**ಯೊಂದಿದೆ ಎಂಬ ಅರಿವಿರಬೇಕು. ಅವನು ನೋಡುವುದು, ಕೇಳುವುದು, ಮಾಡುವುದು ಎಲ್ಲವೂ ಮಂಗಳಕರವಾಗಿರಬೇಕು. ಸನಾತನ ಹಿಂದೂ ಧರ್ಮ ಸಾರಿ ಹೇಳುವುದು ಇದನ್ನೇ.

ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ '
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿಃ
ವ್ಯಶೇಮ ದೇವಹಿತಂ ಯದಾಯುಃ "

ಅಂದರೆ ಓ ಜ್ಯೋತಿ ಸ್ವರೂಪಿಯಾದ ದೇವತೆಗಳೇ! ನಮ್ಮ ಕಿವಿಗಳು ಮಂಗಳಕರವಾದುದನ್ನು ಕೇಳಲಿ; ನಮ್ಮ ಕಣ್ಣುಗಳು, ಪವಿತ್ರವಾದುದನ್ನು ಕಾಣಲಿ. ನಿಮ್ಮನ್ನು ಸ್ತುತಿಸುತ್ತಾ ನಮಗೆ ಕೊಟ್ಟಿರುವ ಆಯಸ್ಸನ್ನು ದೃಢಕಾಯರಾಗಿ ಕಳೆಯುವಂತಾಗಲಿ. ಇಹವನ್ನು ಭೋಗಿಸಿ, ಪರವನ್ನು ಪೂಜಿಸಿ, ನೂರುವರ್ಷ ಬಾಳಿ (ಶತಂ ಜೀವ ಶರದಃ) - ಎಂಬ ಯೋಗ ಭೋಗಗಳ ಸಮನ್ವಯದ ಈ ಸಂದೇಶ ಯಾರಿಗೆ ಬೇಡ?

ವೇದಗಳು ನಮ್ಮನ್ನು ಸಂಬೋಧಿಸುವುದು **'ಅಮೃತಸ್ಯ ಪುತ್ರಾಃ'** ಎಂದು ನಾವೆಲ್ಲ ಅಮೃತಸ್ವರೂಪಿಯಾದ - ಅವಿನಾಶಿಯಾದ - ಪರಮಾತ್ಮನ ಕಿಡಿಗಳು. ಅದನ್ನು ಮರೆತಿದ್ದರಿಂದಲೇ ನಮಗೆ ಈ ಪಾಡು. ಆದ್ದರಿಂದ ನಿಮ್ಮ ನಿಜಸ್ವರೂಪವನ್ನು ಅರಿತುಕೊಳ್ಳಿ, ದೈವೀ ಗುಣಗಳನ್ನು ಬೆಳೆಸಿಕೊಳ್ಳಿ, ಬುದ್ಧಿಯನ್ನು ಪ್ರಚೋದಿಸಿ ಕೊಂಡು ಜೀವನವನ್ನು ಸಾರ್ಥಕಪಡಿಸಿಕೊಳ್ಳಿ ಎನ್ನುತ್ತದೆ, ನಮ್ಮ ಧರ್ಮ.

'ದೇವನೊಬ್ಬ ನಾಮ ಹಲವು' - **'ಏಕಂಸತ್ ವಿಪ್ರಾಬಹುಧಾ ವದನ್ತಿ'** ಎಂಬುದು ನಮ್ಮ ಧರ್ಮದ ಸಿದ್ಧಾಂತ. ಮಾನವನ ಬುದ್ಧಿ ವಿಕಾಸ, ಮನೋವಿಕಾಸ, ಆತ್ಮವಿಕಾಸಗಳು ಒಂದೇ ಮಟ್ಟದಲ್ಲಿರದೆ ಬೇರೆ ಬೇರೆಯಾಗಿರುತ್ತವೆ. ಇದನ್ನು ಈಗಿನ

ಮನಃಶಾಸ್ತ್ರಜ್ಞರೂ ಒಪ್ಪುತ್ತಾರೆ. ಅವರವರಿಗೆ ಅವರವರ ಮತ, ಪಂಥ, ದೇವರಿರಲಿ! ಬೇಡವೆಂದವರಾರು? ಅವರೆಲ್ಲರೂ ಪೂಜಿಸುವುದು ಒಬ್ಬ ದೇವನ ಅನೇಕ ರೂಪಗಳನ್ನ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಇದನ್ನು ಹೀಗೆ ಪುಷ್ಟೀಕರಿಸುತ್ತಾನೆ. 'ಯಾವ ಯಾವ ಭಕ್ತನು ಯಾವ ಯಾವ ದೇವತಾ ಮೂರ್ತಿಯನ್ನು ಶ್ರದ್ಧೆಯಿಂದ ಪೂಜಿಸಲೂ ಇಚ್ಛಿಸುವನೋ, ಅವನವನಿಗೆ ಅದೇ ಅಚಲವಾದ ಶ್ರದ್ಧೆಯನ್ನು ನಾನು ಕೊಡುವೆನು. (**ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ । ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್** ॥)

ಪೂಜಾಸ್ವಾತಂತ್ರ್ಯ: ನಮ್ಮ ಧರ್ಮದಲ್ಲಿರುವಷ್ಟು ಪೂಜಾ ಸ್ವಾತಂತ್ರ್ಯ ಪ್ರಾಯಶಃ ಮತ್ತಾವ ಧರ್ಮದಲ್ಲೂ ಇರದು. ಯಾರು ಯಾವ ದೇವನನ್ನೇ ಪೂಜಿಸಲಿ, ಅದೆಲ್ಲವೂ ಬೇರೆ ಬೇರ ನದಿಗಳು ಸಮುದ್ರವನ್ನೇ ಸೇರುವಂತೆ ಒಬ್ಬನೇ ಆದ ಪರಮಾತ್ಮನಿಗೆ ಸಲ್ಲುತ್ತದೆ ಎಂದು ಉದ್ಘೋಷಿಸಲಾಗಿದೆ. ಹೀಗೆ ಮೂರ್ತಿ ಪೂಜೆಯ ಕಲ್ಪನೆ, ಬಹುದೇವತಾ ಪೂಜೆಯ ಮರ್ಮ ಹಾಗೂ ಸಾಕಾರದಿಂದ ನಿರಾಕಾರದವರೆಗಿನ ಮಜಲುಗಳನ್ನು ತುಂಬ ವೈಜ್ಞಾನಿಕವಾಗಿ ಉದ್ಘೋಷಿಸುತ್ತದೆ. ಈ ಉದ್ಘೋಷ

ಸಮನ್ವಯ ಸಾಧನೆ: ಹಿಂದೂ ಧರ್ಮ ಜಗತ್ತಿನ ಎಲ್ಲ ಧರ್ಮಗಳನ್ನು ಸ್ವಾಗತಿಸಿದೆ, ಅವುಗಳಲ್ಲಿ ಸಮನ್ವಯವನ್ನು ಸಾಧಿಸಲು ಪ್ರಯತ್ನಿಸಿದೆ. ಕನ್ನಡದ ಕವಿಯೊಬ್ಬರು ಹಾಡಿದ ಹಾಗೆ:

ಆರ್ಯರೊ, ಮೊಗಲರೋ, ಕ್ರೈಸ್ತರೋ ತಡೆಯೇನು?
ಎಲ್ಲರೂ ಬರಲೆಂದು ಸ್ವಾಗತಿಸಿದೆ
ಜಾತಿ ಮತ ಬೇರೆನದೆ, ಬಣ್ಣ - ನುಡಿ ಬದಲಿಸದೆ
ಭೇದವೆಣಿಸದೆ ತಾಯೇ ನೀಸಲಹಿದೆ
ವಿಶ್ವ ಸಂತತಿಯೆಲ್ಲ ನಿನ್ನ ಪುಣ್ಯೋದರದ
ಹಸುಗೂಸುಗಳು ಎಂದು ಹಾಲುಣಿಸಿದೆ
ಒಂದೆ ತೊಟ್ಟಿಲೊಳಿಟ್ಟು ತೂಗಿ ಜೋಗುಳ ಹಾಡಿ
ಪ್ರೇಮ ಸಂಗೀತದೊಳು ಮೈಮರೆಸಿದೆ

ಹೀಗೆ ಜಗತ್ತಿನ ಎಲ್ಲ ಧರ್ಮಗಳನ್ನು ಸ್ವಾಗತಿಸಿ, ಅವುಗಳಲ್ಲಿರುವ ಉತ್ತಮವಾದ ಅಂಶಗಳನ್ನು ಹೀರಿ, ಅವುಗಳ ಮೇಲೆ ತನ್ನ ಪ್ರಭಾವವನ್ನು ಬೀರಿ '**ವಸುಧೈವ ಕುಟುಂಬಕಮ್**' ಎಂಬ ಭಾವನೆಗೆ ಇಂಬು ಕೊಟ್ಟ ಧರ್ಮ, ಹಿಂದೂ ಧರ್ಮ.

ಹಿಂದೂ ಧರ್ಮದಲ್ಲಿ ಆಸ್ತಿಕನೂ ಇರಬಲ್ಲ, ನಾಸ್ತಿಕನೂ ಇರಬಲ್ಲ, ವಿಗ್ರಹಪೂಜಕನೂ ಇರಬಲ್ಲ, ಅದನ್ನು ವಿರೋಧಿಸುವವನೂ ಇರಬಲ್ಲ. ಈ ಸಮನ್ವಯದ ಭಾವನೆ ಹರಿಹರ ದೇವನ ಕಾಲದ ಬೇಲೂರು ಶಿಲಾಶಾಸನದ ಶ್ಲೋಕಗಳಲ್ಲಿ ಬಹಳ ಚೆನ್ನಾಗಿ ಮೂಡಿಬಂದಿದೆ. ಆಶ್ಲೋಕಗಳು ಹೀಗಿವೆ:-

ಶ್ರೀಮತ್ ತ್ರೈಲೋಕ್ಯ ಪೂಜ್ಯಾಯ
ಸರ್ವಶರ್ಮಸು ಸಾಕ್ಷಿಣೇ ।
ಫಲದಾಯ ನಮೋ ನಿತ್ಯಂ ಕೇಶವಾಯ ಶಿವಾಯ ಚ ॥

ಯಂಶೈವಾಃ ಸಮುಪಾಸತೇ ಶಿವ
ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ
ಕರ್ತೇತಿ ನೈಯಾಯಿಕಾಃ ।
ಅರ್ಹನ್ನಿತ್ಯಥ ಜೈನ ಶಾಸನರತಾಃ
ಕರ್ಮೇತಿ ಮೀಮಾಂಸಕಾಃ
ಸೋSಯಂ ವೋ ವಿದಧಾತು
ವಾಂಛಿತಫಲಂ ಶ್ರೀಕೇಶವಸ್ಸರ್ವದಾ ॥

ಈ ಶ್ಲೋಕದಲ್ಲಿ '**ಕೇಶವಾಯ - ಶಿವಾಯ ಚ**' ಎಂದು ವಿಷ್ಣುವಿಗೂ, ಶಿವನಿಗೂ ಒಟ್ಟಿಗೆ ನಮಸ್ಕಾರ ಹೇಳಿದೆ. ಶಿವ ವಿಷ್ಣು ಇಬ್ಬರೂ ಸಮಾನರು, ಇಬ್ಬರೂ ಎಲ್ಲ ಪ್ರಕಾರವಾಗಿಯೂ ಸ್ತೋತ್ರಾರ್ಹರು ಎಂದು ಹೇಳಿ, ಶೈವ, ವೈಷ್ಣವ ಮತಗಳ ಸಾಮರಸ್ಯವನ್ನು ಸೂಚಿಸಿದೆ. ಇನ್ನೂ ಮುಂದೆ ಹೋಗಿ ವೈದಿಕ ಮತ್ತು ಅವೈದಿಕ ಅಥವಾ ಆಸ್ತಿಕ ಮತ್ತು ನಾಸ್ತಿಕ ಮತಗಳ ಸಮನ್ವಯವನ್ನು ಸಾಧಿಸಿದೆ. ಯಾರನ್ನು ಶೈವರು, ಶಿವನೆಂದೂ, ವೇದಾಂತಿಗಳು ಬ್ರಹ್ಮವೆಂದೂ, ಬೌದ್ಧರು ಬುದ್ಧನೆಂದೂ, ಪ್ರಮಾಣಪಟುಗಳಾದ ನೈಯಾಯಿಕರು ಕರ್ತನೆಂದೂ, ಉಪಾಸಿಸುತ್ತಾರೋ ಅಂತಹ ಆ ಕೇಶವನು ಸದಾ ನಮ್ಮ ಬಯಕೆಯನ್ನು ಈಡೇರಿಸಲಿ ಎಂದು ಹೇಳುವ ಈ ಶ್ಲೋಕ ಹಿಂದೂ ಧರ್ಮದ ಸಮನ್ವಯ ದೃಷ್ಟಿಯನ್ನು ಬಹಳ ಸೊಗಸಾಗಿ ನಿರೂಪಿಸಿದೆ. ಈ ಶ್ಲೋಕಕ್ಕೆ ಭಾರತದ ರಾಷ್ಟ್ರಪತಿಗಳಾಗಿದ್ದ ವಿದ್ವಾಂಸ ಡಾ॥ ರಾಧಾಕೃಷ್ಣನ್‌ರವರು '**ಕ್ರೈಸ್ತಾಃ ಕ್ರಿಸ್ತ ಇತಿ ಕ್ರಿಯಾಪರರತಾಃ ಅಲ್ಲೇತಿ ಮೋಹಮ್ಮದಾಃ**' ಅಂದರೆ ಆ ಸರ್ವಶಕ್ತ ಪರಮಾತ್ಮನನ್ನು ಕ್ರೈಸ್ತರು 'ಕ್ರಿಸ್ತ'ನೆಂದೂ, ಮುಸ್ಲೀಮರು 'ಅಲ್ಲಾ' ಎಂದೂ ಕರೆಯುತ್ತಾರೆ ಎಂದು ಮತ್ತೊಂದು ಪಾದವನ್ನು ಸೇರಿಸಿರುವುದು ತೀರಾ ಪ್ರಸ್ತುತ, ಸಂದರ್ಭೋಚಿತ.

ಹಿಂದೂ ಧರ್ಮದಲ್ಲಿ ಈ ರೀತಿಯ ಸಮನ್ವಯ ಭಾವನೆ ಹೇಗೆ ಬಂತು ಎಂದರೆ ಉತ್ತರ ಇಷ್ಟೆ. ಹಿಂದೂ ಧರ್ಮ ಯಾವುದೇ ಒಂದು ಪದ್ಧತಿ, ಒಂದು ರೂಢಿ, ಒಂದು ಅಭಿಪ್ರಾಯವನ್ನು ನಂಬಿ ನಿಂತಿಲ್ಲ. ಮನುಷ್ಯನ ಸ್ವಭಾವ ಬಹುವಿಧ. ಅದಕ್ಕೆ ತಕ್ಕಂತೆ ವ್ಯವಸ್ಥೆಗಳು, ರೂಢಿಗಳು. ಆದ್ದರಿಂದ ಯಾವುದನ್ನೂ ದೂರ ಬಾರದು, ದೂರ ಇಡಬಾರದು. ಪ್ರತಿಯೊಂದು ರೀತಿ ನಡವಳಿಕೆಯನ್ನು ಸಹಾನುಭೂತಿಯಿಂದ ನೋಡಿ ವಿಮರ್ಶಿಸಿ

ಅಂಗೀಕರಿಸಬೇಕು. ಅಕಸ್ಮಾತ್ ಅಂಗೀಕರಿಸಲು ಅಸಾಧ್ಯವೆನಿಸಿದರೆ ಬಹಿಷ್ಕಾರ ಹಾಕದೆ ಅದರ ಪಾಡಿಗೆ ಅದನ್ನು ಗೌರವದಿಂದ ಇರಲು ಬಿಡಬೇಕು. ಇದೇ ಹಿಂದೂ ಧರ್ಮದ ನಿಲುವು.

ಸನಾತನ - ನಿತ್ಯನೂತನ: ಹಿಂದೂ ಧರ್ಮ ವ್ಯಾಪಕವಾದ, ಸರ್ವ ಸಮಾವೇಶಕವಾದ, ಸರ್ವ ಸಂಗ್ರಾಹ್ಯವಾದ ದೃಷ್ಟಿ ಬೆಳೆಸಿಕೊಂಡಿರುವುದರಿಂದಲೇ ಅದು ಸನಾತನವಾಗಿದೆ. '**ಸನಾತನ**' ಎಂದರೆ ಪ್ರಾಚೀನವೆಂದಷ್ಟೇ ಅರ್ಥವಲ್ಲ, ನಿತ್ಯ ನೂತನ, ಚಿರ ಪುರಾತನ ಎಂದರ್ಥ. ಪ್ರಕೃತಿಯಂತೆ ಸದಾ ಹೊಸತನ್ನು ಬಿಂಬಿಸಿಯೂ, ಮೂಲವನ್ನು ಉಳಿಸಿಕೊಳ್ಳುವ ಶಕ್ತಿಗೆ '**ಸನಾತನ**' ಎಂದು ಹೆಸರು. ಎಲ್ಲರ ಕಡೆಗಳಿಂದ ಉತ್ತಮವಾದುದನ್ನು ಸ್ವೀಕರಿಸಿ, ಬೆಳೆಯುವ ವ್ಯಾವಹಾರಿಕ ಜಾಣ್ಮೆ ಹಿಂದೂ ಧರ್ಮದ್ದು. ಜ್ಞಾನಕ್ಕೆ ಬೆಳಕಿಗೆ ಯಾವ ಅಡ್ಡಿಯೂ ಇಲ್ಲ. ಎಲ್ಲಿಂದಲೇ ಆಗಲಿ ಜ್ಞಾನ ಬರಲಿ '**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**' 'Let the noble thoughts come from every side' ಎಂಬ ಆಶಯ ಹಿಂದುಗಳದು.

ಚಕ್ರವರ್ತಿ ರಾಜಗೋಪಾಲಾಚಾರ್ಯರು ತಮ್ಮ 'Hindu Doctrine and way of Life' ಎಂಬ ಅಮೂಲ್ಯ ಗ್ರಂಥದಲ್ಲಿ ಹೇಳಿದಂತೆ 'There are differences in forms and rituals. A knowledge of Hinduism, and Christians better christians, Muslims better muslims and all of us better citizens in a consolidated nation' ಎಂಬಂತೆ ಹಿಂದೂ ಧರ್ಮವನ್ನು ಇತರೆ ಎಲ್ಲ ಧರ್ಮದವರೂ ಸರಿಯಾಗಿ ಅರ್ಥಮಾಡಿಕೊಂಡರೆ ಉತ್ತಮ ವ್ಯಕ್ತಿಗಳಾಗಿ, ಆದರ್ಶ ಪ್ರಜೆಗಳಾಗಿ ಈ ದೇಶದ ಏಕತೆಯನ್ನು ಕಾಪಾಡುವುದರ ಜೊತೆಗೆ ವಿಶ್ವದಲ್ಲಿ ಸ್ನೇಹ, ಶಾಂತಿ, ಸಮೃದ್ಧಿಗಳು ನೆರೆಸುವಂತೆ ಮಾಡಲು ಸಾಧ್ಯ.

ಜಗತ್ತನ್ನು ಉಳಿಸಬಲ್ಲ ಶಕ್ತಿ : ಆದ್ದರಿಂದ ಇಂದಿಗೂ ವಿಶ್ವವಿಖ್ಯಾತ ವಿಜ್ಞಾನಿಗಳಿಗೆ, ದಾರ್ಶನಿಕರಿಗೆ '**ಭಾರತವೇ ಮುಂದಿನ ಜಗತ್ತಿನ ಬೆಳಕು**' ಎನಿಸಿದ್ದರೆ ಆಶ್ಚರ್ಯವೇನೂ ಇಲ್ಲ. ವಿಜ್ಞಾನದ ಮುಕ್ತ ಬಳಕೆಯಿಂದಾಗಿ ಸಮತೋಲನ ತಪ್ಪಿ ವಿನಾಶದ ಅಂಚಿಗೆ ಧಾವಿಸುತ್ತಿರುವ ಈ ಜಗತ್ತನ್ನು ಉಳಿಸಬಲ್ಲ ಏಕೈಕ ಶಕ್ತಿ ಎಂದರೆ '**ಹಿಂದೂ ಧರ್ಮ**' ಎಂದು ಎಲ್ಲರೂ ಹೇಳುತ್ತಾರೆ. ಅವರೆಲ್ಲರ ಮಾತನ್ನೇ ವಿಶ್ವವಿಖ್ಯಾತ ಸಮಾಜ ಶಾಸ್ತ್ರಜ್ಞನೂ, ಇತಿಹಾಸ ವಿದ್ವಾಂಸನೂ ಆದ ಡಾ|| ಅರ್ನಾಲ್ಡ್ ಟಾಯೆನ್ಬಿ ಹೀಗೆ ವರ್ಣಿಸಿದ್ದಾನೆ - '**ಇಪ್ಪತ್ತನೆಯ ಶತಮಾನವು ವಿಜ್ಞಾನದ, ತಂತ್ರಜ್ಞಾನದ ಶತಮಾನ. ಇದರಲ್ಲಿ ವಿಜ್ಞಾನ - ತಂತ್ರ ಜ್ಞಾನಗಳು ಬೆಳೆದು, ಮಾನವ ಕುರುಡಾಗಿ ನುಗ್ಗುತ್ತಾ ವಿನಾಶದ ಅಂಚಿಗೆ ಬರುತ್ತಾನೆ. ಆದರೆ ಬರಲಿರುವ ಶತಮಾನ - ಇಪ್ಪತ್ತೊಂದನೆಯ ಶತಮಾನ - ಧರ್ಮದ ಶತಮಾನ, ಮಾನವನನ್ನು ರಕ್ಷಿಸುವ ಶತಮಾನ. ಈ ಶತಮಾನವನ್ನು ನಿರ್ಮಿಸುವುದು ಭಾರತದ ತರುಣರ ಹೊಣೆ. ಅವರೇ ಇದನ್ನು ರೂಪಿಸಬಲ್ಲರು**' ಎನ್ನುತ್ತಾನೆ. ಈ ಜಗದ್ವಿಖ್ಯಾತ ವಿದ್ವಾಂಸ.

ಲೋಕಮಾನ್ಯ ಚಿಂತಕ **ಟಾಯೆನ್ಬಿ** ಹೇಳಿದ ಹಾಗೆ ಜಗತ್ತು ಇಂದು ಕವಲು ದಾರಿಯಲ್ಲಿದೆ. ವಿಜ್ಞಾನದ ಕುರುಡು ಕುದುರೆ ಬಹು ವೇಗವಾಗಿ ಮುನ್ನುಗ್ಗುತ್ತಿದೆ. ಹಿಡಿತ ತಪ್ಪಿದ ಕುದುರೆಯನ್ನೇರಿದ ಸವಾರನಂತೆ ಜಗತ್ತು ಬದುಕಿ ಉಳಿಯಲು ಹೊಸದಾರಿಗಳನ್ನು ಹುಡುಕುತ್ತಿದೆ. ಈಗ ಅದಕ್ಕೆ ಇರುವ ದಾರಿ ಒಂದೇ. ಈ ಹುಚ್ಚು ಕುದುರೆಯ ಓಟವನ್ನು ನಿಯಂತ್ರಿಸಲು ಅದಕ್ಕೆ ಧರ್ಮದ ಕಡಿವಾಣ ಹಾಕಿ, ಸರಿದಾರಿಗೆ ತರಬೇಕು. ನಮ್ಮ ಸಮಾಜ ಧರ್ಮಪ್ರಜ್ಞ, ಧರ್ಮಪ್ರಾಣ ಸಮಾಜವಾಗಬೇಕು. ಹೊಸ ಸವಾಲುಗಳಿಗೆ, ಪಂಥಾಹ್ವಾನಗಳಿಗೆ, ಆಧುನಿಕ ಸಂಶಯಗಳಿಗೆ ಉತ್ತರಕೊಟ್ಟು ಎಲ್ಲರಿಗೂ ಯೋಗ್ಯ ದಾರಿ ತೋರಬೇಕು. ಇದು ಹಿಂದೂ ಧರ್ಮಕ್ಕೆ ಮಾತ್ರ ಸಾಧ್ಯ.

ಎಲ್ಲ ಮತ ಧರ್ಮಗಳವರೂ ಪರಸ್ಪರ ಸಮಾನವಾದ ಅಂಶಗಳನ್ನು ಗಮನಿಸಿ, ಗುರುತಿಸಿ ಪರಸ್ಪರ ಸಹಕರಿಸಬೇಕು. ಎಲ್ಲಿ ಅಭಿಪ್ರಾಯಭೇದ ವಿರುವುದೋ ಅಲ್ಲಿ ಅದನ್ನೊಪ್ಪಿ ತಮ್ಮ ಹಾಗೆಯೇ ಇತರರಿಗೂ ಅಭಿಪ್ರಾಯ ಸ್ವಾತಂತ್ರ್ಯವನ್ನಿತ್ತು ಶಾಂತಿಯುತ ಸಹಬಾಳ್ವೆ ನಡೆಸಲು ಮನಃಪೂರ್ವಕವಾಗಿ ಶ್ರಮಿಸಬೇಕು. ಹೀಗೆ ಸರ್ವ ಧರ್ಮಗಳ ಸೌಹಾರ್ದವು ಪ್ರಾಯೋಗಿಕ ಮತ್ತು ಸಾಧ್ಯ ಎಂಬುದನ್ನು ತೋರಿಸಿ ಕೊಡಬೇಕು. ಆಗ ವಿಶ್ವಶಾಂತಿ ಖಂಡಿತವಾಗಿಯೂ ಸಿದ್ಧಿಸುತ್ತದೆ.

ಈ ನಿಟ್ಟಿನಲ್ಲಿ ಹಿಂದೂಗಳ ಸಂಘಟನೆಯಾಗಬೇಕು. ಪ್ರಸ್ತುತ ಪರಿಸ್ಥಿತಿಯಲ್ಲಿ '**ಸಂಘಟನೆಯೇ ಸಂಜೀವಿನಿ**', **ಸಂಘೇ ಶಕ್ತಿಃ**', ಹೀಗೆ ಹಿಂದೂ ಸಮಾಜ ಸಂಘಟಿತವಾಗಿ ವಿರಾಟ ಶಕ್ತಿಯಾಗಿ ನಿಂತಾಗ '**ಕೃಣ್ವಂತೋ ವಿಶ್ವಮಾರ್ಯವಮ್' - ವಿಶ್ವವನ್ನೇ ಆರ್ಯಮಯವವನ್ನಾಗಿ ಮಾಡೋಣ** ಎಂಬ ನಮ್ಮ ಹಿಂದೂ ಧರ್ಮದ ಮೂಲ ಆಶಯ - ಆಕಾಂಕ್ಷೆಗಳು ತೀರಾ ಸಹಜವೂ, ಸುಲಭವೂ ಆಗಿ ಸಾಕ್ಷಾತ್ಕಾರಗೊಳ್ಳಲು ಸಾಧ್ಯ.

ಸಮ್ಯಕ್‌ಜ್ಞಾನಂ

ಪ್ರೊ. ಎಸ್ ರಾಮಚಂದ್ರ ಶಾಸ್ತ್ರೀ
ಬೆಂಗಳೂರು

ಸಾಮಾನ್ಯವಾಗಿ ಮನುಷ್ಯ ವಿಚಾರಕುಶಲನಾಗಿರುತ್ತಾನೆ. ಯಥಾರ್ಥ ಜ್ಞಾನವೇ ವಿಚಾರದ ಫಲ. ತಪ್ಪು ತಿಳಿವು ಹಾನಿಕರವಾದುದು. ತಪ್ಪು ತಿಳಿವಿಗಿಂತ ಅಜ್ಞಾನವೇ ಒಳ್ಳೆಯದು. ಶಾಸ್ತ್ರವನ್ನು ತಿಳಿದವರು ಹಾಗೂ ವೈಜ್ಞಾನಿಕರು ಪ್ರಪಂಚದ ತತ್ತ್ವಜಿಜ್ಞಾಸುಗಳೂ. ವೈಜ್ಞಾನಿಕರು ಪ್ರತ್ಯಕ್ಷವಾಗಿ ಕಂಡು ಬರುವುದನ್ನೇ ಪ್ರಾಮಾಣಿಕವೆಂದು ನಂಬುತ್ತಾರೆ. ಅಡುಗೆ ಮಾಡುವವನು ತನ್ನ ಅನುಭವ ಕೌಶಲದಿಂದ ವಿಧವಿಧವಾದ ಹೊಸ ಹೊಸ ಭಕ್ಷ್ಯ ಭೋಜ್ಯಾದಿಗಳನ್ನು ಮಾಡುವಂತೆ, ವಿಜ್ಞಾನಿಯು ತನ್ನ ಕೌಶಲದಿಂದ ಪ್ರಾಪಂಚಿಕ ವಸ್ತುಗಳ ಸಂಯೋಗ ವಿಯೋಗಾದಿಗಳ ಪ್ರಯೋಗ ವಿಶೇಷಗಳಿಂದ ಹೊಸ ಹೊಸ ಪ್ರಯೋಜನಗಳನ್ನು ಕಂಡು ಹಿಡಿದು ಪ್ರಪಂಚದಲ್ಲಿ ಪ್ರಚಾರ ಮಾಡುತ್ತಾನೆ. ಇವು ಜನ ಸಾಮಾನ್ಯಕ್ಕೂ ಉಪಯುಕ್ತವಾಗುತ್ತವೆ. ಆದರೆ, ಇವುಗಳ ಉತ್ತರೋತ್ತರ ಪರಿಣಾಮದ ಪರಿಜ್ಞಾನವು ಇವನಿಗಿಲ್ಲದಿರುವುದು ಸರ್ವವಿದಿತವಾಗಿದೆ. ದೃಷ್ಟಮಾತ್ರ ಪ್ರಮಾಣದ ಚಾರ್ವಾಕರ ಎಲ್ಲೆಯೊಳಗೆ ಈ ವೈಜ್ಞಾನಿಕರ ಸ್ಥಿತಿಗತಿಗಳು.

ಹಿಂದಿನದು ಕಳೆದೇ ಇದೆ. ಈಗಿನದೂ ಕಳೆಯುತ್ತಲೇ ಇದೆ. ಮುಂದೆ ಯಾವ ಹಾನಿಯೂ ಆಗದಂತೆ ವರ್ತಿಸುವುದೇ ವಿಚಾರಕುಶಲನಾದವನ ಆದ್ಯಕರ್ತವ್ಯವಾಗಿದೆ. ಹಿಂದು ಮುಂದಿನ ಸ್ಥಿತಿಗಳು ತಿಳಿಯದೆ, ಈಗ ಹೀಗೆ ನಡೆದರೆ ಮುಂದೆ ಹಾನಿಯಾಗದೆ, ನೆಮ್ಮದಿಯೇ ಆಗುವುದೆಂಬುದು ನಿಶ್ಚಿತವಾಗುವುದಿಲ್ಲ. ಮಾನವನ ವಿಚಾರ ಸರಣಿಗೆ ಮೀರಿರುವ ಈ ವಿಷಯದಲ್ಲಿ-

ಅಶೇಷ ಸಂಶಯೋಚ್ಛೇದೀ ಪರೋಕ್ಷಾರ್ಥಪ್ರಕಾಶಕಂ ।
ಸರ್ವಸ್ಯ ಲೋಚನಂ ಶಾಸ್ತ್ರಂ ಯಸ್ಯ ನಾಸ್ತ್ಯಂಧ ಏವ ಸಃ ॥

"ಕೇವಲ ಬುದ್ಧಿಶಕ್ತಿಗೆ ಮೀರಿರುವ ವಿಷಯಗಳನ್ನು ಯಾವ ಸಂಶಯವೂ ಇಲ್ಲದಂತೆ ಸುನಿಶ್ಚಿತವಾಗಿ ತಿಳಿಸುವ ಶಾಸ್ತ್ರವೇ ಎಲ್ಲರಿಗೂ ಇಹಪರಗಳ ಶ್ರೇಯೋಮಾರ್ಗವನ್ನು ತಿಳಿಸುವ ಕಣ್ಣು. ಈ ಶಾಸ್ತ್ರ ನೇತ್ರವಿಲ್ಲದವನು ಹುಟ್ಟು ಕುರುಡನೇ ಸರಿ!" ಎಂಬಂತೆ ಶಾಸ್ತ್ರವೊಂದೇ ಪ್ರಮಾಣವಾಗಿದೆ.

ಲೋಕದಲ್ಲಾಗಲೀ, ಶಾಸ್ತ್ರದಲ್ಲಾಗಲೀ, ನ್ಯಾಯವು ಒಂದೇ. ಲೋಕ ನ್ಯಾಯವೇ ಶಾಸ್ತ್ರದಲ್ಲೂ ನ್ಯಾಯವಾಗುತ್ತದೆ. ಹೀಗಲ್ಲವಾದರೆ, ಶಾಸ್ತ್ರನ್ಯಾಯವು ಲೋಕನ್ಯಾಯಕ್ಕೆ ಬೇರೆಯಾದರೆ, ಅದು ಲೋಕದಲ್ಲಿ ಯಾರಿಗೂ ತಿಳಿದು ಬರಲಾರದೆ ಹೋಗುವುದು. ಒಂದು ವಸ್ತುವು ಮತ್ತೊಂದು ಆಗುವುದಿಲ್ಲ. ಘಟವು ಪಟವಾಗುವುದಿಲ್ಲ. ಹಸುವು ಕುದುರೆಯೂ ಆಗುವುದಿಲ್ಲ. ಆಯಾಯ ವಸ್ತುವನ್ನು ಅದೆಂದೇ ತಿಳಿಯುವುದು ಸಮ್ಯಕ್ ಜ್ಞಾನವಾಗುತ್ತದೆ. ಹಾಗೆ ತಿಳಿದು ನಡೆಯುವುದರಿಂದ ಹಾನಿಯು ತಪ್ಪಿ ಶ್ರೇಯಸ್ಸು ಸಿದ್ಧಿಸುತ್ತದೆ. ಸರಿಯಾಗಿ ತಿಳಿಯದೆ ವ್ಯವಹರಿಸುವುದರಿಂದ, ಅದರಿಂದ ಉಂಟಾಗಬಹುದಾದ ಪ್ರಯೋಜನ ಲಭಿಸದೆ, ಹಾನಿಯು ಸಂಭವಿಸುವುದು.

"ಬ್ರಹ್ಮವಿದಾಪ್ನೋತಿ ಪರಮ್" - ಬ್ರಹ್ಮವನ್ನು ತಿಳಿದವನು ಪರವನ್ನು ಅಂದರೆ ಸರ್ವೋತ್ತಮವಾದುದನ್ನು ಹೊಂದುತ್ತಾನೆ - ಎಂದು ಶಾಸ್ತ್ರವು ತಿಳಿಸುತ್ತದೆ. ಸರ್ವಲೋಕ ಮೂಲ ಕಾರಣವಾಗಿರುವುದೇ ಬ್ರಹ್ಮವೆಂದು - **"ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತಿ, ತದ್ವಿಜಿಜ್ಞಾಸಸ್ವ, ತತ್ ಬ್ರಹ್ಮೇತಿ"** - ಎಂದು ಶಾಸ್ತ್ರವು ತಿಳಿಸುತ್ತ ಬ್ರಹ್ಮವೇ ಪರವಸ್ತುವೆಂದು ಬೋಧಿಸುತ್ತದೆ. ಆದ್ದರಿಂದ, ಬ್ರಹ್ಮವನ್ನು ತಿಳಿದವನು ಆ ಪರಬ್ರಹ್ಮನೇ ಆಗುವನೆಂದು ತಿಳಿದು ಬರುತ್ತದೆ. ಬ್ರಹ್ಮವಲ್ಲದವನು ಬ್ರಹ್ಮವಾಗುವುದು ಹೇಗೆ? ಆದ್ದರಿಂದ ಬ್ರಹ್ಮವೇ ಆಗಿದ್ದು ಅದನ್ನು ಸರಿಯಾಗಿ ತಿಳಿಯದೆ, ತಪ್ಪಾಗಿ ತಿಳಿದವನು, ತನ್ನ ವಾಸ್ತವ ಸ್ವರೂಪವನ್ನು ತಿಳಿದುಕೊಂಡು ಬ್ರಹ್ಮನಾಗುವನು - ಎಂಬುದು ಶ್ರುತ್ಯರ್ಥ. **"ಬ್ರಹ್ಮೈವಸನ್ ಬ್ರಹ್ಮಾಪ್ಯೇತಿ, ಯ ಏವಂ ವೇದ"** - ಬ್ರಹ್ಮನಾಗಿದ್ದವನೇ ಹಾಗೆ ತಿಳಿದುಕೊಂಡು ಬ್ರಹ್ಮನಾಗುವನು - ಎಂದು ಶ್ರುತಿಯು ಇದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಬ್ರಹ್ಮವಲ್ಲದ್ದು ಎಂದೂ, ಹೇಗೂ ಬ್ರಹ್ಮವಾಗಲಾರದು. ರಾಜನಲ್ಲದವನು ತನ್ನನ್ನು ರಾಜನೆಂದು ತಿಳಿದುಕೊಂಡ ಮಾತ್ರಕ್ಕೆ ರಾಜನಾಗುತ್ತಾನೆಯೇ? **"ಸಯೋ ಹವೈ ತತ್ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ"** - ಯಾರೇ ಆಗಲಿ ತನ್ನನ್ನು ಬ್ರಹ್ಮವೆಂದು ತಿಳಿದರೆ, ಅವನು ಬ್ರಹ್ಮವೇ ಆಗಿಯೇ ಆಗುವನು ಎಂದು ಇದನ್ನೇ ಅವಧಾರಣೆಯಿಂದ ತಿಳಿಸುತ್ತದೆ. ಪ್ರಮಾಣವಾದ ಶ್ರುತಿಯ ವಿಷಯದಲ್ಲಿ ಸಂಶಯ ಪಡಬಹುದೇ?

ಶ್ರುತಿಯ ಮಾತು ಪ್ರಾಮಾಣಿಕವಾದುದರಿಂದ, ಅದರಂತೆ **"ಆ ಬ್ರಹ್ಮವೇ ಬ್ರಹ್ಮವೆಂದು ತಿಳಿದುಕೊಂಡು ಬ್ರಹ್ಮವಾಗುತ್ತದೆಂದೇ"** ಏಕೆ ಅಂಗೀಕರಿಸಬಾರದು? ಎಂದರೆ ಇಲ್ಲಿಯೂ

ಪ್ರಮಾಣದ ಯೋಗ್ಯತೆ ಏನೆಂದು ಸರಿಯಾಗಿ ತಿಳಿಯಬೇಕು. ಪ್ರಮಾಣವು ಇರುವ ವಸ್ತುವನ್ನು ಅದು ಇರುವಂತೆ ತಿಳಿಸುವ ಸಾಮರ್ಥ್ಯವನ್ನು ಹೊಂದಿರುವುದೇ ಹೊರತು, ಹೊಸದಾಗಿ ಏನನ್ನು ಉಂಟುಮಾಡುವುದಕ್ಕೂ ಅದನ್ನು ನಾಶಮಾಡುವುದಕ್ಕೂ ಅದನ್ನು ಬದಲಾಯಿಸಿ ಬೇರೆಯದನ್ನಾಗಿ ಮಾಡುವುದಕ್ಕೂ ಪ್ರಮಾಣಕ್ಕೆ ಸಾಮರ್ಥ್ಯವಿಲ್ಲ. ಆದ್ದರಿಂದ ಯಾವ ಶ್ರುತಿಯೂ ಆ ಬ್ರಹ್ಮವನ್ನು ಬ್ರಹ್ಮವನ್ನಾಗಿ ಮಾಡಲಾರದು. ಕುಂತಿಯ ಮಗನೇ ಕರ್ಣನು, ತನ್ನನ್ನು ರಾಧೆಯ ಮಗನೆಂದು ನಂಬಿದ್ದು, ಕುಂತೀ ದೇವಿಯ ಮಾತಿನಿಂದ ತನ್ನ ತಿಳಿವನ್ನು ತಿದ್ದಿಕೊಂಡು, ಕೌಂತೇಯನೆಂದು ತಿಳಿದಂತೆ, ಕಾರಣಾಂತರದಿಂದ ತನ್ನನ್ನು ಅಬ್ರಹ್ಮನೆಂದು ಭ್ರಾಂತಿಪಟ್ಟಿರುವನು. ಶಾಸ್ತ್ರಾಚಾರ್ಯೋಪದೇಶದಿಂದ ಭ್ರಾಂತಿಯನ್ನು ಕಳೆದುಕೊಂಡು, ಬ್ರಹ್ಮವೇ ಆಗುವನೆಂಬ ಶ್ರುತ್ಯರ್ಥವು ಸುಮಂಜಸವಾಗಿ ಪ್ರಾಮಾಣಿಕವಾಗಿರುತ್ತದೆ.

ಶ್ರುತಿಯು ಇದನ್ನು ವಿಶದವಾಗಿ ಬೋಧಿಸುತ್ತದೆ.

"ಬ್ರಹ್ಮವಾ ಇದಮಗ್ರ ಆಸೀತ್; ತದಾತ್ಮಾನಮೇವಾವೇತ್ - ಅಹಂ ಬ್ರಹ್ಮಾಸ್ಮೀತಿ; ತಸ್ಮಾತ್ತತ್ಸರ್ವಮಭವತ್; ತದ್ಯೋಯೋ ದೇವಾನಾಂ ಪ್ರತ್ಯಬುಧ್ಯತ ಸ ಏವ ತದಭವತ್; ತಥರ್ಷೀಣಾ ತಥಾಮನುಷ್ಯಾಣಾಂ ತದಿದಮಪ್ಯೇತರ್ಹಿ ಯ ಏವಂ ವೇದ - ಅಹಂ ಬ್ರಹ್ಮಾಸ್ಮೀತಿ" - ಇದಂ ಸರ್ವಂ ಭವತಿ.

ಮೊದಲು ವಾಸ್ತವವಾಗಿ ಬ್ರಹ್ಮವೇ ಆಗಿತ್ತು, ಅದು ಕಾರಣಾಂತರದಿಂದ ತನ್ನನ್ನು ಮರೆತಿದ್ದು, ಶಾಸ್ತ್ರಾಚಾರ್ಯೋಪದೇಶದಿಂದ ತನ್ನನ್ನೇ - **"ನಾನು ಬ್ರಹ್ಮವೇ"** ಎಂಬ ಯಥಾರ್ಥವನ್ನು ತಿಳಿದು, ಆ ಅರಿವಿನ ಮಾತ್ರದಿಂದಲೇ ಸರ್ವಾತ್ಮಕವಾದ ಅದ್ವಿತೀಯ ತತ್ತ್ವವಾಯಿತು. ಇದರಂತೆಯೆ, ದೇವತೆಗಳ ಮಧ್ಯದಲ್ಲಿ ಯಾವ ದೇವನಾದರೂ, ತನ್ನನ್ನು ವಾಸ್ತವವಾಗಿ ಬ್ರಹ್ಮವೆಂದು ತಿಳಿದವನು ಬ್ರಹ್ಮವೇ ಆಗುವನು. ಹಾಗೆಯೇ ಋಷಿಗಳ ಮಧ್ಯದಲ್ಲಿ ಆಗಲಿ, ಮನುಷ್ಯರ ಮಧ್ಯದಲ್ಲಿ ಆಗಲಿ, ತನ್ನ ಋಷಿತ್ವ - ಮನುಷ್ಯತ್ವಗಳ ತಪ್ಪು ತಿಳಿವುಗಳನ್ನು ತೊರೆದು, ಶಾಸ್ತ್ರಾಚಾರ್ಯೋಪದೇಶದಿಂದ ತನ್ನ ವಾಸ್ತವವಾದ ಬ್ರಹ್ಮತ್ವವನ್ನು ತಿಳಿದುಕೊಂಡು ಬ್ರಹ್ಮವೇ ಆಗುವನು. ಆದ್ದರಿಂದ, ಯಾರು ತನ್ನನ್ನು ಬ್ರಹ್ಮವೆಂದು ಯಥಾರ್ಥತತ್ತ್ವವನ್ನು ತಿಳಿಯುವನೋ ಅವನು ಸರ್ವಾತ್ಮಕದ್ವಿತೀಯ ನಿತ್ಯಮುಕ್ತಾಖಂಡ ಸಚ್ಚಿದಾನಂದ ಬ್ರಹ್ಮನಾಗಿ, ಸರ್ವಸಂಸಾರ ಬಂಧನದಿಂದ ವಿನಿರ್ಮುಕ್ತನಾಗುವನು.

ಇದು ಶಾಸ್ತ್ರದ ಪ್ರಾಮಾಣಿಕಾರ್ಥವಾಗಿರುತ್ತದೆ.

ಅನುಮಂತಾ ವಿಶಸಿತಾ ನಿಹಂತಾ ಕ್ರಯವಿಕ್ರಯೀ ।
ಸಂಸ್ಕರ್ತಾ ಚೋಪಹರ್ತಾ ಚ ಖಾದಕಶ್ಚೇತಿ ಘಾತಕಾಃ ॥
(ಮನುಸ್ಮೃತಿ, 5 -51)

ಕೊಲ್ಲುವುದಕ್ಕೆ ಒಪ್ಪಿಗೆ ಕೊಟ್ಟವನು, ಅಂಗಾಂಗಗಳನ್ನು ಕತ್ತರಿಸಿ ಬೇರೆ ಮಾಡುವವನು, ಕೊಂದವನು, ಮಾರುವವನು, ಕೊಳ್ಳುವವನು, ಬೇಯಿಸುವವನು, ಒದಗಿಸುವವನು, ತಿನ್ನುವವನು - ಇಷ್ಟು ಜನರೂ ಘಾತಕರೆಂದು ಲೆಕ್ಕಿಸಲ್ಪಡುತ್ತಾರೆ.

ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।
ಚತ್ವಾರಿ ಸಂಪ್ರವರ್ಧಂತೇ
ಕೀರ್ತಿರಾಯುರ್ಯಶೋ ಬಲಮ್ ॥
(ಮಹಾಭಾರತ, ಉದ್ಯೋಗ, 39-74)

ನಿತ್ಯವೂ ಹಿರಿಯರಿಗೆ ಅಭಿವಾದನೆ ಮಾಡಿ ಅವರ ಸೇವೆಯನ್ನು ಮಾಡತಕ್ಕವನಿಗೆ, ಕೀರ್ತಿ, ಆಯಸ್ಸು, ಒಳ್ಳೆಯ ಹೆಸರು ಮತ್ತು ಬಲ - ಈ ನಾಲ್ಕು ವರ್ಧಿಸುತ್ತವೆ.

ಅಹನ್ಯಹನಿ ದಾತವ್ಯಂ ಅದೀನೇನಾಂತರಾತ್ಮನಾ ।
ಸ್ತೋಕಾದಪಿ ಪ್ರಯತ್ನೇನ ದಾನಮಿತ್ಯಭಿಧೀಯತೇ ॥
(ಅತ್ರಿಸಂಹಿತಾ, 1 -40)

ಪ್ರತಿದಿನವೂ ಮನಸ್ಸಿನಲ್ಲಿ ವ್ಯಥೆಪಡದೆ, ತನಗಿರುವ ಅಲ್ಪದಲ್ಲೇ ಯತ್ನದಿಂದ ಇತರರಿಗೆ ಕೊಡಬೇಕು. ಇದಕ್ಕೆ ದಾನವೆಂದು ಹೆಸರು.

ಆದಿತ್ಯಚಂದ್ರಾವನಿಲಾನಲೌ ಚ
ದ್ಯೌರ್ಭೂಮಿರಾಪೋ ಹೃದಯಂ ಯಮಶ್ಚ ।
ಅಹಶ್ಚ ರಾತ್ರಿಶ್ಚ ಉಭೇ ಚ ಸಂಧ್ಯೇ
ಧರ್ಮಶ್ಚ ಜಾನಾತಿ ನರಸ್ಯ ವೃತ್ತಮ್ ।
(ಮಹಾಭಾರತ, ಆದಿ. 74-30)

ಸೂರ್ಯ, ಚಂದ್ರ, ವಾಯು, ಅಗ್ನಿ, ಆಕಾಶ, ಭೂಮಿ, ಜಲ, ಹೃದಯ, ಯಮ, ಅಹೋರಾತ್ರಗಳು, ಎರಡು ಸಂಧ್ಯಾಕಾಲಗಳು ಮತ್ತು ಧರ್ಮ ಪುರುಷ - ಇವರಿಗೆ ಮನುಷ್ಯನ ನಡತೆ ತಿಳಿದಿರುತ್ತದೆ.

ಪ್ರಳಯಾತೀತ ಪರಮಾತ್ಮ - ಸದ್ರೂಪ ಸಾಕ್ಷಿ

ಶ್ರೀ ಗೌರೀಸುತ
ಬನಶಂಕರಿ 3ನೇ ಹಂತ, ಬೆಂಗಳೂರು

ಭಗವದ್ಗೀತೆಯ 9ನೇ ಅಧ್ಯಾಯದ (ರಾಜ ವಿದ್ಯಾರಾಜ ಗುಹ್ಯಯೋಗದ) 7ನೇ ಮತ್ತು 8ನೇ ಶ್ಲೋಕಗಳು ಹೀಗಿವೆ.

ಸರ್ವಭೂತಾನಿ ಕೌಂತೇಯ ಪ್ರಕೃತಿಂ ಯಾಂತಿ ಮಾಮಿಕಾಂ।
ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಮ್॥
ಪ್ರಕೃತಿಮ್ ಸ್ವಾಮ ವಷ್ಟಭ್ಯ ವಿಸೃಜಾಮಿ ಪುನಃ ಪುನಃ।
ಭೂತಗ್ರಾಮಮಿಮಂ ಕೃತ್ಸ್ನಂ ಅವಶಂ ಪ್ರಕೃತೇರ್ವಶಾತ್॥

ಕಲ್ಪಾಂತದಲ್ಲಿ ಎಲ್ಲಾ ಜೀವರಾಶಿಗಳೂ ನನ್ನ ಪಕೃತಿಯಲ್ಲಿ ಲೀನವಾಗುತ್ತವೆ. ಮತ್ತೊಂದು ಕಲ್ಪವು ಪ್ರಾರಂಭವಾದಾಗ ನನ್ನ ಶಕ್ತಿಯಿಂದ ಮತ್ತೆ ಅವುಗಳನ್ನು ಸೃಷ್ಟಿಸುತ್ತೇನೆ. ಆದ್ದರಿಂದ ವಿಶ್ವದ ವ್ಯವಸ್ಥೆಯು ನನಗೆ ಅಧೀನವಾಗಿದೆ. ನನ್ನ ಶಕ್ತಿ ಸಂಕಲ್ಪಗಳಿಂದ ಮತ್ತೆ ರೂಪತಾಳುತ್ತವೆ ಎಂದು ಇದನ್ನು ಅರ್ಥೈಸಬಹುದು.

ಅಂದರೆ ಸ್ಥೂಲವಾಗಿ ಈ ಐಹಿಕ ವಿಶ್ವದ ಸೃಷ್ಟಿ ಸ್ಥಿತಿ, ಲಯಗಳು ದೇವೋತ್ತಮನಾದ ಪ್ರಥಮಪುರುಷನ ಸಂಕಲ್ಪವನ್ನು ಸಂಪೂರ್ಣವಾಗಿ ಅವಲಂಬಿಸಿವೆ ಎಂದು ಹೇಳಬಹುದು. ಮೇಲಿನ ಶ್ಲೋಕದಲ್ಲಿ ಕಲ್ಪಕ್ಷಯೇ, ಕಲ್ಪಾದೌ ಅಂದರೆ ಕಲ್ಪಾಂತ್ಯದಲ್ಲಿ, ಕಲ್ಪಾದಿಯಲ್ಲಿ ಎಂಬೆರೆಡು ಪದಗಳು ಉಪಯೋಗವಾಗಿವೆ. ಕಲ್ಪಾಂತ್ಯದಲ್ಲಿ ಎಂದರೆ ಸಾಮಾನ್ಯವಾಗಿ ಬ್ರಹ್ಮನು ಮರಣ ಹೊಂದಿದಾಗ ಎಂದು ಹೇಳಬಹುದು. ಇದಕ್ಕೆ ಪ್ರಳಯಕಾಲವೆಂದು ಹೇಳುವುದುಂಟು. ಪ್ರಳಯಕಾಲವನ್ನು ನಮ್ಮ ಹಿರಿಯರು ಬಹಳ ವಿಪುರಾರ್ಥದಲ್ಲಿ ಬಳಸಿದ್ದಾರೆ. ಇದನ್ನು ಸ್ವಲ್ಪ ವಿಮರ್ಶಿಸುವುದು ಇಲ್ಲಿ ಪ್ರಸ್ತುತ.

ಮಾನವನ ಆಯುಃ ಪ್ರಮಾಣವು ಸಾಮಾನ್ಯವಾಗಿ ನೂರು ವರ್ಷ ಎನ್ನಲಾಗಿದೆ. ಹಾಗೆಯೇ ಬ್ರಹ್ಮನ ಆಯುಷ್ಯವೂ ನೂರು ಬ್ರಹ್ಮ ವರ್ಷಗಳು ಎಂದು ಹೇಳಲಾಗಿದೆ. ಮಾನವನ ವರ್ಷಕ್ಕೂ ಬ್ರಹ್ಮನ ವರ್ಷಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಈ ಕಾಲ ಗಣನೆಯನ್ನು ಪಂಚ ಪ್ರಳಯಗಳನ್ನು ಮುಂದೆ ಸ್ಪರ್ಶಿಸೋಣ.

ಬ್ರಹ್ಮನ ಮರಣ ಎಂದು ಹೇಳಲಾಗಿದೆ. ಬ್ರಹ್ಮನಿಗೆ ಮರಣವೇ? ಎಂಬುದು ಜಿಜ್ಞಾಸೆ. ಹೌದು. ಪ್ರಳಯಾಂತ್ಯಕಾಲದಲ್ಲಿ ಬ್ರಹ್ಮನಿಗೆ ನಾಶವು ಸಂಭವಿಸುತ್ತದೆ ಎಂದು ಪುರಾಣಗಳು ಹೇಳುತ್ತವೆ. ಆಗ ಮತ್ತೆ ಸೃಷ್ಟಿ ಹೇಗೆ? ಎಂಬುದು ಪ್ರಶ್ನೆ. ಬ್ರಹ್ಮನ ಹಗಲು ಮುಗಿದ ನಂತರ ಬ್ರಹ್ಮನ ರಾತ್ರಿಯಲ್ಲಿ ಬ್ರಹ್ಮನ ನಿದ್ದೆ. ಬ್ರಹ್ಮನ ಹಗಲು ಮುಗಿದ ಕೂಡಲೇ ಒಂದು ಪ್ರಳಯವು ಸಂಭವಿಸುತ್ತದೆ. ಬ್ರಹ್ಮ ನಿದ್ದೆಯಿಂದ ಎದ್ದು ಮತ್ತೆ ಸೃಷ್ಟಿಯನ್ನು ಮಾಡುತ್ತಾನೆ. ಆದರೆ ಬ್ರಹ್ಮನ ಮರಣವಾದ ನಂತರ ಸೃಷ್ಟಿ ಹೇಗೆ? ಎಂಬುದು ಪ್ರಶ್ನೆ. ಇದಕ್ಕೆ ಮೇಲೆ ಉಲ್ಲೇಖಿಸಿದ ಶ್ಲೋಕದಲ್ಲಿ ಸಮಾಧಾನವಿದೆ. ಕಲ್ಪಾಂತ್ಯದಲ್ಲಿ ನಾಶವಾದ ಜಗತ್ತನ್ನು ಮತ್ತೆ ಕಲ್ಪಾದಿಯಲ್ಲಿ ಸೃಷ್ಟಿಸುತ್ತೇನೆ ಎಂದು ಹೇಳಲ್ಪಟ್ಟಿದೆ. ಇಲ್ಲಿ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ. ಮಹಾಪ್ರಳಯವಾದಾಗ ಸರ್ವವೂ (ಬ್ರಹ್ಮ ಸಹಿತ) ನಾಶ ಹೊಂದುತ್ತದಲ್ಲ, ಆದರೆ ಮತ್ತೆ ಸೃಷ್ಟಿಯಾಗುವುದು ಯಾರಿಂದ? ಇಲ್ಲಿ ಮುಖ್ಯವಾಗಿ ನಾವು ಅರಿಯಬೇಕಾದದ್ದು ಒಂದು ಪ್ರಮುಖ ವಿಚಾರ. ಮೇಲ್ಕಂಡ ಶ್ಲೋಕದಲ್ಲಿ **'ಸರ್ವಭೂತಾನಿ ಪ್ರಕೃತಿಂ ಯಾಂತಿ ಮಾಮಿಕಾಮ್'** ಎಂದು ಹೇಳಿದೆ. ಅಂದರೆ ಪ್ರಳಯ ಕಾಲದಲ್ಲಿ ಜೀವಿಗಳೆಲ್ಲವೂ ನನ್ನನ್ನು ಪ್ರವೇಶಿಸುತ್ತವೆ. ಎಂದು. ಅಂದರೆ ಆತನಿಗೆ ಮರಣವಿಲ್ಲವೆಂದಾಯಿತು. ಆತನಿಗೆ ಮರಣವಿಲ್ಲವೆಂದಾಗ ಪುನಃ ಸೃಷ್ಟಿ ಆತನಿಂದಲೇ ಆಗುತ್ತದೆಯಲ್ಲವೆ? ಇದಕ್ಕೆ ಶ್ಲೋಕದ ಮುಂದಿನ ಭಾಗ ಸಾಕ್ಷಿಯನ್ನು ಒದಗಿಸುತ್ತದೆ. **'ವಿಸೃಜಾಮ್ಯಹಂ'** ಎಂಬಲ್ಲಿಗೆ ಇದು ಸ್ಪಷ್ಟವಾಯಿತು. ಅಲ್ಲಿಗೆ ಆತನಿಗೆ - ಆ ಪರಮಾತ್ಮನಿಗೆ - ಆ ಪರಬ್ರಹ್ಮನಿಗೆ ಸಾವಿಲ್ಲ ಎನ್ನುವುದು ದಿಟ. ಇದನ್ನೇ ಸತ್ಯ ಸ್ವರೂಪ, ಸದ್ರೂಪ ಎಂದು ಹೇಳಲಾಗಿದೆ. ಈ ಸ್ವರೂಪವು ಅವ್ಯಯವಾದದ್ದು ಇದನ್ನೇ ಮತ್ತೆ ಗೀತೆಯಲ್ಲಿ ಸೂಕ್ಷ್ಮವಾಗಿ

ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ।
ಉದಾಸೀನ ವದಾಸೀನಮ್ ಅಸಕ್ತಂ ತೇಷು ಕರ್ಮಸು॥
ಅವಜಾನಂತಿ ಮಾಂ ಮೂಢಾಃ
ಮಾನುಷೀಂ ತನುಮಾಶ್ರಿತಮ್।
ಪರಂ ಭಾವಮಜಾನಂತಃ ಮಮ ಭೂತ ಮಹೇಶ್ವರಮ್॥
(ಭ.ಗೀ - 9:9,11)

ಎಂದು ಹೇಳಿದೆ. ಈ ಸೃಷ್ಟಿ, ಸ್ಥಿತಿ, ಲಯಗಳಿಂದ ಯಾವುದೇ ರೀತಿಯ ದ್ವಂದ್ವಗಳಿಗೆ ಆತನು ಸಿಲುಕಿಕೊಳ್ಳದೆ ತಟಸ್ಥನಾಗಿರುತ್ತಾನೆ. ತನ್ನ ಕಾರ್ಯವನ್ನು ತಾನು ನಿರಾತಂಕವಾಗಿ ನಡೆಸಿಕೊಂಡು ಹೋಗುತ್ತಿರುತ್ತಾನೆ. ತನ್ನ ಕಣ್ಣ ಮುಂದೆ ಸೃಷ್ಟಿ ಸ್ಥಿತಿ, ಲಯಗಳೆಂಬ ಕಾರ್ಯಗಳು ಸುಗಮವಾಗಿ ನಿರ್ವಹಿಸುತ್ತಿರುತ್ತಾನೆ. ಆದ್ದರಿಂದ ಅವನು ಅವ್ಯಯನು ಎಂದು ತಿಳಿಯಬೇಕು. ಇದನ್ನು ಅರಿಯದ ಮೂಢರು ಮಾನವಾಕೃತಿಯಾಗಿರುವ ಆತನನ್ನು ಸರಿಯಾಗಿ ಅರಿತುಕೊಳ್ಳುವುದಿಲ್ಲ, ಅವರಿಗೆ ಆತನ ಸತ್ಯ ಸ್ವರೂಪ ಅರಿವಾಗುವುದಿಲ್ಲವೆಂದು ಇಲ್ಲಿ ಸ್ಪಷ್ಟಪಡಿಸಲಾಗಿದೆ.

ಮತ್ತಷ್ಟು ವಿಶದವಾಗಿ ಹೇಳಬೇಕೆಂದರೆ, ಶರೀರವೆಂಬ ಭೂಮಿಯಲ್ಲಿ ಅವಸ್ಥಾತ್ರಯದಲ್ಲಿ (ಜಾಗ್ರತ, ಸ್ವಪ್ನ ಸುಷುಪ್ತಿ), ಏಕವಿಧವಾಗಿ, ವರ್ತಮಾನದಲ್ಲಿ ಇರುವಂತೆಯೇ, ಗತಿಸಿದ ದಿನಗಳಲ್ಲಿ (ಭೂತಕಾಲದಲ್ಲಿ), ಬರುವ ದಿನಗಳಲ್ಲಿ (ಭವಿಷ್ಯತ್ಕಾಲದಲ್ಲಿ), ವಾರಗಳು, ಮಾಸಗಳು, ವರ್ಷಗಳು, ಯುಗಗಳಲ್ಲಿ, ಬ್ರಹ್ಮಾದಿ ಪ್ರಳಯಗಳಲ್ಲಿ ಚೇತನಾಶಕ್ತಿಯಾದ ಆತನು ಇರುತ್ತಾನೆಂದು ಹೇಳಿರುವುದರಿಂದ ಆತ ಸತ್ಯಸ್ವರೂಪಿ ಎಂದು ಹೇಳಬೇಕು. ಅಲ್ಲದೆ ಉಪದ್ರವ ಕಾರಣಗಳಾದ (ನೋವನ್ನುಂಟು ಮಾಡುವುದು) ಶರೀರ ತ್ರಯಗಳು (ಸ್ಥೂಲ, ಸೂಕ್ಷ್ಮ, ಕಾರಣ), ಜ್ಞಾನೇಂದ್ರಿಯಗಳು (ಶಬ್ದ, ಸ್ಪರ್ಶ, ರೂಪ, ರಸ, ಗಂಧ - ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗು), ಕರ್ಮೇಂದ್ರಿಯಗಳು (ವಾಕ್ಪಾಣಿ ಪಾದ ಪಾಯೂಪಸ್ಥಗಳು - ಬಾಯಿ, ಕೈ, ಕಾಲು, ಗುದ, ಗುಹ್ಯ), ಪಂಚಪ್ರಾಣಗಳು (ಪ್ರಾಣ, ಅಪಾನ, ಉದಾನ, ವ್ಯಾನ, ಸಮಾನ), ಅಂತರಿಂದ್ರಿಯ ಚತುಷ್ಟಯಗಳು (ಮನಸ್ಸು ಬುದ್ಧಿ ಚಿತ್ತ ಅಹಂಕಾರ) ನಾನಲ್ಲವೆಂದು ಭಾವಿಸುವುದರಿಂದ ಸಮಸ್ತ ಬಾಹ್ಯಾಭ್ಯಂತರ ದೃಶ್ಯ ಸಮೂಹವನ್ನು ಬಿಡಲು ಸಿದ್ಧವಿರುವುದರಿಂದ ಆ ಪರಮಾತ್ಮನನ್ನು ಸತ್ಯಸ್ವರೂಪನೆಂದು ಬಣ್ಣಿಸಲಾಗಿದೆ, ದೃಢಪಡಿಸಲಾಗಿದೆ. ಆದ್ದರಿಂದ ಈ ನಿರ್ಲಿಪ್ತ ಸದ್ರೂಪ, ಸರ್ವಸಾಕ್ಷಿಯೇ ಈ ಬ್ರಹ್ಮಾಂಡ ಶಕ್ತಿ ಎನ್ನುವುದು ನಿರ್ವಿವಾದ. ಆದ್ದರಿಂದಲೇ ಬ್ರಹ್ಮ ಪ್ರಳಯ, ಮಹಾಪ್ರಳಯಾನಂತರವೂ ಆತನು ಉಳಿದಿದ್ದು ಮತ್ತೆ ಜಗತ್ಸೃಷ್ಟಿಯನ್ನು ಕೈಗೊಳ್ಳುತ್ತಾನೆ.

ಇನ್ನುಳಿದಂತೆ ಬ್ರಹ್ಮಾದಿ ಪ್ರಳಯಗಳ ವಿವರಣೆಯನ್ನು ಗಮನಿಸೋಣ. ಪ್ರಳಯವೆಂಬುದು ಲಯದ ಪರ್ಯಾಯ. ನಾಶವಾಗುವುದು, ಲೀನವಾಗುವುದು ಎಂದರ್ಥ. ಪ್ರಪಂಚ ಪ್ರಕೃತಿಯಲ್ಲಿ ಲೀನವಾಗುವುದು ಎಂದು ಹೇಳಬಹುದು. ಬೃಹದಾಕಾರವಾಗಿ ಬೆಳೆಯುವ ಆಲದ ಮರವು ಅದರ ಸಣ್ಣ ಬೀಜದಲ್ಲಿ ಅಡಗಿರುವಂತೆ, ಕಂಗೊಳಿಸುವ ಬಣ್ಣದ ನವಿಲು ತನ್ನ ಮೊಟ್ಟೆಯಲ್ಲಿನ ದ್ರವದಲ್ಲಿ ಬೆರೆತಿರುವಂತೆ ಪ್ರಕೃತಿಯಲ್ಲಿ ಪ್ರಪಂಚ ಅಡಗಿರುತ್ತದೆ ಎಂದುಕೊಳ್ಳಬಹುದು. ಇದು ಪ್ರಳಯದ ಗೂಢಾರ್ಥ. ಸರ್ವವೂ ನಾಶವಾಗುವುದು ಎಂಬುದು ಬಹಿರಾರ್ಥ.

ಇಂಥಹ ಪ್ರಳಯಗಳನ್ನು ಪಂಚ ಪ್ರಳಯಗಳೆಂದು ವಿಭಜಿಸಿದ್ದಾರೆ. ಅವು - ನಿತ್ಯ ಪ್ರಳಯ, ನೈಮಿತ್ತಿಕ ಪ್ರಳಯ (ಮನು / ಆಗಂತುಕ ಪ್ರಳಯ), ದೈನಂದಿನ ಪ್ರಳಯ (ಬ್ರಹ್ಮನ ಹಗಲಿನಲ್ಲಾಗುವ ಪ್ರಳಯ), ಕಲ್ಪಾಂತ ಪ್ರಳಯ (ಬ್ರಹ್ಮ ಪ್ರಳಯ / ಅವಾಂತರ ಪ್ರಳಯ), ಮಹಾ ಪ್ರಳಯ (ಅತ್ಯಂತಿಕ ಪ್ರಳಯ)ಗಳು.

ಇನ್ನು ಈ ಪ್ರಳಯಗಳಿಗೆ ಕಾಲದ ಪರಿಧಿಯನ್ನು ನಮ್ಮ ವಾಙ್ಮಯ ನಿರ್ದೇಶಿಸಿದೆ. ಈ ಕಾಲದ ಪರಿಧಿಯ ಅವಲೋಕನ ಇಲ್ಲಿ ಪ್ರಸ್ತುತ. ಇದರ ವಿವರ ಹೀಗೆ:

ಅಕ್ಷರ ಮಾಲೆಯ ಒಂದು ಲಘುವರ್ಣವನ್ನುಚ್ಚರಿಸುವ ಕಾಲ ಅಥವಾ ಕಣ್ಣುರೆಪ್ಪೆಯನ್ನಾಡಿಸಲು ಹಿಡಿಯುವ ಕಾಲವನ್ನು **'ನಿಮೇಷ'** ಎಂದರು. ಹದಿನೆಂಟು ನಿಮೇಷಗಳು ಒಂದು **'ಕಾಷ್ಠ'**. ಮುವ್ವತ್ತು ಕಾಷ್ಠಗಳು ಒಂದು **'ಕಲೆ'**, ಮುವ್ವತ್ತು ಕಲೆಗಳು ಒಂದು **'ಕ್ಷಣ'**, ಹನ್ನೆರಡು ಕ್ಷಣಗಳು ಒಂದು **'ಮುಹೂರ್ತ'** (ಎರಡು ಗಳಿಗೆಗಳ ಅವಧಿ - 48 ನಿಮಿಷಗಳ ಕಾಲ). ಮುವ್ವತ್ತು ಮುಹೂರ್ತಗಳು ಸೇರಿ ಒಂದು **'ದಿನ'** (ಅಹೋರಾತ್ರಿ). ಈ ದಿನದಲ್ಲಿ ಶರೀರತ್ರಯ, ದಶೇಂದ್ರಿಯಗಳು, (ಜ್ಞಾನ, ಕರ್ಮೇಂದ್ರಿಯಗಳು), ದಶವಿಧ ಪ್ರಾಣಗಳು (ಪಂಚ ಪ್ರಾಣಗಳ ಜೊತೆ ಪಂಚ ಉಪಪ್ರಾಣಗಳಾದ ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯಗಳು ಸೇರಿ), ಅಂತರಿಂದ್ರಿಯಗಳು ತಮ್ಮ ತಮ್ಮ ವೃತ್ತಿಗಳನ್ನು ಬಿಟ್ಟು ಅದಕ್ಕೆ ಕಾರಣವಾದ ನಿದ್ರಾರೂಪವೆನ್ನುವ ಅಜ್ಞಾನವೆಂಬ ಕತ್ತಲಿನಲ್ಲಿ ನಶಿಸುತ್ತವೆ. ಹೀಗೆ ನಶಿಸಿದಾಗ ಜಾಗ್ರತ, ಸ್ವಪ್ನ ರೂಪವಾದ ಸಕಲ ಇಂದ್ರಿಯ ರೂಪವಾದ ಪ್ರಪಂಚವು (ಈ ದೇಹವೆನ್ನಬಹುದು) ಪ್ರಕೃತಿಯಲ್ಲಿ ಲೀನವಾಗುತ್ತದೆ. ಸುಷುಪ್ತಿ, ಇದನ್ನೇ ದಿನ ಪ್ರಳಯ, ನಿತ್ಯ ಪ್ರಳಯವೆನ್ನುತ್ತಾರೆ. ನಿದ್ದೆಯ ನಂತರ ಜಾಗ್ರತ ಸ್ಥಿತಿಗೆ ಮರಳಿದಾಗ ಪುನಃ ಸೃಷ್ಟಿ ಆಯಿತೆಂದು ತಿಳಿಯಬೇಕು.

ಹೀಗೆ ದಿನಗಳು ಹದಿನೈದು ಸೇರಿ **'ಪಕ್ಷ'**, ಎರಡು ಪಕ್ಷಗಳು (ಶುಕ್ಲ ಕೃಷ್ಣ) **'ಮಾಸ'**ವಾಗುತ್ತದೆ. (ನಮ್ಮ ಗಣನೆಯಲ್ಲಿನ ಒಂದು ಮಾಸವು ಪಿತೃದೇವತೆಗಳಿಗೆ ಒಂದು ಹಗಲು). ಎರಡು ಮಾಸಗಳು ಒಂದು 'ಋತು'. ಮೂರು ಋತುಗಳು ಒಂದು **'ಅಯನ'**. ಎರಡು ಅಯನಗಳು (ಉತ್ತರಾಯನ, ದಕ್ಷಿಣಾಯನ) ಒಂದು **'ವರ್ಷ'** ನಮ್ಮ ಒಂದು ವರ್ಷದ ಕಾಲಮಾನ ದೇವತೆಗಳಿಗೆ ಒಂದು ದಿನ. ಹೀಗೆ ದೇವ ದಿನಗಳು, ವಾರಗಳು, ಮಾಸಗಳ ಕ್ರಮದಲ್ಲಿ ಹನ್ನೆರಡು ಸಾವಿರ ವರ್ಷಗಳನ್ನು ಗಣಿಸಿದರೆ ನಲವತ್ತು ಮೂರು ಲಕ್ಷ ಇಪ್ಪತ್ತು ಸಾವಿರ (43,20,000) ಮಾನವ ವರ್ಷಗಳಾಗುತ್ತವೆ. ಇದೊಂದು ಮಹಾಯುಗ. ಅಂದರೆ ಈ ಮಹಾಯುಗದಲ್ಲಿ 17,28,000 ವರ್ಷಗಳು ಕೃತಯುಗ, 12,96,000 ವರ್ಷಗಳು ತ್ರೇತಾಯುಗ, 8,64,000 ವರ್ಷಗಳು ದ್ವಾಪರಯುಗ, 4,32,000 ವರ್ಷಗಳು ಕಲಿಯುಗದ ಅವಧಿಗಳು. ಎಪ್ಪತ್ತೊಂದು ಮಹಾ ಯುಗಗಳು ಸೇರಿ ಒಂದು ಮನ್ವಂತರವಾಗುತ್ತದೆ. ನಾಲ್ಕು ಮನ್ವಂತರಗಳು ಕೂಡಿದರೆ ಬ್ರಹ್ಮನಿಗೆ

ಒಂದು ಹಗಲು. ಈ ಹಗಲು ಒಂದು ಸಾವಿರ ಮಹಾಯುಗಗಳ ಪರಿಮಿತಿಯುಳ್ಳದ್ದು. (432 ಕೋಟಿ ವರ್ಷಗಳು ಬ್ರಹ್ಮನ ಹಗಲು). ಈ ವಿಧವಾದ ಬ್ರಹ್ಮನ ಹಗಲಿನಲ್ಲಿ ಹದಿನಾಲ್ಕು ಮನುಗಳ (ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೇವತ, ಚಾಕ್ಷುಷ, ವೈವಸ್ವತ, ಸೂರ್ಯ ಸಾವರ್ಣಿ, ಬ್ರಹ್ಮ ಸಾವರ್ಣಿ, ದಕ್ಷ ಸಾವರ್ಣಿ, ಧರ್ಮ ಸಾವರ್ಣಿ, ಭದ್ರ ಸಾವರ್ಣಿ, ದೇವ ಸಾವರ್ಣಿ, ಇಂದ್ರ ಸಾವರ್ಣಿ) ಪ್ರಳಯ ಗಳು, ಅನೇಕ ಯುಗ ಸಂಧಿಗಳ ಪ್ರಳಯಗಳು ಆಗುತ್ತವೆ. ಇವುಗಳನ್ನು ನೈಮಿತ್ತಿಕ / ಆಗನ್ತುಕ ಪ್ರಳಯಗಳೆಂದು ಕರೆಯಲಾಗಿದೆ.

ಬ್ರಹ್ಮನ ಹಗಲಿನಲ್ಲಿ ಅನೇಕ ಪ್ರಾಣಿಗಳು ನಶಿಸುತ್ತವೆ. ದಿನಾಂತ್ಯದಲ್ಲಿ ಬ್ರಹ್ಮ ನಿದ್ರಿಸುತ್ತಾನೆ. ಅದು ಬ್ರಹ್ಮನ ಸುಷುಪ್ತಿ. ಈ ನಿದ್ರೆಯನ್ನು ಮಹಾಮಾಯೆ ಎಂದು ಕರೆಯುತ್ತಾರೆ. ಈ ಮಹಾಮಾಯೆಯ ಕಾಲದಲ್ಲಿ ಸಕಲ ಜೀವಿಗಳ ವರ್ತನೆಗಳು ವಿರಾಮವನ್ನು ಹೊಂದುತ್ತವೆ. ಇಲ್ಲಿ ಪಂಚ ಮಹಾಭೂತಗಳು ಮಾತ್ರ ಉಳಿದಿರುತ್ತವೆ. ಇದನ್ನು ದೈನಂದಿನ ಪ್ರಳಯ ವೆನ್ನಲಾಗಿದೆ. ಇಲ್ಲಿ ಬ್ರಹ್ಮನಿಂದ ಪುನಃ ಸೃಷ್ಟಿ ಆಗುತ್ತದೆ.

ಬ್ರಹ್ಮನ ಹಗಲಿನ ಪ್ರಮಾಣದಷ್ಟೇ ಬ್ರಹ್ಮನ ರಾತ್ರಿಯೂ ವಿಸ್ತರಿಸಿರುತ್ತದೆ. ಹೀಗೆ ಬ್ರಹ್ಮನ ದಿನಗಳ ಲೆಕ್ಕದಲ್ಲಿ (ಬ್ರಹ್ಮ ನ ಹಗಲು ರಾತ್ರಿ ಸೇರಿ ಒಂದು ಬ್ರಹ್ಮ ದಿನ) ಒಂದು ನೂರು ವರ್ಷಗಳಾದರೆ ಬ್ರಹ್ಮ ಸುಖಸ್ಥಾನವನ್ನು ಸೇರುತ್ತಾನೆ. ಅಂದರೆ ಇದು ಬ್ರಹ್ಮನ ಮರಣ. (ಇಲ್ಲಿ ಬ್ರಹ್ಮನಾಕ ಎಂದು ಹೇಳುವುದುಂಟು. **"ಕಂ ಸುಖಂ, ತನ್ನ ಭವತೀತ್ಯಕಂ - ತನ್ನಾಸ್ತ್ಯತ್ರೇತಿ ನಾಕಃ"** ಎಂದು ವ್ಯುತ್ಪತ್ತಿ, **ಕಂ** - ಎಂದರೆ ಸುಖ. ಅದು ಇಲ್ಲದಿರುವುದು **ಅಕಂ** - ಅಂದರೆ ದುಃಖ. ಈ ದುಃಖ ಇಲ್ಲದಿರುವುದೇ ನಾಕ). ಬ್ರಹ್ಮನ ಮರಣ ಕಾಲದಲ್ಲಿ ಮೃತ್ಯು ಸಕಲ ಪ್ರಾಣಿಗಳನ್ನು ಒಂದೇಟಿಗೆ ನಾಶಮಾಡುತ್ತದೆ. ಶಿವನು ಫಾಲನೇತ್ರವನ್ನು ತೆರೆದು ನೋಡುತ್ತಾನೆ. ಹನ್ನೆರಡು ಸೂರ್ಯರು - ದ್ವಾದಶಾದಿತ್ಯರು (ವಿವಸ್ವಾನ್, ಆರ್ಯಮಾ, ಪೂಷಾ, ತ್ವಷ್ಟಾ, ಸವಿತಾ, ಭಗಃ, ಧಾತಾ, ವಿಧಾತಾ, ವರುಣಃ, ಮಿತ್ರಃ, ಶಕ್ರಃ, ಉರುಪ್ರಮಃ - ಶ್ಲೋಕ ॥ ವಿವಸ್ವಾನರ್ಯ ಮಾಪೂಷಾ ತ್ವಷ್ಟಾಥ ಸವಿತಾ ಭಗಃ। ಧಾತಾ ವಿಧಾತಾ ವರುಣೋ ಮಿತ್ರಶ್ಶಕ್ರ್ಉರುಪ್ರಮಃ) ಪ್ರಬಲವಾಗಿ ಉರಿಯುತ್ತಾ ಪ್ರಕಾಶಿಸು ತ್ತಾರೆ. ಆಕಾಶದಲ್ಲಿ ಭಯಂಕರವಾದ ಬೆಂಕಿಹುಟ್ಟಿ ಪ್ರಪಂಚ ವನ್ನು ನೀರಾಗಿಸುತ್ತದೆ. ಸಪ್ತಮಾರುತಗಳು (ಪ್ರವಹ, ಆವಹ, ಉದ್ವಹ, ಸಂವಹ, ನಿವಹ, ಪ್ರತಿವಹ, ಪರಾವಹ) ಬೀಸುತ್ತವೆ. ನವ ಮೇಘಗಳು (ಆವರ್ತ, ಸಂವರ್ತ, ಪುಷ್ಕರ, ದ್ರೋಣ, ಕಾಲ, ನೀಲ, ಅರುಣ, ತಮ, ವಾರುಣ) ಪ್ರಬಲವಾಗಿ ಧಾರಾಕಾರವಾದ ಮಳೆಯನ್ನು ಸುರಿಸುತ್ತವೆ. ಈ ಮಳೆ ಯಿಂದಾಗಿ ಸಪ್ತ ಸಾಗರಗಳು (ಕ್ಷಾರ, ಕ್ಷೀರ, ದಧಿ, ಘೃತ, ಇಕ್ಷು, ಸುರಾ, ಶುದ್ಧೋದಕ) ಒಂದಾಗಿ ಭೂಮಂಡಲವನ್ನು ಮುಳಿಗಿಸುತ್ತವೆ. ಆ ನೀರಿನಲ್ಲಿ ಭೂಗೋಳವು ಒಂದು ಮಣ್ಣಿನ ಉಂಡೆ ಕರಗಿದಂತೆ ಕರಗಿ ಹೋಗುತ್ತದೆ. ತದನಂತರದಲ್ಲಿ ವಿಜೃಂಭಿ ಸುವ ಭೀಕರ ಬೆಂಕಿಯಿಂದ ಈ ನೀರೆಲ್ಲಾ ಕಾದು ಕೆಂಪಾದ ಕಬ್ಬಿಣದ ಮೇಲ್ಬಿದ್ದ ನೀರಿನಂತೆ ಆವಿಯಾಗಿ ಮಾಯವಾಗು ತ್ತದೆ. ಅನಂತರ ಈ ಬೆಂಕಿಯನ್ನು ಮಹಾಬಿರುಗಾಳಿ ನುಂಗಿ ಹಾಕುತ್ತದೆ. ಈ ಗಾಳಿಯು ಆಧಾರ ರಹಿತವಾದದ್ದರಿಂದ ಜೀವಿಗಳು ನಿದ್ರೆಯಲ್ಲಿ ನಶಿಸುವಂತೆ ಆಕಾಶದಲ್ಲಿ ನಶಿಸುತ್ತದೆ. ಶಬ್ದ ಗುಣಕವಾದ ಆಕಾಶವನ್ನು ಶ್ರವಣೇಂದ್ರಿಯ ಸ್ವರೂಪ ವಾದ ಮನಸ್ಸು ನುಂಗುವಂತೆ ಆ ಮಹಾಗಗನವನ್ನು ದೊಡ್ಡ ದಾದ ಆ ಮನಸ್ಸು ನುಂಗುತ್ತದೆ. ಅಹಂಕಾರವನ್ನು ಮಹಾಬುದ್ಧಿ (ಸಮಷ್ಟಿ ಜ್ಞಾನ) ನುಂಗುತ್ತದೆ. ಆ ಸಮಷ್ಟಿ ಜ್ಞಾನವನ್ನೇ ಮಹಾತತ್ತ್ವವೆಂದು ಹೇಳುತ್ತಾರೆ. ಆ ಮಹಾತತ್ತ್ವವನ್ನು ಮೂಲ ಪ್ರಕೃತಿ ತನ್ನಲ್ಲಿ ಅಡಗಿಸಿಕೊಂಡಿರುತ್ತದೆ. ಈ ಮೂಲ ಪ್ರಕೃತಿಯೇ ಮಾಯೆ, ಅವಿದ್ಯೆ, ಅವ್ಯಕ್ತ, ತಮಸ್, ಸುಷುಪ್ತಿ, ಪ್ರಕೃತಿ, ಆನಂದ ಎಂಬುದಾಗಿ ಹೇಳಲ್ಪಡುತ್ತದೆ. ಈ ಮೂಲ ಪ್ರಕೃತಿಯೇ (ಮೂಲ ಕಾರಣವೇ) ಬ್ರಹ್ಮ ಪ್ರಳಯವೆಂಬುದಾಗಿ ಹೇಳಲಾಗಿದೆ. ಹೀಗೆ ಆದಿ, ಅಂತ್ಯಗಳಿಲ್ಲದ, ಹೀಗೆ, ಹಾಗೆ ಎಂದು ಹೇಳಲಾಗದ ಅಜ್ಞಾನವು ಜೀವೇಶ್ವರರ (ತ್ವಂ ಪದದ ಲಕ್ಷ್ಯಾರ್ಥವಾದ ಪ್ರತ್ಯಗಾತ್ಮ ಜೀವ - ತತ್ ಪದದ ಲಕ್ಷ್ಯಾರ್ಥವಾದ ಪೂರ್ಣ ಬ್ರಹ್ಮ ಚೈತನ್ಯ ಈಶ್ವರ) ಐಕ್ಯ ಕಾಲದಲ್ಲಿ ನಶಿಸುತ್ತದೆ. ಇಂಥಹ ಅಜ್ಞಾನದ ನಾಶವೆ ಮಹಾಪ್ರಳಯವೆಂದು ಹೇಳಲಾಗಿದೆ. ಇದನ್ನೇ ಆತ್ಯಂತಿಕ ಪ್ರಳಯವೆಂದಿದ್ದಾರೆ.

ಈ ಪ್ರಳಯದಲ್ಲಿ ಕೂಡ ನಾಶವಾಗದೇ ಉಳಿದಿರುವವನೇ ಪರಬ್ರಹ್ಮ, ಪರಮಾತ್ಮ ಸದ್ರೂಪ. ಈ ಎಲ್ಲಾ ಪ್ರಳಯಗಳನ್ನು ಸಾಕ್ಷಿಯಾಗಿ ನೋಡುತ್ತಾ ಅದಕ್ಕೆ ಅತೀತವಾಗಿರುವನು, ಅವ್ಯಯನು, ಮಹಾಶಕ್ತಿ ಪುನಃ ಸೃಷ್ಟಿ ಕಾರ್ಯವನ್ನು ಪ್ರಾರಂಭಿಸುತ್ತಾನೆಂದು ನಮ್ಮ ಪುರಾಣಗಳು ಹೇಳುತ್ತವೆ.

ಹೀಗೆ ನಿತ್ಯ (ಸುಷುಪ್ತಾವಸ್ಥಾರೂಪ ಪ್ರಳಯ), ನೈಮಿತ್ತಿಕ (ಮನುಪ್ರಳಯ / ವಿಶೇಷ ಪ್ರಳಯ), ದೈನಂದಿನ (ಬ್ರಹ್ಮನ ಹಗಲಿನಲ್ಲಿ ನಡೆಯುವ ಪ್ರಳಯ), ಕಲ್ಪಾಂತ (ಬ್ರಹ್ಮ ಪ್ರಳಯ / ಅವಾಂತರ ಪ್ರಳಯ), ಮಹಾ (ಆತ್ಯಂತಿಕ ಪ್ರಳಯ) ಪ್ರಳಯಗಳಲ್ಲಿ ಬಾಧಿಸಲ್ಪಡದೆ, ಸಾಕ್ಷಿಯಾಗಿ ಆ ಪ್ರಳಯಗಳ ನ್ನೆಲ್ಲ ನೋಡುತ, ಭೂತ, ವರ್ತಮಾನ, ಭವಿಷ್ಯತ್ಕಾಲಗಳಲ್ಲಿ ಬದಲಾಗದೆ ಒಂದೇ ಸಮನೆ ಇರುವವನೇ ಸರ್ವಕಾಲ

ಪರಿಚ್ಛೇದ ಶೂನ್ಯನು, ಸದ್ರೂಪಕನು, ಪ್ರಳಯಾತೀತನು, ಬ್ರಹ್ಮಾನಂದ ಸ್ವರೂಪನು, ಪರಬ್ರಹ್ಮನು, ಪರಮಾತ್ಮನು. ಅವನೇ ಚಿರಂತನನು. ಜ್ಞಾನ ಸ್ವರೂಪನು, ಅವ್ಯಯನು, ಅಲಕ್ಷಿರಂಜನನು. ಈ ಸಮಸ್ತ ಅಂಡ, ಪಿಂಡ, ಬ್ರಹ್ಮಾಂಡಗಳಿಗೆ, ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣೀಭೂತನಾದವನು ಎಂದು ಹೇಳಲಾಗಿದೆ.

ಸಾಮಾನ್ಯರಿಗೆ ಇವೆಲ್ಲವೂ ಕಲ್ಪನೆಯೆ? ಸಾಧ್ಯವೇ? ಆಗಬಹುದೇ? ಎಂದೆನಿಸದೆ ಇರುವುದಿಲ್ಲ. ಅದರಲ್ಲಿ ಆಶ್ಚರ್ಯ ಪಡುವುದೇನಿಲ್ಲ, ಸಹಜವೇ! ಇದನ್ನು ಸಾಮಾನ್ಯ ಮಾನವರು ಊಹಿಸಿಕೊಳ್ಳುವುದು, ಅರಿತುಕೊಳ್ಳುವುದು ಸಾಧ್ಯವಾಗದಿರುವುದು ನೈಜವೇ! ಆದರೆ ತಪಸ್ಸಂಪನ್ನರು, ಮಹಾದ್ರಷ್ಟರು, ದೈವಾಂಶ ಸಂಭೂತರು ಇದನ್ನು ಅವಲೋಕಿಸುವುದು, ಅಲೌಕಿಕ ನೇತ್ರಗಳಿಂದ ದರ್ಶನ ಮಾಡುವುದು ಸಾಧ್ಯವಿರಬಹುದು. ಜ್ಞಾನಿಗಳು, ಸಂಶೋಧಕರು, ದಾರ್ಶನಿಕರು, ಮಹರ್ಷಿಗಳು ಈ ವಿಷಯಗಳ ಬಗ್ಗೆ ಅಧಿಕ ಬೆಳಕನ್ನು ಚೆಲ್ಲಿ ಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ತಿಳಿಸಿ ಹೇಳಬಹುದು. ಬರವಣಿಗೆಗಳ ಮೂಲಕ ಸಂದೇಹ ನಿವೃತ್ತಿಗಳನ್ನು ಮಾಡಬಹುದು. ನಮ್ಮ ಸಂಸ್ಕೃತಿ, ಜ್ಞಾನದ ಗಣಿಗಳಲ್ಲಿನ ರತ್ನಗಳನ್ನು ಹೊರತೆಗೆದು ಮುಂದಿನ ಪೀಳಿಗೆಗೆ ಇದರ ಅರಿವು ಮೂಡಿಸಬಹುದು. ಈ ಬಗೆಗಿನ ಆಶಾಭಾವವನ್ನು ಹೊಂದಿರುವುದು ಲೇಸು.

ಕೊನೆಯದಾಗಿ ಒಂದು ಮಾತು ಮಾತ್ರ ಸ್ಪಷ್ಟ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಜಗದ್ವ್ಯವಹಾರವನ್ನು ನಡೆಸುವುದು ಒಂದು ಅಲೌಕಿಕ ಚೇತನಾಶಕ್ತಿ ಎಂಬುದಂತೂ ನಿಜ. ಅದು ನಮ್ಮ ಯಾರ ಕೈಗೂ ಎಟುಕುವುದಂಥದ್ದಲ್ಲ. ಅದು ನಡೆಸುವಂತೆ ನಡೆಯಬೇಕಾದ ಪಾತ್ರಧಾರರು ಮಾತ್ರ ನಾವು ಎಂಬುದನ್ನು ತಿಳಿದುಕೊಂಡಲ್ಲಿ ಸರ್ವವೂ, ಸುಲಭ,ಸರಳ, ಸುಲಲಿತ.

ಆಧಾರಗಳು: 1. ಮತ್ಸ್ಯ ಪುರಾಣ, ಬ್ರಹ್ಮ, ಬ್ರಹ್ಮಾಂಡ ಪುರಾಣಗಳು. 2. ಸೀತಾ ರಾಮಾಂಜನೇಯ ಸಂವಾದವೆಂಬ ಯೋಗಶಾಸ್ತ್ರ

ಆರ್ಷಂ ಧರ್ಮೋಪದೇಶಂ ಚ ವೇದಶಾಸ್ತ್ರವಿರೋಧಿನಾ ।
ಯಸ್ತರ್ಕೇಣಾನು ಸಂಧತ್ತೇ ಸ ಧರ್ಮಂ ವೇದ ನೇತರಃ ॥
(ಮನುಸ್ಮೃತಿ, 12-106)
ಋಷಿಗಳ ಮಾತನ್ನೂ ಧರ್ಮೋಪದೇಶವನ್ನೂ ವೇದಗಳಿಗೂ ಶಾಸ್ತ್ರಗಳಿಗೂ ವಿರೋಧವಿಲ್ಲದಂತೆ ಯಾರು ತರ್ಕಮಾಡಿ ತಿಳಿಯುತ್ತಾನೆಯೋ ಅವನೇ ಧರ್ಮವನ್ನು ಚೆನ್ನಾಗಿ ಬಲ್ಲವನು.

ಇಜ್ಯಾಧ್ಯಯನದಾನಾನಿ ತಪಃ ಸತ್ಯಂ ಧೃತಿಃ ಕ್ಷಮಾ ।
ಅಲೋಭ ಇತಿ ಮಾರ್ಗೋಽಯಂ ಧರ್ಮಸ್ಯಾಷ್ಟವಿಧಃ ಸ್ಮೃತಃ ॥
(ಹಿತೋಪದೇಶ, ಮಿತ್ರಲಾಭ - 7)
ಧರ್ಮಕ್ಕೆ ಯಾಗ, ಅಧ್ಯಯನ, ದಾನ, ತಪಸ್ಸು, ಸತ್ಯ, ಧೈರ್ಯ, ಕ್ಷಮಾಗುಣ, ಲೋಭವಿಲ್ಲದಿರುವುದು, ಇವು ಎಂಟು ಮಾರ್ಗಗಳೆಂದು ಹೇಳಲಾಗಿದೆ.

ಉಪಾರ್ಜಿತಾನಾಮರ್ಥಾನಾಂ ತ್ಯಾಗ ಏವ ಹಿ ರಕ್ಷಣಂ ।
ತಟಾಗೋದರಸಂಸ್ಥಾನಾಂ ಪರೀವಾಹ ಇವಾಂಭಸಾಮ್ ॥
(ಹಿತೋಪದೇಶ, ಮಿತ್ರಲಾಭ - 118)
ಸಂಪಾದಿಸಿದ ಹಣದ ತ್ಯಾಗವೇ ಅದರ ರಕ್ಷಣೆಯಷ್ಟೇ? ಕೆರೆಯೊಳಗೆ ಸೇರಿದ ನೀರಿಗೆ ಕೋಡಿಯು ಹೇಗೋ ಹಾಗೆ!

ಉಪಕಾರಃ ಪರೋ ಧರ್ಮಃ
ಪರಾರ್ಥಂ ಕರ್ಮ ನೈಪುಣಂ ।
ಪಾತ್ರೇ ದಾನಂ ಪರಃ ಕಾಮಃ
ಪರೋ ಮೋಕ್ಷೋ ವಿತೃಷ್ಣತಾ ॥
(ಸುಭಾಷಿತರತ್ನ ಭಂಡಾಗಾರ)
ಪರೋಪಕಾರವೇ ದೊಡ್ಡ ಧರ್ಮ, ಇತರರಿಗಾಗಿ ಕೆಲಸ ಮಾಡುವುದೇ ಕಾರ್ಯ ನಿಪುಣತೆ, ಸುಪಾತ್ರರಲ್ಲಿ ದಾನ ಮಾಡುವುದೇ ಶ್ರೇಷ್ಠವಾದ ಆಶೆ, ಆಶೆಯಿಲ್ಲದಿರುವಿಕೆಯೇ ನಿಜವಾದ ಮೋಕ್ಷ.

ಉಭಯೋರ್ನಾಸ್ತಿ ಭೋಗೇಚ್ಛಾ
ಪರಾರ್ಥಂ ಧನಸಂಚಯಃ ।
ಕೃಪಣೋದಾರಯೋಃ ಪಶ್ಯ
ತಥಾಪಿ ಮಹದಂತರಮ್ ॥
(ಸುಭಾಷಿತಸುಧಾನಿಧಿ)
ಜಿಪುಣ ಮತ್ತು ಉದಾರಿ ಇವರಿಬ್ಬರಿಗೂ ತಾವು ಅನುಭವಿಸಬೇಕೆಂಬ ಇಚ್ಛೆ ಇಲ್ಲ, ಇಬ್ಬರೂ ಮತ್ತೊಬ್ಬರಿಗಾಗಿಯೇ ಹಣ ಕೂಡಿಡುವುದು. ಆದರೂ ಇವರಿಬ್ಬರಲ್ಲಿ ಇರುವ ಅಪಾರವಾದ ವ್ಯತ್ಯಾಸವನ್ನು ನೋಡು.

ಭಾರತೀಯ ಸಂಸ್ಕೃತಿಯ ಮೌಲ್ಯಗಳು

ಡಾ|| ಹೆಚ್.ಜಿ. ಶೇಷಗಿರಿ ಪ್ರಭು
ಹರಿಹರಪುರ

ಭಾರತೀಯ ಸಂಸ್ಕೃತಿ ಮತ್ತು ಸನಾತನ ಧರ್ಮ ಇಡೀ ಪ್ರಪಂಚದಲ್ಲಿಯೇ ಶ್ರೇಷ್ಠತಮ ಮತ್ತು ಜ್ಯೇಷ್ಠತಮ. ಪ್ರಾಯಶಃ ಇಡೀ ವಿಶ್ವವೇ ಕತ್ತಲೆಯಲ್ಲಿ ಮುಳುಗಿದ್ದಾಗ ಭಾರತ ಹೆಸರೇ ಸೂಚಿಸುವಂತೆ ಜ್ಞಾನದ ಬೆಳಕನ್ನು ನೀಡಿ ಅಜ್ಞಾನದ ಕತ್ತಲೆಯನ್ನು ಓಡಿಸಿದ ಕೀರ್ತಿ ಈ ದೇಶಕ್ಕೆ ಸಲ್ಲುತ್ತದೆ. ಇದು ಕೇವಲ ನಮ್ಮ ಹೊಗಳಿಕೆಯ ಮಾತಲ್ಲ, ಸಾವಿರಾರು ವರ್ಷಗಳ ಹಿಂದೆಯೇ ಈ ದೇಶಕ್ಕೆ ಭೇಟಿ ನೀಡಿದ ವಿದೇಶಿಯರ ಹೃದಯದಿಂದ ಬಂದ ಪ್ರಾಮಾಣಿಕ ಅನಿಸಿಕೆಗಳು. ಗ್ರೀಕ್ ದೇಶದ ದೊರೆ **ಅಲೆಗ್ಸಾಂಡರ್** ಈ ದೇಶದ ಮೇಲೆ ದಾಳಿ ಮಾಡುವ ಮುನ್ನ ತನ್ನ ಗುರು ಅರಿಸ್ಟಾಟಲ್‌ರನ್ನು ಭೇಟಿಯಾಗಿ, ತಾನು ಭಾರತಕ್ಕೆ ಹೋಗುತ್ತಿದ್ದೇನೆ ತಮಗೆ ಏನನ್ನು ತರಲಿ? ಎಂದು ಬಿನ್ನವಿಸಿಕೊಂಡಾಗ, ತನಗೆ **ರಾಮಾಯಣ, ಮಹಾಭಾರತ, ಭಗವದ್ಗೀತೆ** ಗ್ರಂಥಗಳು ಮತ್ತು ಅಲ್ಲಿಯ **ಪವಿತ್ರ ನದಿಯಾದ ಗಂಗೆಯ ಜಲ**ವನ್ನು ತೆಗೆದುಕೊಂಡು ಬಾ ಎಂದು ಆಜ್ಞಾಪಿಸಿದರಂತೆ. ಇದಕ್ಕಿಂತ ಬೇರೆ ಉದಾಹರಣೆ ಬೇಕೇ? ಭಾರತದ ದೇಶ ಧರ್ಮಭೂಮಿ, ಕರ್ಮಭೂಮಿ, ತ್ಯಾಗ ಭೂಮಿ, ಪುಣ್ಯಭೂಮಿ. ಭಾರತದ ಆತ್ಮವೇ ಅಧ್ಯಾತ್ಮ ಮತ್ತು ವೇದಾಂತ. ಇವುಗಳ ತಾಯಿಬೇರು ನಮ್ಮ ಉಪನಿಷತ್ತು, ವೇದಗಳು ಪುರಾಣಗಳು, ದರ್ಶನಗಳು, ಇವುಗಳ ಭದ್ರ ತಳಹದಿಯ ಮೇಲೆ ಭಾರತದಂತಹ ವಿಶಾಲಸೌಧ ನಿರ್ಮಾಣ ಗೊಂಡಿರುವುದು. ಈ ಸೌಧವನ್ನು ನಾಶಪಡಿಸಲು ಪರಕೀಯರು ಅನೇಕ ರೀತಿಯ ದಾಳಿ ನಡೆಸಿ ಸೋತು ಹಿಂತಿರುಗಿದರೂ, ಹೋಗುವಾಗ ಅಮೂಲ್ಯ ಗ್ರಂಥಗಳನ್ನು ಅಪಹರಿಸಿದರು. ಇಲ್ಲಿಯ ದೊಡ್ಡ ದೊಡ್ಡ ದೇವಸ್ಥಾನಗಳನ್ನು ನಾಶಪಡಿಸಿ, ವಿಘ್ನಸಂತೋಷಿಗಳಾದರು. ಈ ರೀತಿಯ ಆಘಾತಗಳು ಈ ದೇಶದ ಮೇಲೆ ಪದೇ ಪದೇ ಆದರೂ ಅವೆಲ್ಲವನ್ನು ಸಹಿಸಿಕೊಂಡು ವಿಚಲಿತವಾಗದೆ ಸದೃಢವಾಗಿ ನಿಂತಿರುವುದರ ಹಿಂದೆ ಇರುವ ಮಹಾಶಕ್ತಿಯೇ ಅಧ್ಯಾತ್ಮ ಮತ್ತು ಭಾರತೀಯ ಸಂಸ್ಕೃತಿ ಎಂಬುದನ್ನು ಬಹು ಗಂಭೀರವಾಗಿ ಯೋಚಿಸಬೇಕು. ಈ ದಿಸೆಯಲ್ಲಿ ನಮ್ಮ ಋಷಿಮುನಿಗಳು, ಸಾಧು ಸಂತರು, ಯತಿಶ್ರೇಷ್ಠರು, ತತ್ತ್ವಜ್ಞಾನಿಗಳು, ದಾರ್ಶನಿಕರು ನೀಡಿದ ಕೊಡುಗೆ ಅಮೂಲ್ಯವಾದದ್ದು. ಯಾವ ವೈಯಕ್ತಿಕ ಪ್ರತಿಫಲಾಪೇಕ್ಷೆ ಇಲ್ಲದೆ ಈ ನಾಡಿಗೆ ತಮ್ಮನ್ನು ಸಮರ್ಪಿಸಿ ಕೊಂಡಿರುವುದರಿಂದಲೇ ಅಂತಹ ಮಹನೀಯರು ನಮಗೆ ಪ್ರಾತಃಸ್ಮರಣೀಯರು ಮತ್ತು ಪೂಜನೀಯರು. ಧರ್ಮಕ್ಕೆ ಗ್ಲಾನಿ ಉಂಟಾದಾಗ ತಾನು ಪದೇ ಪದೇ ಅವತರಿಸುತ್ತೇನೆ ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ತಿಳಿಸಿದಂತೆ ನಾಡಿನ ಸಂಸ್ಕೃತಿ ಮತ್ತು ಸನಾತನ ಧರ್ಮದ ತಾಯಿ ಬೇರಿಗೆ ನೀರೆರೆದು ಪೋಷಿಸಿದವರು ನಮ್ಮ ಸನಾತನೀಯರು ಎಂಬುದನ್ನು ಎಂದೂ ಮರೆಯಬಾರದು.

ಪ್ರಪಂಚದಲ್ಲಿ ಲಕ್ಷೋಪಲಕ್ಷ ಜೀವರಾಶಿಗಳು ದಿನ ನಿತ್ಯ ಹುಟ್ಟಿ ಸಾಯುತ್ತವೆ. ಆದರೆ ಅದಾವುದು ಪರಿಗಣನೆಗೆ ಬರುವುದಿಲ್ಲ. ಆದರೆ ಮನುಷ್ಯನು ಮಾತ್ರ ಅವುಗಳಲ್ಲಿ ಶ್ರೇಷ್ಠ ಅವನಿಗೆ ವಿಶೇಷ ಬುದ್ಧಿಯನ್ನು ವಿಚಾರ ಮಾಡುವ ಶಕ್ತಿಯನ್ನು ಭಗವಂತ ದಯಪಾಲಿಸಿದ್ದಾನೆ. ನಿದ್ರೆ, ಆಹಾರ, ಭಯ ಮತ್ತು ಮೈಥುನಾದಿ ಕ್ರಿಯೆಗಳು ಮನುಷ್ಯರಂತೆ ಪ್ರಾಣಿಗಳೂ ಕೂಡ ನಡೆಸುತ್ತವೆ. ಆದರೆ ಮನುಷ್ಯನ ಬದುಕು ಇಷ್ಟಕ್ಕೆ ಸೀಮಿತವಾಗಬಾರದು. "**ಮಾನವ ಜನ್ಮ ದೊಡ್ಡದು, ಇದನ್ನು ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ**" ಎಂದು ದಾಸ ಶ್ರೇಷ್ಠರಾದ ಪುರಂದರರು ಮನುಕುಲವನ್ನು ಎಚ್ಚರಿಸಿದ್ದಾರೆ. ಇದರ ಹಿಂದೆ ಒಂದು ದೊಡ್ಡ ತತ್ತ್ವವೇ ಅಡಗಿದೆ. ಮನುಷ್ಯ ಭಾರತದಂತಹ ಪವಿತ್ರ ನಾಡಿನಲ್ಲಿ ಹುಟ್ಟಿರುವುದು ಒಂದು ದೊಡ್ಡ ಭಾಗ್ಯ. ಅದಕ್ಕಾಗಿ ನಾವು ಈ ದೇಶಕ್ಕೆ ಋಣಿಯಾಗಬೇಕು. ಇದರ ಜೊತೆ ಜೊತೆಯಲ್ಲಿ ನಮ್ಮ ಕರ್ತವ್ಯದ ಬಗ್ಗೆ ಪ್ರಜ್ಞೆ ಇರಬೇಕು. ಈ ಬಗ್ಗೆ ನಮ್ಮ ಸುತ್ತಲಿನ ಪ್ರಕೃತಿಯಿಂದ ನಾವು ಅನೇಕ ಬಗೆಯ ಪಾಠಗಳನ್ನು ಕಲಿಯಬಹುದು. ಮರಗಿಡಗಳಲ್ಲಿ ಹಣ್ಣು ಹೂವುಗಳು ಬಿಡುತ್ತವೆ. ನದಿಯಲ್ಲಿ ನೀರು ಹರಿಯುತ್ತದೆ. ತಂಗಾಳಿ ಬೀಸುತ್ತದೆ. ಇವು ಯಾವುವೂ ತಮಗಾಗಿ ಅಲ್ಲ, ಇತರರಿಗೆ ಎಂಬ ಸೂಕ್ಷ್ಮ ವಿಚಾರವನ್ನು - ಉಪಕಾರದ ಸ್ಮರಣೆಯ ಪಾಠವನ್ನೂ ಪ್ರಕೃತಿ ನೀಡಿದೆ.

ವಿಜ್ಞಾನ ಬೆಳದಂತೆ ನಮಗರಿವಿಲ್ಲದೆಯೇ ನಾವು ಅದರ ದಾಸರಾಗುತ್ತಿದ್ದೇವೆ. ಸಂಪರ್ಕ ಸಾಧನಗಳು ಹೆಚ್ಚಾಗಿವೆ. ಆಕಾಶದಲ್ಲಿ ಹಕ್ಕಿಯಂತೆ ಹಾರಾಡಬಲ್ಲೆವು. ಮೀನಿನಂತೆ ನೀರಿನಲ್ಲಿ ತೇಲಬಲ್ಲೆವು. ಕುಳಿತಲ್ಲೇ ಪ್ರಪಂಚವನ್ನು ನೋಡಬಲ್ಲೆವು. ವಿಶ್ವದ ವಿದ್ಯಮಾನಗಳನ್ನು ಕೇಳಿ ತಿಳಿಯಬಲ್ಲೆವು. ಇವೆಲ್ಲ ಪ್ರಗತಿಯ ಲಕ್ಷಣಗಳು, ನಾಗರೀಕತೆಯ ಮಾಧ್ಯಮಗಳು. ಇವುಗಳನ್ನು ಹಿತಮಿತವಾಗಿ ಬಳಸಿದರೆ ಅದು ಅಮೃತಕ್ಕೆ ಸಮಾನ. ಆದರೆ ಅದನ್ನು ಹಿಗ್ಗಾ ಮಗ್ಗಾ ಬಳಸುವುದರ ಮೂಲಕ ದೈವದತ್ತವಾಗಿ ಬಂದ ಪ್ರಕೃತಿಯ ಮೇಲೆ ನಿರಂತರ ಹಲ್ಲೆ ನಡೆಯುತ್ತಲೇ ಇದೆ.

ಇದರ ದೇಸೆಯಿಂದ ಪರಿಸರ ಮಲಿನಗೊಳ್ಳುತ್ತಿದೆ. ಶುದ್ಧಗಾಳಿ, ಶುದ್ಧನೀರು, ಕಲುಷಿತಗೊಂಡು ಪ್ರಕೃತಿ ವಿಕೃತಿಗೊಳ್ಳುತ್ತಿದೆ.

ಪ್ರಕೃತಿ ವಿಕೃತಿಗೊಂಡಂತೆ ಮನುಷ್ಯನ ಮನಸ್ಸು ವಿಕೃತಗೊಳ್ಳುತ್ತದೆ. ವಿಕೃತಿಗೊಂಡ ಮನಸ್ಸು ಸಮಚಿತ್ತವನ್ನು ಕಳೆದುಕೊಂಡು ವಿವೇಕ, ವಿಮರ್ಶೆ, ವಿನಯ, ವಿಚಾರಹೀನನಾಗಿ ಪಾಪ, ಪುಣ್ಯದ ಸತ್ಯ ಅಸತ್ಯದ ಬಗ್ಗೆ ಮನಸ್ಸನ್ನು ಇಡದೆ ಇರುವ ವಸ್ತುಗಳ ಬಗ್ಗೆ ಒಡಂಬಡಿಸಿ ಬಿಸಿಲ್ಗುದುರೆಯಂತೆ ಮನಸ್ಸನ್ನು ಹುಚ್ಚು ಕುದುರೆಯಂತೆ ಹಿಗ್ಗಾ ಮಗ್ಗಾ ಓಡಿಸಿ ಪ್ರಪಾತಕ್ಕೆ ದುಮುಕುತ್ತಾನೆ. ಬಯಸಿದ ವಸ್ತುಗಳು ದೊರಕದಿದ್ದಾಗ, ನಿರಾಸೆಗೊಂಡು ದುಃಖಕ್ಕೆ ಒಳಗಾಗುತ್ತಾನೆ. ಇದನ್ನೇ **ಭಗವಾನ್ ಬುದ್ಧ** ಹಿಂದೆಯೇ ತಿಳಿಸಿದ್ದ. **ಆಸೆಯೇ ದುಃಖಕ್ಕೆ ಕಾರಣ** ಎಂದು. ಈ ಆಸೆಯೇ ನಮಗೆ ಶತ್ರುಗಳಾಗಿ ಪರಿಣಮಿಸುತ್ತಿದೆ. ಇದನ್ನೇ ಅರಿಷಡ್ವರ್ಗ ಎಂದು ನಮ್ಮ ಪ್ರಾಚೀನರು ತಿಳಿಸಿದ್ದಾರೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಇವು ನಮ್ಮ ಹೊರಗಿನ ಶತ್ರುಗಳಿಗಿಂತ ತುಂಬಾ ಅಪಾಯಕಾರಿ. ನಮ್ಮ ಸಮಾಧಿಗೆ ನಾವೇ ಹೊಂಡವನ್ನು ತೋಡಿಕೊಂಡಂತೆ. ಪ್ರಾರಂಭದಲ್ಲಿ ನಮಗೆ ಅದು ಸಂತೋಷ ನೀಡಬಹುದು. ಶುನಕ ತನ್ನ ಒಂದು ಕಾಲಿನ ಮಾಂಸವನ್ನು ಕಚ್ಚಿ ರಕ್ತದ ರುಚಿ ನೋಡಿದಂತೆ! ಪ್ರತಿ ಒಬ್ಬ ವ್ಯಕ್ತಿಯೂ ಪ್ರಗತಿ ಮಾರ್ಗವನ್ನು ಅನುಸರಿಸುವುದು ತಪ್ಪಲ್ಲ. ಆದರೆ ಅದು ಸನ್ಮಾರ್ಗವಾದರೆ ಮಾತ್ರ ಅವನಿಗೆ ಯಶಸ್ಸು. ತಪ್ಪಿ ನಡೆದರೆ ಆಪತ್ತು ಕಟ್ಟಿಟ್ಟ ಬುತ್ತಿ. ಇತ್ತೀಚಿನ ವರ್ಷಗಳಲ್ಲಿ ಭಾರತ ಸೇರಿದಂತೆ ಇಡೀ ಪ್ರಪಂಚದಲ್ಲಿ ಮನೋರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಅದಕ್ಕೆ ತಕ್ಕಂತೆ ಮನೋವೈದ್ಯರ ಸಂಖ್ಯೆ ಬೆಳೆಯುತ್ತಿದೆ. ಸಮಾಜದಲ್ಲಿ ಸುಖ, ಶಾಂತಿ, ನೆಮ್ಮದಿ, ಮರೆಯಾಗುತ್ತಾ ದ್ವೇಷ, ಅಸೂಯೆ, ಉದ್ವೇಗ, ಚಿತ್ತಚಾಂಚಲ್ಯದಿಂದ ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರ, ಅನಾಚಾರ, ವ್ಯಭಿಚಾರ ಕೊನೆಗೆ ಆತ್ಮಹತ್ಯೆಯಲ್ಲಿ ಪರಿಸಮಾಪ್ತಿಗೊಳ್ಳುತ್ತಿದೆ. ಇವುಗಳಿಗೆ ಮೂಲ ಪರಿಹಾರ ಕೇವಲ ಪೋಲಿಸ್ ಸ್ಟೇಷನ್, ಕೋರ್ಟ್, ಆಸ್ಪತ್ರೆಗಳ ಸಂಖ್ಯೆಯನ್ನು ಹೆಚ್ಚಿಸಿದ ಮಾತ್ರಕ್ಕೆ ಸಮಸ್ಯೆ ನಿವಾರಣೆ ಯಾಗುವುದಿಲ್ಲ. ರೋಗದ ಮೂಲವನ್ನು ಹುಡುಕಿ ಚಿಕಿತ್ಸೆ ನೀಡಿದರೆ ಮಾತ್ರ ಫಲಕಾರಿಯಾಗುತ್ತದೆ. ಸಸ್ಯದ ಬೇರಿಗೆ ನೀರು, ಗೊಬ್ಬರ ಹಾಕಿದಾಗ ಸಸ್ಯ ದಷ್ಟಪುಷ್ಟವಾಗಿ ಬೆಳೆದು ಫಲವನ್ನು ನೀಡಿದಂತೆ, ಮನಸ್ಸಿಗೆ ಸೂಕ್ತ ಚಿಕಿತ್ಸೆ ನೀಡಿ ಮನಸ್ಸಿನಲ್ಲಿ ಉದ್ಭವಿಸಿದ ರಜೋಗುಣ ಮತ್ತು ತಮೋಗುಣವನ್ನು ನಿವಾರಿಸಿ ಸತ್ವಗುಣದ ಹುಲುಸಾದ ಬೆಳೆಯನ್ನು ಪಡೆಯಬಹುದು. ಈ ಮೇಲೆ ತಿಳಿಸಿದ ಸಮಸ್ಯೆಗಳಿಗೆ ಸೂಕ್ತ ಪರಿಹಾರ ನಮ್ಮ ಭಾರತೀಯ ಸಂಸ್ಕೃತಿ ಮತ್ತು ಸನಾತನ ಧರ್ಮದ ಬಗ್ಗೆ ತಿಳಿಸುವ ಸಾಹಿತ್ಯ ನಮ್ಮಲ್ಲಿ ಹೇರಳವಾಗಿದೆ. ಇವುಗಳ ಅಧ್ಯಯನ ಮತ್ತು ಅನುಷ್ಠಾನದಿಂದ ಬಹುಪಾಲು ಸಮಸ್ಯೆಗಳನ್ನು ನಿವಾರಿಸಬಹುದು. ಭಾರತೀಯ ಜೀವನ ಪದ್ಧತಿ, ಆಹಾರ, ವಿಹಾರ, ಆಚಾರ, ವಿಚಾರಗಳು ನಮ್ಮಲ್ಲಿನ ಕಲೆ, ಸಾಹಿತ್ಯ, ಸಂಸ್ಕೃತಿ, ಮಾನವನನ್ನು ಮಾಧವನನ್ನಾಗಿ ಮಾಡುವುದರ ಮೂಲಕ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಹಾಗೂ ಪೋಷಕವಾಗಬಲ್ಲದು. ಇವು ಸ್ವಸ್ಥ ಹಾಗೂ ಸಾತ್ವಿಕ ಸಮಾಜ ನಿರ್ಮಾಣದ ಆಧಾರ ಸ್ಥಂಭಗಳು. ಈ ಕಂಬಗಳಿಗೆ ಗೆದ್ದಲು ಹಿಡಿಯದಂತೆ ಜಾಣತನದಿಂದ ಕಾಪಾಡುವುದು ನಮ್ಮೆಲ್ಲರ ಹೊಣೆಗಾರಿಕೆ ಮತ್ತು ಕರ್ತವ್ಯ. ಇವುಗಳ ಬಗ್ಗೆ ಇಂದಿನ ಮತ್ತು ಮುಂದಿನ ಯುವ ಪೀಳಿಗೆಗೆ ಸೂಕ್ತ ಮಾರ್ಗದರ್ಶನ ಅಗತ್ಯ. ಇದು ಭವಿಷ್ಯದಲ್ಲಿ ತಲೆದೂರಬಹುದಾದ ಅನಿಷ್ಟಗಳಿಗೆ ಸೂಕ್ತ ಚಿಕಿತ್ಸೆ

ಭಾರತ ದೇಶ ಇಡೀ ಕುಟುಂಬವಿದ್ದಂತೆ. ವಿವಿಧತೆಯಲ್ಲಿ ಏಕತೆ ಇದೆ. ನೂರಾರು ಜಾತಿ, ಮತ, ಪಂಥಗಳಿರಬಹುದು. ಆಚಾರ, ವಿಚಾರ, ಆಹಾರ, ವಿಹಾರ, ನಡೆ, ನುಡಿ, ಉಡುಗೆ, ತೊಡುಗೆ, ಪೂಜಾ ಪದ್ಧತಿಗಳು ಭಿನ್ನವಿರಬಹುದು. ಆದರೆ ಇವೆಲ್ಲವು ಒಂದೇ ಸೂತ್ರದಲ್ಲಿ ಪೋಣಿಸಿದ ಹೂವುಗಳು. ವಿಶಾಲವಾದ ವೃಕ್ಷದಲ್ಲಿ ನೂರಾರು ಕೊಂಬೆಗಳು ಇದ್ದರೂ, ತಾಯಿ ಬೇರು ಒಂದೇ, ಅದುವೇ ಭಾರತೀಯ ಸಂಸ್ಕೃತಿ. ಭಾರತೀಯ ಸಂಸ್ಕೃತಿ ವಿಶ್ವಮಾನ್ಯತೆ ಪಡೆಯಲು ಇದರ ಕಂಪು ಎಲ್ಲಾ ಕಡೆ ತಲುಪಲು ನಮ್ಮ ಋಷಿಮುನಿಗಳು, ಸಾಧು ಸಂತರು, ಯತಿವರೇಣ್ಯರು ಅನೇಕ ಅಮೂಲ್ಯ ಗ್ರಂಥಗಳನ್ನು ರಚಿಸುವುದರ ಮೂಲಕ ಇಂದಿಗೂ ನಮ್ಮಲ್ಲಿ ಜೀವಂತ ಸಂಸ್ಕೃತಿ ಉಳಿದಿದೆ. ಆಯುರ್ವೇದ, ಜ್ಯೋತಿಷ್ಯ, ರಾಮಾಯಣ, ಮಹಾಭಾರತ ಕಾವ್ಯಗಳು, ಅಷ್ಟಾದಶಪುರಾಣಗಳು, ಷಟ್‌ದರ್ಶನಗಳು, ಪತಂಜಲಿಯ ಯೋಗಶಾಸ್ತ್ರ ಭಾಗವತಾದಿ ಕೃತಿಗಳು, ಸಂಸ್ಕೃತಿಯ ದಿಕ್ಸೂಚಿಗಳು. ನಮ್ಮಲ್ಲಿ ಹರಿಯುವ ಪವಿತ್ರ ನದಿಗಳು, ಪರ್ವತಗಳು, ಮಠ, ಮಂದಿರಗಳು, ಕೋಟೆಗಳು, ಅರಮನೆಗಳು, ದೇವ ಮಂದಿರಗಳು,ಪುರಾತನ ದೇವಸ್ಥಾನಗಳು, ಅಲ್ಲಿ ಮೂಡಿದ ಶಿಲ್ಪಗಳು. ನಾಡಿನ ಸಂಸ್ಕೃತಿಯ ಸಂಕೇತವಾಗಿದೆ. ಅವು ನಮ್ಮ ಮುಂದೆ ಜೀವಂತವಾದ ಪುರಾಣದ ತಮ್ಮ ಕತೆಗಳನ್ನು ಇತಿಹಾಸವನ್ನು ಸಾರಿ ಹೇಳುತ್ತವೆ. ಸಂಗೀತ, ನೃತ್ಯ, ನಾಟಕಗಳು ನಮಗೆ ಮನರಂಜನೆಯೊಂದಿಗೆ ಈ ನಾಡಿನ ಸಂಸ್ಕೃತಿಯ ಪ್ರವೇಶ ದ್ವಾರಗಳು. ನಮ್ಮ ಪ್ರಾಚೀನ ಕಾವ್ಯಗಳು, ಸಾಹಿತ್ಯಗಳು, ಮೂಲದಲ್ಲಿ ಸಂಸ್ಕೃತ ಭಾಷೆಯಲ್ಲಿದ್ದರೂ ಆಂಗ್ಲಭಾಷೆ ಸೇರಿದಂತೆ ಭಾರತೀಯ ಇತರ ಭಾಷೆಗಳಿಗೆ ತರ್ಜುಮೆಗೊಂಡು

ನಮಗೆ ಮಾಹಿತಿ ನೀಡುತ್ತದೆ. ಈ ನಾಡಿನ ಭವ್ಯ ಸಂಸ್ಕೃತಿಯನ್ನು ತಿಳಿಯಲು ಹೇರಳವಾದ ಸಾಹಿತ್ಯ ನಮ್ಮಲ್ಲಿದೆ. ಒಂದು ಜನ್ಮ ಸಾಲದು ಇದನ್ನು ತಿಳಿಯಲು. ಇದರ ಆಳ ಸಮುದ್ರಕ್ಕಿಂತ ಮಿಗಿಲು, ಆಕಾಶಕ್ಕಿಂತ ಎತ್ತರ. ಪ್ರಾಯಶಃ ಇದಕ್ಕಿಂತ ಹೋಲಿಕೆ ನೀಡಲು ಈ ಬಡ ಲೇಖಕನಿಗೆ ಸಾಧ್ಯವಿಲ್ಲ.

ಇಲ್ಲಿಯ ಗುರುಕುಲ ಶಿಕ್ಷಣ ಪದ್ಧತಿ, ಸಂಸ್ಕೃತ ವೇದ ಪಾಠ ಶಾಲೆಗಳು, ಸನಾತನ ಧರ್ಮದ ಬೆಳವಣಿಗೆಗೆ ತಮ್ಮದೇ ಕೊಡುಗೆ ನೀಡುತ್ತಾ ಬಂದಿರುವುದು ಶುಭದ ಸಂಕೇತ. ಇತ್ತೀಚಿನ ವರ್ಷಗಳಲ್ಲಿ ವಿವಿಧ ಜಾತಿ, ಮತ, ಪಂಥಕ್ಕೆ ಸೇರಿದ ಮಠಾಧೀಶರು, ಅವಧೂತರು, ಯತಿಗಳು, ಹೊರನೋಟಕ್ಕೆ ಬೇರೆ ಬೇರೆಯಾಗಿ ಕಂಡರೂ ಮೂಲ ಉದ್ದೇಶ ಒಂದೇ. ಅದುವೇ ಸನಾತನ ಧರ್ಮ ಮತ್ತು ಸಂಸ್ಕೃತಿಯ ಪೋಷಣೆ ಇದಕ್ಕಾಗಿ ಅನ್ನದಾನ, ವಿದ್ಯಾದಾನ ಮತ್ತು ಸಾಮಾಜಿಕ ವಿವಿಧ ಸೇವಾಕಾರ್ಯದಲ್ಲಿ ತಮ್ಮನ್ನು ನಾಡಿಗಾಗಿ ಸಮರ್ಪಿಸಿಕೊಂಡಿರುವುದು ಶ್ಲಾಘನೀಯ.

ಮಾನವನಲ್ಲಿ ಹುದುಗಿದ್ದ ಮೌಢ್ಯಗಳನ್ನು - ತಪ್ಪು ತಿಳುವಳಿಕೆಗಳನ್ನು - ಅಲ್ಲ ಸಲ್ಲದ ಕಂದಾಚಾರವನ್ನು ಸಂಪ್ರದಾಯಗಳನ್ನು ಹೋಗಲಾಡಿಸಲು ನಮ್ಮ ಕರ್ನಾಟಕದ ದಾರ್ಶನಿಕರು ಯತಿಗಳು, ವಿಶೇಷ ಕೊಡುಗೆಯನ್ನು ನೀಡಿದ್ದಾರೆ. ಭರ್ತೃಹರಿಯ ನೀತಿಶತಕ, ಸರ್ವಜ್ಞನ ವಚನಗಳು, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿಯ ವಚನಗಳು, ಮೌಢ್ಯದಿಂದ ಮಲಗಿದ ಸಮಾಜವನ್ನು ಎಚ್ಚರಿಸಲು ತಮ್ಮ ತಿಳಿಯಾದ ಸರಳ, ಸುಂದರ ಕನ್ನಡ ಭಾಷೆಯ ವಚನಗಳು, ಕನಕ, ಪುರಂದರ ದಾಸರ ಸಾಹಿತ್ಯ ಕೃತಿಗಳು ಹೀಗೆ ಹೇಳುತ್ತಾ ಹೋದರೆ ನೂರಾರು ಹೆಸರುಗಳಿವೆ. ನಮ್ಮ ಜಾನಪದ ಸಾಹಿತ್ಯ ಈ ದಿಸೆಯಲ್ಲಿ ಹಿಂದೆ ಬಿದ್ದಿಲ್ಲ. ಈ ಎಲ್ಲವುಗಳ ಅಧ್ಯಯನದಿಂದ ಮನುಷ್ಯನ ಮಾನಸಿಕ, ದೈಹಿಕ ಆರೋಗ್ಯ ಸಮಚಿತ್ತದಲ್ಲಿದ್ದು ಸಮಾಜದ ಸ್ವಾಸ್ಥ್ಯವು ಸ್ಥಿರವಾಗಿ ಉಳಿಯುತ್ತದೆ. ಆದರೆ ದುರದೃಷ್ಟವಶಾತ್ ನಮ್ಮ ಅನೇಕ ಕೃತಿಗಳು, ಕಲೆ, ಕ್ರೀಡೆ, ಜಾನಪದ ಸಾಹಿತ್ಯ ಕಾಲಗರ್ಭದಲ್ಲಿ ಹುದುಗಿ ಮರೆಯಾಗುತ್ತಿವೆ. ಇದರ ಪುನರುತ್ಥಾನ ಅತ್ಯವಶ್ಯಕ. ಪಾಶ್ಚಾತ್ಯ ಸಂಸ್ಕೃತಿಗೆ ದಾಸರಾಗುವ ಮುನ್ನ ನಾವುಗಳು ಎಚ್ಚೆತ್ತು ಈ ದೇಶದ ಸಂಸ್ಕೃತಿ ಮತ್ತು ಸನಾತನ ಧರ್ಮದ ಮೌಲ್ಯಗಳನ್ನು ಸದಾಕಾಲ ಚಿರಾವಣೆಯಲ್ಲಿರುವಂತೆ ಅವುಗಳನ್ನು ಉಳಿಸಿ, ಬೆಳಸಿ, ಪೋಷಿಸಿಕೊಂಡು ಹೋಗುವ ಜವಾಬ್ದಾರಿ ಪ್ರತಿಯೊಬ್ಬ ಭಾರತೀಯನದು. ಇಂತಹ ಪವಿತ್ರ ಭಾರತದಲ್ಲಿ ಹುಟ್ಟಿರುವುದೇ ನಮ್ಮೆಲ್ಲರ ಸೌಭಾಗ್ಯ. ನಾವುಗಳು ಇದಕ್ಕಾಗಿ ಋಣಿಯಾಗಿರಬೇಕು. ಭವ್ಯ ಸಂಸ್ಕೃತಿಯ ನೆಲೆಗಟ್ಟಿನ ಒಂದೊಂದು ಕಲ್ಲು ನಾವಾಗಬೇಕು. ಇದರಲ್ಲಿ ಒಂದು ಕಲ್ಲು ಜಾರಿದರೂ ಇತಿಹಾಸ ನಮ್ಮನ್ನು ಕ್ಷಮಿಸು ವುದಿಲ್ಲ. ಈ ಲೇಖನ ಕೇವಲ ದಿಕ್ಸೂಚಿ. ಇದರಲ್ಲಿ ಬರುವ ಒಂದೊಂದು ಶಬ್ದವೂ ಬೃಹತ್ ಗ್ರಂಥವಾಗಬಹುದು.

ಭಾರತೀಯ ಸಂಸ್ಕೃತಿ ಮತ್ತು
ಸನಾತನ ಧರ್ಮ ಚಿರಾಯುವಾಗಲಿ.

ಏತಾವಾನವ್ಯಯೋ ಧರ್ಮಃ ಪುಣ್ಯಶ್ಲೋಕೈರುಪಾಸಿತಃ ।
ಯೋ ಭೂತಶೋಕಹರ್ಷಾಭ್ಯಾಂ ಆತ್ಮಾ ಶೋಚತಿ ಹರ್ಷತಿ ॥
(ಭಾಗವತ, 6-10-9)
ಹೀಗೆ ಧರ್ಮವು ನಾಶವಿಲ್ಲದ್ದು, ಪುಣ್ಯವಂತರಿಂದ
ಸೇವಿಸಲ್ಪಡುತ್ತದೆ. ಯಾರ ಮನಸ್ಸು ಪ್ರಾಣಿಗಳ ದುಃಖದಿಂದ
ದುಃಖಿಸುತ್ತದೋ ಮತ್ತು ಸಂತೋಷದಿಂದ
ಸಂತೋಷಪಡುತ್ತದೋ ಅವನೇ ಪುಣ್ಯವಂತನು.

ಏವಮಾಚಾರತೋ ದೃಷ್ಟ್ವಾ ಧರ್ಮಸ್ಯ ಮುನಯೋ ಗತಿಂ ।
ಸರ್ವಸ್ಯ ತಪಸೋ ಮೂಲಂ ಆಚಾರಂ ಜಗೃಹುಃ ಪರಮ್ ॥
(ಮನುಸ್ಮೃತಿ, 1-110)
ಋಷಿಗಳು ಆಚಾರಾನುಷ್ಠಾನದಿಂದಲೇ ಧರ್ಮವು
ಹೆಚ್ಚುವುದೆಂದು ತಿಳಿದು ಎಲ್ಲ ಬಗೆಯ ತಪಸ್ಸಿಗೂ
ಆಚಾರವನ್ನೇ ಮೂಲವೆಂದು ಸ್ವೀಕರಿಸಿದರು.

ಕರ್ಮಣಾ ಜಾಯತೇ ಸರ್ವಂ ಕರ್ಮೈವ ಗತಿಸಾಧನಂ ।
ತಸ್ಮಾತ್ಸರ್ವಪ್ರಯತ್ನೇನ ಸಾಧು ಕರ್ಮ ಸಮಾಚರೇತ್ ॥
(ವಿಷ್ಣುಪುರಾಣ, 1-18-32)
ಕರ್ಮದಿಂದಲೇ ಎಲ್ಲವೂ ಆಗುತ್ತದೆ. ಕರ್ಮವೇ ನಮ್ಮ ಬೇರೆ
ಬೇರೆ ಗತಿಗಳಿಗೆ ಕಾರಣ. ಆದುದರಿಂದ
ಪ್ರಯತ್ನಪೂರ್ವಕವಾಗಿ ಒಳ್ಳೆಯ ಕೆಲಸವನ್ನೇ ಮಾಡಬೇಕು.

ಕರ್ಮಣಾ ಮನಸಾ ವಾಚಾ ಪರಪೀಡಾಂ ಕರೋತಿ ಯಃ ।
ತದ್ಬೀಜಂ ಜನ್ಮ ಫಲತಿ ಪ್ರಭೂತಂ ತಸ್ಯ ಚಾಶುಭಮ್ ॥
(ವಿಷ್ಣುಪುರಾಣ, 1-19-6)
ಯಾರು ಕ್ರಿಯೆಯಿಂದಲೂ, ಮನಸ್ಸಿನಿಂದಲೂ,
ಮಾತಿನಿಂದಲೂ ಇತರರ ಹಿಂಸೆ ಮಾಡುತ್ತಾನೆಯೋ,
ಆ ಪಾಪಕರ್ಮಗಳಿಂದಾದ ಜನ್ಮದಲ್ಲಿ ಅವನಿಗೆ ಹೆಚ್ಚು
ದುಃಖವುಂಟಾಗುತ್ತದೆ.

ಯಾವುದು ಧರ್ಮ

ಡಾ॥ ಎಸ್.ಆರ್. ಅಲೀಲಾ
ಸಂಪಾದಕ ಸಂಯೋಜಕರು
ಮಹಾಭಾರತ ವಿಶ್ವಕೋಶ

ಭಾರತದ ಪ್ರಾಚೀನ ಮನೀಷಿಗಳ ಕಾಣ್ಕೆ ಎಂದರೆ ಧರ್ಮ. ಭಾರತೀಯ ಜೀವನದ ಅಡಿಗಲ್ಲು ಧರ್ಮ. ಇಂದು ತೀರ ಇಲ್ಲದೆ ಹೋಗಿರುವುದು ಧರ್ಮವೇ. ಇತರ ಭಾಷೆಗಳಿಗೆ ಅನುವಾದಿಸಲು ಸಾಧ್ಯವೇ ಇಲ್ಲ ಎನ್ನುವಷ್ಟು ಅರ್ಥ ಭಾರದಿಂದ ಕೂಡಿರುವ ಪದ ಎಂದರೆ ಧರ್ಮ. ಇಂಥ ಧರ್ಮದ ವ್ಯಾಖ್ಯೆಯನ್ನು ನಮ್ಮ ದೇಶದ ಅಪೂರ್ವ ಸಾಹಿತ್ಯವಾದ ಮಹಾ ಭಾರತವು ಹೇಗೆ ಮಾಡಿದೆ? ಈ ವ್ಯಾಖ್ಯೆ, ಅರ್ಥೈಸುವಿಕೆ ಇಂದಿಗೂ ಹೇಗೆ ಪ್ರಸ್ತುತ ಎನಿಸಿದೆ ಎಂಬುದನ್ನು ನೋಡೋಣ.

ದಕ್ಷ ಪ್ರಜಾಪತಿಯ ಪುತ್ರಿಯರು 50 ಜನ. ಅವರಲ್ಲಿ 10 ಜನರನ್ನು ಧರ್ಮನಿಗೂ, 27 ಜನರನ್ನು ಚಂದ್ರನಿಗೂ, 13 ಜನರನ್ನು ಕಶ್ಯಪರಿಗೂ ಮದುವೆ ಮಾಡಿಸಿದರಂತೆ. ಚಂದ್ರನ ಪತ್ನಿಯರು ಕಾಲರಕ್ಷಣೆ ಮಾಡುವ ನಕ್ಷತ್ರ ಯೋಗಿನಿಯರು (ಆದಿ. 66.11.13). ಏನು ಧರ್ಮಕ್ಕೆ ಮದುವೆಯೇ? 10 ಜನ ಹೆಂಡತಿಯರೆ? ಏನೀ ವಿಚಿತ್ರವಪ್ಪಾ ಎನ್ನುವಿರೇನೋ! ಆದರೆ ಧರ್ಮನ ಧರ್ಮಪತ್ನಿಯರ ಹೆಸರನ್ನು ಕೇಳಿದರೆ, ನಂತರ ಸ್ವಲ್ಪ ವಿಚಾರ ಮಾಡಿದರೆ ವಿಚಿತ್ರಭಾವ ಮರೆಯಾಗುತ್ತದೆ. ಕೀರ್ತಿ, ಲಕ್ಷ್ಮಿ, ಧೃತಿ, ಮೇಧಾ, ಪುಷ್ಟಿ ಶ್ರದ್ಧಾ ಕ್ರಿಯಾ, ಬುದ್ಧಿ ಲಜ್ಜಾ ಮತಿ ಇವರುಗಳೇ ಧರ್ಮನ ಪತ್ನಿಯರು. ಅರೆ ಇವೆಲ್ಲ ನಮಗೆ ತೀರ ಪರಿಚಿತವಾದ ಶಬ್ದಗಳೇ ಅಲ್ಲವೆ? ಕೀರ್ತಿಶಾಲಿಯಾಗು ಎಂದು ಆಶೀರ್ವಾದ. ಅವರಿಗೇನಪ್ಪ ಲಕ್ಷ್ಮೀಪುತ್ರರು ಎಂಬ ಪ್ರಶಂಸೆ, ದೇಹಪುಷ್ಟಿ ಶ್ರದ್ಧಾಳು, ಲಜ್ಜಾವತಿ, ಮತಿಹೀನ ಇವೆಲ್ಲ ನಿತ್ಯವೂ ನಮ್ಮ ವ್ಯವಹಾರದಲ್ಲಿ ಬಳಸುವ ಪದಗಳೇ. ಮನುಷ್ಯನ ಮಾನಸಿಕ, ಬೌದ್ಧಿಕ ಗುಣ ಲಕ್ಷಣಗಳನ್ನು ಸೂಚಿಸುವ ಹಾಗೂ ದೇಹದ ಶಕ್ತಿ ಸಾಮರ್ಥ್ಯಗಳನ್ನು ಹೇಳುವ ಪದಗಳಿವು. ಹಾಗಾದಲ್ಲಿ ಮನುಷ್ಯನ ಮನಸ್ಸು ಬುದ್ಧಿ, ದೇಹ, ಒಟ್ಟು ಅವನ ಜೀವನಕ್ಕೆ ಸಂಬಂಧಪಡುವ ಅಂಶಗಳು ಇವು ಎಂದಾಯಿತು. ಕೀರ್ತಿ, ಲಕ್ಷ್ಮೀ, ಸ್ಮೃತಿ ಮುಂತಾದವರು ಧರ್ಮದ ಪತ್ನಿಯರೆಂದ ಮೇಲೆ, ಮನುಷ್ಯನಿಗೂ ಧರ್ಮಕ್ಕೂ ತುಂಬ ಸಮೀಪ ಸಂಬಂಧವೇ ಇದೆ ಎಂಬುದೂ ನಿಶ್ಚಯವೇ ಹೌದು.

ಆದರೆ ಧರ್ಮ ಎಂದರೇನೆಂದು ತಿಳಿಯುವುದು ಅಷ್ಟು ಸುಲಭವಲ್ಲ ಎನಿಸುತ್ತದೆ. ಏಕೆಂದರೆ ಧರ್ಮಾಂಶ ಸಂಭೂತನಾದ ಪಾಂಡವ ಜ್ಯೇಷ್ಠನಾದ ಧರ್ಮರಾಯನೇ ಧರ್ಮದ ರಹಸ್ಯವನ್ನರಿಯದೆ ಕಕ್ಕಾಬಿಕ್ಕಿಯಾಗಿ ಒಮ್ಮೆ ಭೀಷ್ಮ ಪಿತಾಮಹರ ಬಳಿ ತನ್ನ ಅಳಲನ್ನು ತೋಡಿಕೊಳ್ಳುತ್ತಾನೆ.

ವಿದ್ಮ ಚೈವ ನ ವಾ ವಿದ್ಮ ಶಕ್ಯಂ ವಾ ವೇದಿತುಂ ನ ವಾ।
ಅಣೀಯಾನ್ ಕ್ಷುರಧಾರಾಯಾಃ
ಗರೀಯಾನಪಿ ಪರ್ವತಾತ್ ॥ ಶಾಂತಿ. 260.12

ತಾತ! ಧರ್ಮದ ಅರ್ಥ ತಿಳಿದಂತೆ ಆಗುತ್ತದೆ. ಆದರೆ ಏನೂ ಸರಿಯಾಗಿ ತಿಳಿಯುವುದಿಲ್ಲ. ತಿಳಿಯುವುದು ಸಾಧ್ಯವೋ ಅಲ್ಲವೋ ಎಂಬುದನ್ನು ಅರಿಯುವುದೂ ಕಷ್ಟ ಏಕೆಂದರೆ ಇದು ಕತ್ತಿಯ ತೀಕ್ಷ್ಣವಾದ ಅಲುಗಿಗಿಂತ ಸೂಕ್ಷ್ಮವೂ ಪರ್ವತಕ್ಕಿಂತ ಸ್ಥೂಲವೂ ಆಗಿದೆ. ಒಮ್ಮೆ ಸ್ಪಷ್ಟವಾಗಿ ತೋರಿದರೆ ಮಗದೊಮ್ಮೆ ಗಮನಕ್ಕೆ ಬಾರದೆ ಓಡುತ್ತದೆ ಎನ್ನುತ್ತಾನೆ.

ಇದರಿಂದ ಧರ್ಮದ ಅರ್ಥ ಅರಿಯಲು ಧರ್ಮರಾಯನಿಗೆ ಆಗ ಎಷ್ಟು ಕಷ್ಟವಾಯಿತೆಂಬುದು ಗೊತ್ತಾಗುತ್ತದೆ. ಈಗಲೂ ಇದೇ ಪರಿಸ್ಥಿತಿಯೇ ಮುಂದುವರೆದಿದೆಯೇನೋ ಎನ್ನಿಸುತ್ತದೆ. Marco Palli ಯವರ ಈ ಮಾತನ್ನು ಕೇಳಿದರೆ, ಅವರು ಹೇಳುತ್ತಾರೆ - The truths to which Dharma corresponds in the field of metaphysical ideas and spiritual and even social applicability are the ones, which by the question they raise, are troubling people's mind most acutely at this moment.

ಈ ಗೊಂದಲಗಳನ್ನೆಲ್ಲ ಕೈಬಿಟ್ಟು ಸುಲಭವಾಗಿ ಯಾವುದು ಒಳ್ಳೆಯದೊ ಅದನ್ನು ಧರ್ಮ ಎಂದು ಕರೆಯೋಣ ಎಂದರೆ '**ಒಳ್ಳೆಯದು**' ಅಥವಾ '**ಶ್ರೇಯಸ್ಸು**' ಯಾರಿಗೆ? ಯಾವುದು? ಯಾವಾಗ? ಎಂಬುದರ ಬಗ್ಗೆಯೇ ಭಿನ್ನಾಭಿಪ್ರಾಯಗಳಿವೆ. ಒಂದೊಂದು ಶಾಸ್ತ್ರ ಒಂದೊಂದನ್ನು ಶ್ರೇಯಸ್ಸು ಎಂದು ಕರೆದಿದೆ. ಆದ್ದರಿಂದ ಶ್ರೇಯಸ್ಸಿನ ಅರ್ಥವೆ ನಿಗೂಢವಾಗಿ ಬಿಟ್ಟಿದೆ ಎನ್ನುತ್ತಾರೆ ಗಾಲವರೆಂಬ ಋಷಿ - शास्त्रेश्च बहुभिः भूयः श्रयो गुह्य प्रवेशितम् (ಶಾಂತಿ. 287.10) ಎಂದು ನಾರದರ ಬಳಿ '**ಶ್ರೇಯಃ**' ಪದವನ್ನು ಅರ್ಥಮಾಡಿಕೊಳ್ಳುವಲ್ಲಿ ಇರುವ ತೊಂದರೆಯನ್ನು ನಿವೇದಿಸಿಕೊಳ್ಳುತ್ತಾರೆ.

ಅಂತೂ ಧರ್ಮ ಜಿಜ್ಞಾಸೆ ಎಂಬುದು ಅಂದಿನಿಂದ ಇಂದಿನವರೆಗೆ ವಾದ ವಿವಾದಗಳ, ಭಿನ್ನಮತಗಳ ಸುಳಿಯಲ್ಲಿ ಸಿಕ್ಕಿದೆಯಲ್ಲ ಎಂದು ನಾವು ಆತಂಕಗೊಳ್ಳಬೇಕಿಲ್ಲ. ಏಕೆಂದರೆ ಇಂತಹ ವಿವಾದಗಳನ್ನು, ಅನೇಕಾಭಿಪ್ರಾಯಗಳನ್ನೆಲ್ಲ ಗಮನಿಸಿ, ವಿಮರ್ಶಿಸಿ ಕಡೆಗೆ ಸುನಿಶ್ಚಿತವಾದ ತತ್ತ್ವವನ್ನು ವ್ಯಾಸಮಹರ್ಷಿಗಳು ನೀಡಿದ್ದಾರೆ ಎಂಬುದು ತುಂಬ ಗಮನಾರ್ಹವಾಗಿದೆ. ವ್ಯಾಸರ ದೃಷ್ಟಿಯಲ್ಲಿ ಎಲ್ಲೆಡೆ ಎಲ್ಲ ಜೀವನಕ್ರಮಗಳ ಸಹಜ ಮೂಲವಾಗಿರುವುದೇ 'ಧರ್ಮ' ಎನಿಸಿಕೊಳ್ಳುತ್ತದೆ. Dharma is the natural foundation of all social arrangements everywhere. (Chaturvedi Badarinath, The mahabharata; An enquiry into the Human condition. pg. 84).

ಇದಕ್ಕೆ ಪೂರಕವಾಗಿ ಮಹಾಭಾರತದ ಕರ್ಣಪರ್ವದಲ್ಲಿ ಬರುವ ಶ್ರೀಕೃಷ್ಣಾರ್ಜುನರ ಸಂವಾದ ಸಂದರ್ಭವನ್ನು ಗಮನಿಸ ಬಹುದು.

ಕುರುಕ್ಷೇತ್ರ ಮಹಾಯುದ್ಧ ನಡೆದಿದೆ. ಕರ್ಣ ಯುಧಿಷ್ಠಿರನನ್ನು ಕಾಡಿದ್ದಾನೆ. ಅರ್ಜುನ ಧರ್ಮಜನ ಸಹಾಯಕ್ಕೆ ಬಂದಿಲ್ಲ, ರಣರಂಗದಲ್ಲಿ ಕರ್ಣನ ಪರಾಕ್ರಮವನ್ನು ಹತ್ತಿಕ್ಕುವಲ್ಲಿ ವಿಫಲನಾದ ಅರ್ಜುನನ್ನು ಕಂಡು ಯುಧಿಷ್ಠಿರನಿಗೆ ತುಂಬ ಅಸಮಾಧಾನವಾಗುತ್ತದೆ. ಗಾಂಡೀವ ಧನುಸ್ಸಿದ್ದೂ ಪ್ರಯೋಜನವೇನು? ಅದನ್ನು ಯಾರಿಗಾದರೂ ಕೊಟ್ಟುಬಿಡು ಎಂದು ಯುಧಿಷ್ಠಿರನು ಅರ್ಜುನನನ್ನು ಹೀಯಾಳಿಸುತ್ತಾನೆ. ಆಗ ಅರ್ಜುನನನಿಗೆ ಕೋಪ ಉಕ್ಕೇರುತ್ತದೆ. ಅಣ್ಣನನ್ನೇ ಮುಗಿಸಲು ಮುಂದಾಗುತ್ತಾನೆ. ಅವನು ಮಾಡಿಕೊಂಡಿದ್ದ ಒಂದು ಗೂಢ ವ್ರತವು ಇದಕ್ಕೆ ಕಾರಣವಾಗುತ್ತದೆ. ಗಾಂಢೀವವನ್ನು ಅನ್ಯರಿಗೆ ಕೊಡು ಎಂದು ಹೇಳಿದವನನ್ನು ಕೊಲ್ಲುವೆನು ಎಂಬುದು ಅರ್ಜುನನ ಗೂಢವ್ರತವಾಗಿದ್ದಿತು. ಪರಿಸ್ಥಿತಿ ಕೈ ಮೀರುತ್ತಿದ್ದುದನ್ನು ಗಮನಿಸಿದ ಕೃಷ್ಣನು ಮಿತ್ರನನ್ನು ತಡೆದು ಹೀಗೆನ್ನುತ್ತಾನೆ.

ಅವಜ್ಞಾನಾದ್ ಭವಾನ್ ಯಜ್ಞ
ಧರ್ಮಂ ರಕ್ಷತಿ ಧರ್ಮವಿತ್ ।
ಪ್ರಾಣಿನಾಂ ತ್ವಂ ವಧಂ ಪಾರ್ಥ ಧಾರ್ಮಿಕೊ
ನಾವಬುಧ್ಯಸೇ ॥ ಕರ್ಣ. 69.22

'ಅಜ್ಞಾನವಶನಾಗಿ ನೀನು ನಿನ್ನನ್ನು ಧರ್ಮಜ್ಞನೆಂದು ತಿಳಿದು ವ್ರತಪಾಲನೆಯೆಂಬ ಧರ್ಮವನ್ನು ಆಚರಿಸಲು ತೊಡಗಿದ್ದೇಯೆ. ಆದರೆ ಅದರಲ್ಲಿ ಪ್ರಾಣಿ ಹಿಂಸೆಯಿದೆ. ನಿನ್ನಂಥ ಧಾರ್ಮಿಕರಿಗೆ ಇದು ಅರ್ಥವಾಗುವುದಿಲ್ಲ'

ಪ್ರಾಣಿನಾಮವಧಃ ತಾತ! ಸರ್ವಜ್ಯಾಯಾಯಾನ್
ಮತೋ ಮಮ ।
ಅನೃತಾಂ ವಾ ವದೇತ್ ವಾಚಂ
ನ ತು ಹಿಂಸ್ಯಾತ್ ಕದಾಚನ ॥ ಕರ್ಣಪರ್ವ. 69.23

ಸುಳ್ಳು ಹೇಳಿದರೂ ಪರವಾಗಿಲ್ಲ, ಪ್ರಾಣಿವಧೆ, ಹಿಂಸೆ ಇವುಗಳನ್ನು ವರ್ಜಿಸಬೇಕು ಎಂಬುದೇ ನನ್ನ ದೃಢವಾದ ಮತ. ಅಣ್ಣನನ್ನು ಕೊಲ್ಲುವುದು ಸರ್ವಥಾ ಸರಿಯಲ್ಲ ಎಂದು ಹೇಳಿ ಯಾವ ಯಾವ ಸಂದರ್ಭದಲ್ಲಿ ವಧೆ, ಹಿಂಸೆ, ವರ್ಜ್ಯ ಎಂಬುದನ್ನು ಪಟ್ಟಿಮಾಡುತ್ತಾನೆ. ಯುದ್ಧಮಾಡದವನು, ಶತ್ರುವಲ್ಲದವನು, ಶರಣಾಗತನಾದವನು, ಕೈ ಮುಗಿದು ಆಶ್ರಯ ಬೇಡುವವನು ಮುಂತಾಗಿ ಐವರು ವಧಾರ್ಹರಲ್ಲ. ಇದಕ್ಕೆ ಅರ್ಜುನನೇನಾದರೂ ತನ್ನ ವ್ರತ ಭಂಗ ಆಗುತ್ತದೆ, ಅದರಿಂದ ಪಾಪ ಬರುತ್ತದೆ ಎನ್ನುವುದಾದರೆ ಅದಕ್ಕೂ ಕೃಷ್ಣ ಸೂಕ್ತ ಪರಿಹಾರ ನೀಡುತ್ತಾನೆ.

ತ್ವಯಾ ಚೈವಂ ವ್ರತಂ ಪಾರ್ಥ ಬಾಲೇನೇವ ಕೃತಂ ಪುರಾ।
ತಸ್ಮಾದರ್ಮಸಂಯುಕ್ತಂ ಮೌರ್ಖ್ಯಾತ್ ಕರ್ಮ ವ್ಯವಸ್ಯತಿ ॥
ಕರ್ಣ. 27.69

ನೀನು ಹಿಂದು ಮುಂದು ಆಲೋಚಿಸದೆ ಹುಡುಗು ಬುದ್ಧಿಯಿಂದ ಹಿಂದೆ ಸಂಕಲ್ಪಿಸಿದ ವ್ರತವಿದು. ನೀನು ವ್ರತಗಳನ್ನು ಪ್ರತಿಜ್ಞೆಗಳನ್ನು ಮಾಡಿಬಿಡುತ್ತೀಯೆ. ನಂತರ ಮೂರ್ಖತನದಿಂದ ಆ ಅಸಂಬದ್ಧಗಳನ್ನೂ, ಅಧರ್ಮಗಳನ್ನೂ ಆಚರಿಸಲು ಮುಂದಾಗುತ್ತೀಯೆ. ಆದರೆ ಧರ್ಮದ ಗತಿ ಅತಿ ಸೂಕ್ಷ್ಮವಾಗಿದೆ. ಬಹುಮಟ್ಟಿಗೆ ಪರ ಪ್ರಯೋಜನದಲ್ಲಿ, ಪರಹಿತದಲ್ಲಿ ಪರ್ಯಾವಸಾನವಾಗುವುದೇ ಧರ್ಮ.ಅದಕ್ಕೆ ಪೋಷಕವಾಗಿ ಒಂದು ಧರ್ಮ ರಹಸ್ಯವನ್ನು ಹೇಳುತ್ತೇನೆ ಕೇಳು ಎನ್ನುತ್ತಾನೆ. 'ಸತ್ಯ ತನ್ನ ಮಟ್ಟಿಗೆ ಶ್ರೇಷ್ಠ ಎಂಬುದು ನಿಜ. ಆದರೆ ಅದರ ಸರಿಯಾದ ಸ್ವರೂಪ ತಾತ್ತ್ವಿಕವಾಗಿ ಅರ್ಥೈಸಿದರೆ ಮಾತ್ರ ತಿಳಿಯಲಾರದು. ಜೀವನದ ಪ್ರಸಂಗಗಳಲ್ಲಿಟ್ಟು ನೋಡಿದರೇನೆ ಒಳಗುಟ್ಟು ಗೊತ್ತಾಗುವುದು'.

ಸತ್ಯ, ಧರ್ಮಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಆಚಾರಕ್ಕಿಳಿದಾಗಲೇ ಅವುಗಳ ಅರ್ಥ ತಿಳಿಯುವುದು ಎಂಬ ಅಂಶವನ್ನು ವಿಶದಪಡಿಸಲು ಕೃಷ್ಣನು ಕೌಶಿಕನೆಂಬ ತಪಸ್ವಿಯ ವೃತ್ತಾಂತವನ್ನು ಹೇಳುತ್ತಾನೆ.

ಕೌಶಿಕನು ಬಹುಶ್ರುತವಾದ ಬ್ರಾಹ್ಮಣ. ಗ್ರಾಮದಿಂದ ದೂರ ನದೀಸಂಗಮದಿಂದ ಪವಿತ್ರವಾದ ಸ್ಥಳದಲ್ಲಿ ವಾಸಮಾಡುತ್ತಿದ್ದನು. ಆತನದು ದೃಢವಾದ ಒಂದು ವ್ರತವಿತ್ತು, ಅದೇನೆಂದರೆ ಯಾವಾಗಲೂ ಸತ್ಯವನ್ನೇ ಹೇಳುವುದು. ಅವನಿಗೆ

ಸತ್ಯವಾದಿಯೆಂಬ ಹೆಸರು ಎಲ್ಲ ಕಡೆ ಹರಡಿತ್ತು. ಒಮ್ಮೆ ಕೆಲವರು ಅವನಿದ್ದೆಡೆಗೆ ಕಳ್ಳರ ಭಯದಿಂದ ಓಡಿ ಬಂದರು. ಅವನು ನೋಡುತ್ತಿದ್ದಂತೆಯೇ ಕಾಡಿನ ಇನ್ನೊಂದು ಭಾಗದಲ್ಲಿ ಮರೆಯಾದರು. ಅವರನ್ನು ಅಟ್ಟಿಸಿಕೊಂಡು ಕಳ್ಳರು ಬಂದರು. ತಪಸ್ವಿಯನ್ನು ಕೇಳಿದರು '**ಸತ್ಯ ಹೇಳಿ**' ಎಂದು ತಾಕೀತು ಮಾಡಿದರು. ಕೌಶಿಕನಿಗೆ ಇಂಥ ಉಪರೋಧ ಬೇಕಿರಲಿಲ್ಲ ವೇನೋ? ಅವನು ಎಂದಿನ ತನ್ನ ವ್ರತದಂತೆ ಸತ್ಯವನ್ನೇ ನುಡಿದನು. ತಪ್ಪಿಸಿಕೊಂಡವರು ಯಾವ ದಿಕ್ಕಿನಲ್ಲಿ ಹೋದರು ಎಂಬುದನ್ನು ತಿಳಿಸಿದನು. ಕ್ರುದ್ಧರಾಗಿದ್ದ ಕಳ್ಳರು ಅವರನ್ನು ಹಿಂಬಾಲಿಸಿ ಹೋಗಿ ಹಿಡಿದು ಹೊಡೆದು ಸಾಯಿಸಿದರು. ಕೌಶಿಕ ತಪಸ್ವಿ ಕಾಲವಶನಾದಾಗ ಅವನಿಗೆ ದುರ್ಗತಿ ಯಾಯಿತು. ನರಕದಲ್ಲಿ ಕಷ್ಟಗಳನ್ನು ಅನುಭವಿಸಬೇಕಾಗಿ ಬಂತು. ಸತ್ಯ ಹೇಳಿದರೂ ನರಕ ಪ್ರಾಪ್ತಿಯೇ ಎಂದು ಕೇಳ ಬಹುದು. ಅವನ ಸತ್ಯವಾಕ್ಯದಿಂದ ಯಾರು ಉದ್ಧಾರ ವಾದರು? ಕಷ್ಟದಲ್ಲಿದ್ದ ಯಾವ ಬಡಪಾಯಿಗೆ ಉಪಕಾರ ವಾಯಿತು ಎಂಬುದೇ ಮುಖ್ಯ. ಸಮಯಾಸಮಯ ಪ್ರಜ್ಞೆ ಯಿಲ್ಲದೆ ಕೇವಲ ಶ್ರಾದ್ಧ ನಿಯಮಗಳನ್ನು ಅನುಸರಿಸಿದರೆ ಬಂದ ಸೌಭಾಗ್ಯವೇನು? ಜೀವನ ಸಾರ್ಥಕವಾಗಲಾರದು.

ಧರ್ಮದ ಫಲ ಇರುವುದು ಆಚರಣೆಯಲ್ಲಿ, ಸದ್ವಿನಿ ಯೋಗದಲ್ಲಿ ಒಂದಂತೂ ನಿಜ. ಅಹಿಂಸೆಯಲ್ಲಿ ಧರ್ಮವಿದೆ. ಇಷ್ಟಕ್ಕೂ ಧರ್ಮ ಇರುವುದೆ ಪ್ರಾಣಿಗಳ, ಮನುಷ್ಯರ ಏಳಿಗೆಗಾಗಿ, ಅದಿಲ್ಲದಿದ್ದಲ್ಲಿ ಧರ್ಮಕ್ಕೆ ಅರ್ಥವಿಲ್ಲ.

ಪ್ರಭವಾರ್ಥಾಯ ಭೂತಾನಾಂ
ಧರ್ಮಪ್ರವಚನಂ ಕೃತಮ್ ।
ಯಃ ಸ್ಯಾತ್ ಪ್ರಭವಸಂಯುಕ್ತಃ
ಸ ಧರ್ಮ ಇತಿ ನಿಶ್ಚಯಃ ॥
ಶಾಂತಿ. 109.10

ಧರ್ಮಕ್ಕೆ ಧಾರಣಗುಣ ಇರುವುದರಿಂದ ಧರ್ಮಎನಿಸಿಕೊಳ್ಳು ತ್ತದೆ. ಪ್ರಜೆಗಳನ್ನು ಅದು ಭರಿಸುತ್ತದೆ. ಹಸಿದವನಿಗೆ ಅನ್ನವಿಕ್ಕಿ ದರೆ ಅದು ಧರ್ಮ, ಉಂಡವನಿಗಲ್ಲ. ಹಾಗೆಯೇ ಪಾಪಿಗಳಿಗೆ ಹಣ ನೀಡಬಾರದು. ಕೊಟ್ಟರೆ ಕೊಟ್ಟವನನ್ನೇ ಕಾಡದೆಬಿಡದು.

ಪಾಪೇಭ್ಯೋ ಹಿ ಧನಂ ದತ್ತಂ
ದಾತಾರಮಪಿ ಪೀಡಯೇತ್ ।
ಕ.ಪ. 69.64

ಧರ್ಮವನ್ನುಳಿಸಲು ಅಸತ್ಯವನ್ನು ಹೇಳಿದರೂ ಅದು ಸುಳ್ಳು ಎನಿಸುವುದಿಲ್ಲ. ಧರ್ಮವೆಂಬುದು ಸಕಲ ಜೀವಿಗಳ ಒಳಿತನ್ನು ಕೋರುವ, ಅವುಗಳ ಬಾಳಿನ ಬೇರು. ಅದು ಒಂದು ದೇಶ, ಒಂದು ಸಮಾಜ, ಒಂದು ಜನಾಂಗ, ಒಂದು ಸ್ಥಿತಿಯನ್ನು ಮಾತ್ರ ಲಕ್ಷಿಸಿಲ್ಲ. ಎಲ್ಲ ಸ್ಥಿತಿಗಳ ಎಲ್ಲ ಸಮಾಜಗಳ ತಾಯಿ ಬೇರು ಧರ್ಮ. ಬಾಹ್ಯಜಗತ್ತಿನಲ್ಲಿರುವ ಕ್ರಮ ಋತವಾದರೆ ಜೀವಜಗತ್ತಿನಲ್ಲಿರುವುದು ಧರ್ಮ. ಮನುಷ್ಯನ ನಿತ್ಯ ಚರ್ಯೆ, ಆರ್ಥಿಕ ಪರಿಸ್ಥಿತಿ, ರಾಜಕೀಯ ವ್ಯವಹಾರ, ಎಲ್ಲದಕ್ಕೂ ಧರ್ಮವೇ ಬುನಾದಿಯಾಗಬೇಕು. ಆದ್ದರಿಂದಲೇ ಆಶ್ರಮ ಧರ್ಮ, ರಾಜಧರ್ಮ, ಗೃಹಸ್ಥಧರ್ಮ, ಗೃಹಿಣೀಧರ್ಮ, ಸ್ವಾಮಿಧರ್ಮ, ಸ್ವಧರ್ಮ ಇತ್ಯಾದಿ ಎಲ್ಲವೂ ಬೇಕಾಗುತ್ತದೆ, ಸಾಧುವಾಗುತ್ತದೆ. ಯಾವುದು ಆಶ್ರಯ ನೀಡುತ್ತದೊ, ಪೋಷಿಸುತ್ತದೋ, ಒಟ್ಟಾಗಿಸು ವುದೋ ಎಲ್ಲ ಜೀವಗಳನ್ನು ಭರಿಸುವುದೋ ರಕ್ಷಣೆ ನೀಡು ವುದೋ ಅದೇ ಧರ್ಮ.

ಧಾರಣಾತ್ ಧರ್ಮಮಿತ್ಯಾಹುಃ
ಧರ್ಮೇಣ ವಿಧೃತಾಃ ಪ್ರಜಾಃ
ಯಃ ಸ್ಯಾತ್ ಧಾರಣ ಸಂಯುಕ್ತಃ
ಸ ಧರ್ಮ ಇತಿ ನಿಶ್ಚಯಃ ॥
ಶಾಂತಿ. 109.11, ಕರ್ಣ 69.58

ಧರ್ಮ ಎಂದರೆ ಒಂದು ಮತ - religion ಅಲ್ಲ. ಸಂಕುಚಿತವಾದ ಒಂದು ನಂಬಿಕೆ, ಒಂದು ಸ್ವರೂಪಕಲ್ಪನೆ, ಒಂದೇ ವಿಧಾನವನ್ನಳವಡಿಸಿಕೊಂಡು ಭಿನ್ನವಾದದ್ದನ್ನು ದೂಷಿಸುವುದು ಧರ್ಮ ಎನಿಸುವುದಿಲ್ಲ. ಈ ಕಾರಣಕ್ಕಾಗೆಯೆ ಧರ್ಮವನ್ನು ರಿಲಿಜನ್ ಎಂದು ಹೇಳುವುದು ಅತ್ಯಂತ ಅನರ್ಥಕವಾದದ್ದು - Of all the erroneous understandings of dharma translating it as religion has been the greatest ಎನ್ನುತ್ತಾರೆ ತಿಳಿದವರು. ಈ ಹಿನ್ನಲೆಯಲ್ಲಿ ಕೀರ್ತಿ, ಲಕ್ಷ್ಮೀ, ಧೃತಿ, ಪುಷ್ಟಿ ಶ್ರದ್ಧ, ಕ್ರಿಯಾ, ಬುದ್ಧಿ ಇತ್ಯಾದಿಗಳನ್ನು ಧರ್ಮದ ಹತ್ತು ಪತ್ನಿಯರೆಂದು ಹೇಳುವ ಭಾರತೀಯ ಶಾಸ್ತ್ರ ಪುರಾಣಗಳ ರೂಪಕ ಭಾಷೆಯ ಸ್ವಾರಸ್ಯ ಗೋಚರವಾಗುತ್ತದೆ. ಒಂದೆಡೆ ಪತಿ-ಪತ್ನಿಯರ ಸಂಬಂಧದ ಅನ್ಯೋನತೆಯನ್ನು ಹೊಳೆಯಿ ಸುತ್ತಾ ಮಗದೊಂದು ರೀತಿಯಲ್ಲಿ ಧರ್ಮವೆಂಬ ಮಹಾ ಮೌಲ್ಯದ ಸ್ವರೂಪವನ್ನು ತೋರುತ್ತಿದೆ.

(ಇಲ್ಲಿ ಉದ್ಧರಿಸಲಾಗಿರುವ ಮಹಾಭಾರತದ ಶ್ಲೋಕ ಗಳನ್ನು ಗೋರಖ್‌ಪುರ ಆವೃತ್ತಿಯಿಂದ ತೆಗೆದು ಕೊಳ್ಳಲಾಗಿದೆ).

ಸತ್ಯಂ ಪರಂ ಧೀಮಹಿ

ವಿದ್ವಾನ್ ಎಂ. ಸುಬ್ರಹ್ಮಣ್ಯ ಭಟ್
ಮುಡಿಪು, ದಕ್ಷಿಣ ಕನ್ನಡ

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ
ಸ್ವರಾಟ್ ತೇನೇ ಬ್ರಹ್ಮಹೃದಾಯ ಆದಿಕವಯೇ
ಮುಹ್ಯಂತಿ ಯತ್ಸೂರಯಃ।
ತೇಜೋ ವಾರಿಮೃದಾಂ ಯಥಾ ವಿನಿಮಯೋ ಯತ್ರ
ತ್ರಿಸರ್ಗೋಽಮೃಷಾ ಧಾಮ್ನಾ ಸ್ವೇನ ಸದಾ
ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥

ಪರಮ ಸತ್ಯಸ್ವರೂಪವಾದ, ಸೃಷ್ಟಿ - ಸ್ಥಿತಿ - ಲಯಗಳಿಗೆ ಕಾರಣನಾದ ಆದಿಕವಿಯಾದ ಬ್ರಹ್ಮನಿಗೆ ವೇದವನ್ನು ಉಪದೇಶಿಸಿದ, ಸರ್ವೋತ್ತಮನಾದ, ತೇಜಸ್ಸು - ನೀರು - ಭೂಮಿಗಳಿಗೆ ಆಧಾರಭೂತನಾದ, ಯಾವುದೇ ವಿಕಾರಗಳಿಗೆ ಒಳಗಾಗದೆ ನಿಷ್ಕಲ ನಿರಂಜನ ಸ್ವರೂಪಿಯಾದ, ದಿವ್ಯ ತೇಜಸ್ಸಿನಿಂದ ಮಾಯೆಯನ್ನು ಪರಿಹರಿಸುವ ಪರಮಾತ್ಮನೇ, ನಾವು ನಿನ್ನ ಸತ್ಯ ಸ್ವರೂಪವನ್ನು ಧ್ಯಾನಿಸುತ್ತೇವೆ.

ಶ್ರೀಮದ್ಭಾಗವತದ ಈ ಮಂಗಳಶ್ಲೋಕ ಪರಮಾತ್ಮನ ವರ್ಣನೆಯನ್ನು ಎಷ್ಟೊಂದು ಸೊಗಸಾಗಿ ಮಾಡಿದೆ! **ಸತ್ಯಂ ಪರಂ ಧೀಮಹಿ !** ಪರಮ ಸತ್ಯಕ್ಕೆ ಮಿಗಿಲಾದುದು ಯಾವುದಾದರೂ ಇದೆಯೇ? ಪರಮಾತ್ಮನಿಗಿಂತ ಮಿಗಿಲಾದ ಸತ್ಯವಿದೆಯೇ? ಸತ್ಯವನ್ನು ಬಿಟ್ಟು ನಾವು ಬೇರೇನನ್ನಾದರೂ ಧ್ಯಾನಿಸುವ ಅಗತ್ಯವಿದೆಯೇ? ನಾವು ಗೊಲ್ಲಗೌಡನ '**ಪುಣ್ಯಕೋಟಿ**'ಯ ಕಥೆಯನ್ನು ಕೇಳಿದ್ದೇವೆ. ನಮ್ಮಂತಹ '**ಪಂಡಿತಂಮನ್ಯ(!)**'ರ ಮುಂದೆ ಗೊಲ್ಲಗೌಡನ ಮೂಕ(?) ಪಶು ಪುಣ್ಯಕೋಟಿ ಏನೇನೂ ಅಲ್ಲ. ಅದರ ಬಾಯಿಯಿಂದ ಅಜ್ಞಾತ ಹಳ್ಳಿಗನೊಬ್ಬ ಎಂತಹ ಪರಮ ಸತ್ಯವನ್ನು ಹೊರ ಹೊಮ್ಮಿಸಿದ್ದಾನೆ! ಹುಲಿಯ ಬಳಿಗೆ ಹೋಗುವ ಸಂದರ್ಭದಲ್ಲಿ ಪುಣ್ಯಕೋಟಿ ತನ್ನ ಕರುವಿಗೆ ಹೇಳಿದ ಮಾತಿದು -

'ಸತ್ಯವೇ ನಮ್ಮ ತಾಯಿ ತಂದೆ ಸತ್ಯವೇ ನಮ್ಮ ಬಂಧು ಬಳಗ
ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಜಗದೀಶನು ॥'

ಪರಮಾತ್ಮನ ಸತ್ಯಸ್ವರೂಪವಾದರೂ ಹೇಗಿದೆ?
ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ
ಸತ್ಯಸ್ಯಯೋನಿಂ ನಿಹಿತಂ ಚ ಸತ್ಯೇ।
ಸತ್ಯಸ್ಯಸತ್ಯಂ ಋತಸತ್ಯ ನೇತ್ರಂ
ಸತ್ಯಾತ್ಮಕಂ ತ್ವಾಂ ಶರಣಂ ಪ್ರಪನ್ನಾಃ ॥

ಸತ್ಯಸ್ವರೂಪನಾದ ಪರಮಾತ್ಮನನ್ನು ಶರಣುಹೊಕ್ಕರೆ ನಮಗೆ ಬೇರೇನು ಬೇಕು? ಆದರೆ ಅದರ ಅರಿವು ನಮಗೆ ಎಂದಾದೀತು? ವಿದ್ಯಾವಂತರೆನಿಸಿಕೊಂಡ ನಾವಿಂದು ಹೇಗೆ ನಡೆದುಕೊಳ್ಳುತ್ತಿದ್ದೇವೆ? ನಮ್ಮ ವರ್ತನೆ ಹೇಗಿದೆ?

ಪ್ರತ್ಯಹಂ ಪ್ರತ್ಯವೇಕ್ಷೇತ ನರಶ್ಚರಿತಮಾತ್ಮನಃ।
ಕಿಂ ನು ಮೇ ಪಶುಭಿಸ್ತುಲ್ಯಂ ಕಿಂ ನು ಸತ್ಪುರುಷೈರಿತಿ ॥

ಹೌದು, ನಾವು ನಮ್ಮ ನಡೆ ನುಡಿಗಳನ್ನು ಪ್ರತಿದಿನ ಗಮನಿಸುತ್ತಿರಬೇಕು. ನಾನು ಪಶುಗಳಂತೆ ಬದುಕುತ್ತಿದ್ದೇನೆಯೇ? ಅಥವಾ ಸತ್ಪುರುಷರಂತೆ ಬದುಕುತ್ತಿದ್ದೇನೆಯೇ? ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಡವೆ? ದುರ್ಯೋಧನನು ಹೇಳಿದ ಮಾತು ನಮಗೆ ಗೊತ್ತಿದೆ.

ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ

ಧರ್ಮವನ್ನು ತಿಳಿದಿರುವೆ; ಆದರೆ ನನ್ನ ಮನಸ್ಸು ಅತ್ತ ಹರಿಯುತ್ತಿಲ್ಲ! ನಮ್ಮ ಪಾಡೂ ಅಷ್ಟೆ!

ನಮಗೆ ಮಾಯೆ ಕವಿದಿದೆ ! ನಮಗೆ ಆತನ ನಿಜ ಸ್ವರೂಪದ ಅರಿವಾಗುತ್ತಿಲ್ಲ. ಅದಕ್ಕೆಂದೇ ನಾವು '**ಓ ದೇವ, ಮಾಯೆಯನ್ನು ಪರಿಹರಿಸಿ ಸತ್ಯ ಸ್ವರೂಪವನ್ನು ತೋರಿಸು**' ಎಂದು ಬೇಡುತ್ತಿರುವುದು ಹುಲು ಮಾನವರಾದ ನಮ್ಮ ಪಾಡಾದರೂ ಹಾಗಿರಲಿ, ಪರಮಾತ್ಮನನ್ನೇ ಮಗನನ್ನಾಗಿ ಪಡೆದ ವಸುದೇವ - ದೇವಕಿಯರ ಪಾಡಾದರೂ ಹೇಗಿತ್ತು?

ಶ್ರೀಕೃಷ್ಣನ ಜನನವಾದಾಗ ವಸುದೇವ - ದೇವಕಿಯರಿಗೆ ಕಂಸನಿಂದ ಒದಗಲಿರುವ ಆಪತ್ತಿನ ಅರಿವಾಗಿ ಶೋಕಿಸತೊಡಗಿದ್ದರು. ಶ್ರೀಕೃಷ್ಣನು ತನ್ನನ್ನು ಗೋಕುಲಕ್ಕೆ ಕರೆದೊಯ್ಯಲು ಸೂಚನೆ ನೀಡಿದನು. ಪುತ್ರನ ಜನನವಾದರೂ ಪುತ್ರನ ಲಾಲನೆ - ಪಾಲನೆಯ ಆನಂದವನ್ನು ಅನುಭವಿಸುವ ಯೋಗವಿಲ್ಲದ ದೇವಕಿ ಅಳತೊಡಗಿದಳು. ಆಗ ಅವರನ್ನು ಶ್ರೀಕೃಷ್ಣನು ಸಮಾಧಾನ ಪಡಿಸುತ್ತಾ **"ತಾಯೇ, ಸ್ವಯಂಭುವ ಮನ್ವಂತರದಲ್ಲಿ ನೀವು ಪೃಶ್ನಿ ಮತ್ತು ಸುತಪಾ ಹೆಸರಿನ ದಂಪತಿಗಳಾಗಿದ್ದು ಸಂತತಿಗೋಸ್ಕರ ತಪಸ್ಸು ಮಾಡಿದಿರಿ. ನಾನು ಪ್ರಸನ್ನನಾಗಿ ಪ್ರತ್ಯಕ್ಷನಾಗಿ ವರವನ್ನು ಬೇಡಿಕೊಳ್ಳುವಂತೆ ತಿಳಿಸಿದಾಗ ನೀವು ನನ್ನನ್ನು ಮಗನನ್ನಾಗಿ ಪಡೆಯಲು ಬಯಸಿದಿರಿ. ಮಾಯೆಯಿಂದ ಮೋಹಿತರಾದ ಕಾರಣ ನೀವು ಮೋಕ್ಷವನ್ನು ಬೇಡಲಿಲ್ಲ. ಒಂದು ವೇಳೆ ಮೋಕ್ಷವನ್ನು ಬೇಡಿದ್ದರೆ ಈ ಭವಸಾಗರದ ಜಂಜಾಟ**

ನಿಮಗೆ ಒದಗುತ್ತಿರಲಿಲ್ಲ. ಆದರೆ ಕರ್ಮ ಫಲವನ್ನು ಅನುಭವಿಸದೆ ಮೋಕ್ಷಗಳಿಸಲು ಸಾಧ್ಯವಿಲ್ಲ. ಆದ್ದರಿಂದ ನೀವೀಗ ನನ್ನಲ್ಲಿ ಪುತ್ರಭಾವ ಹಾಗೂ ನಿರಂತರ ಬ್ರಹ್ಮಭಾವ ವನ್ನು ತಾಳಿರಿ. ಹೀಗೆ ವಾತ್ಸಲ್ಯ -ಸ್ನೇಹ ಮತ್ತು ಚಿಂತನದಿಂದ ನೀವು ಮೋಕ್ಷವನ್ನು ಗಳಿಸುವಿರಿ" ಎಂದು ಹೇಳಿದನು.

ಶ್ರೀಕೃಷ್ಣನು ಹೇಳಿದ ಮಾತು ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಇಂದು ನಾವು ಪರಮಾತ್ಮನೇನಾದರೂ ಪ್ರತ್ಯಕ್ಷನಾದರೆ ಹೇ ದೇವ, ನಿನ್ನ ಪಾದಕಮಲಗಳಲ್ಲಿ ಅಚಲವಾದ ಭಕ್ತಿಯನ್ನು ನೀಡು, ಅಥವಾ ಮೋಕ್ಷವನ್ನು ನೀಡು ಎಂದು ಕೇಳಲು ಸಾಧ್ಯವೆ? ನಮಗೆ ಚಾರ್ವಾಕನ ಮಾತೇ ಪ್ರಿಯ. ಅವನು ಹೇಳಿದ **'ಸ್ವರ್ಗವೂ ಇಲ್ಲ, ಮೋಕ್ಷವೂ ಇಲ್ಲ, ಪರಲೋಕ ವೆಂಬುದೇ ಸುಳ್ಳು ಭಸ್ಮೀಭೂತಸ್ಯ ದೇಹಸ್ಯ ಪುನರಾಗ ಮನಂ ಕುತ? ತಸ್ಮಾತ್ ಸರ್ವಪ್ರಯತ್ನೇನ ಋಣಂ ಕೃತ್ವಾ ಘೃತಂ ಪಿಬೇತ್'** ಎಂಬಿತ್ಯಾದಿ ಮಾತುಗಳೇ ಅಪ್ಯಾಯಮಾನ. ಬದುಕಿರುವಾಗ ಸಾಲ ಮಾಡಿಯಾದರೂ ತುಪ್ಪ ತಿನ್ನುವ ಭೋಗ ಜೀವನ ನಮಗೆ ಬೇಕಾಗಿದೆ. ಕಣ್ಣಿಗೆ ಕಾಣುವ ಸುಖವನ್ನು ಬಿಟ್ಟು ಕಾಣದ ಲೋಕದ ಸುಖಕ್ಕಾಗಿ ನಾವು ಹಂಬಲಿಸಲು ಸಾಧ್ಯವೇ? ಆದ್ದರಿಂದ ನಮ್ಮ ದೃಷ್ಟಿಯೆಲ್ಲಾ ಸುಖೋಪಭೋಗಗಳ ಕಡೆಗೇ ಹರಿಯುತ್ತದೆ.

ನಿಗಮಕಲ್ಪತರೋರ್ಗಲಿತಂ ಫಲಂ
ಶುಕಮುಖಾದಮೃತದ್ರವ ಸಂಯುತಂ ।
ಪಿಬತ ಭಗವತಂ ರಸಮಾಲಯಂ
ಮುಹುರಹೋ ರಸಿಕಾ ಭುವಿ ಭಾವುಕಾಃ ॥

'ಎಲೈ ರಸಿಕ ಭಕ್ತರೇ, ಶ್ರೀಮದ್ಭಾಗವತವೆಂಬುದು ವೇದ ವೆಂಬ ಕಲ್ಪವೃಕ್ಷದಿಂದ ಜಾರಿದ ಪಕ್ವಫಲ, ಗಿಣಿರೂಪದ ಶುಕಮುನಿಯ ಮುಖದ ಸಂಯೋಗದಿಂದ ಪರಮಾ ನಂದಾಮೃತವನ್ನು ತುಂಬಿಕೊಂಡ ಫಲ, ಕೇವಲ ರಸ ದಿಂದಲೇ ತುಂಬಿಕೊಂಡಿರುವ ಅತ್ಯಂತ ಸವಿಯಾದ ಫಲ, ಭೂಮಿಯಲ್ಲಿ ಸುಲಭವಾಗಿ ದೊರಕಿರುವ ಈ ಫಲದ ರಸವನ್ನು ದೇಹ ಮತ್ತು ಮನಸ್ಸು ಲಯವಾಗುವವರೆಗೂ ಮುಕ್ತಿಯಲ್ಲೂ ಕೂಡ ಕುಡಿಯುತ್ತಾ ಇರಿ'.

ಶ್ರೀಮದ್ಭಾಗವತದ ಸವಿಯನ್ನು ಸವಿದವರು ಬೇರೆಲ್ಲಾದರೂ ಸವಿಯನ್ನು ಕಾಣಬಲ್ಲರೇ? ಶ್ರೀಮದ್ಭಾಗವತದ ಅಂತರಾರ್ಥ ವನ್ನು ಮನನ ಮಾಡಿಕೊಂಡರೆ ನಮಗೆ ಬೇರೇನೂ ಬೇಕಿಲ್ಲ.

'ವ್ಯಾಸೋಚ್ಛಿಷ್ಟಂ ಜಗತ್ಸರ್ವಂ' ಎಂಬುದೇ ಸರಿಯಾದ ಮಾತು. ಕಂಸನ ಕಡೆಯ ಮಲ್ಲರೊಡನೆ (ಮುಷ್ಟಿಕ, ಚಾಣೂರ) ಹೋರಾಡಲು ಬಂದ ಬಾಲಕೃಷ್ಣನನ್ನು ವ್ಯಾಸರು ವರ್ಣಿಸಿದ ಪರಿಯಂತೂ ಉಪಮಾತೀತ.

ಮಲ್ಲಾನಾಂ ಅಶನಿಃ, ನೃಣಾಂ ನರವರಃ, ಸ್ತ್ರೀಣಾಂ ಸ್ಮರೋ ಮೂರ್ತಿಮಾನ್ ಗೋಪಾನಾಂ ಸ್ವಜನಃ, ಅಸಂತಾಂಕ್ಷಿತಿ ಭುಜಾಂ ಶಾಸ್ತಾ ಸ್ವಪಿತ್ರೋಃ ಶಿಶುಃ । ಮೃತ್ಯುರ್ಭೋಜ ಪತೇಃ, ವಿರಾಡವಿದುಷಾಂ, ತತ್ತ್ವಂ ಪರಂ ಯೋಗಿನಾಂ ವೃಷ್ಣೀನಾಂ ಪರದೇವತಾ ಇತಿ ವಿದಿತೋ ರಂಗಂ ಗತಃ ಸಾಗ್ರಜಃ॥

ಮಲ್ಲರಿಗೆ ವಜ್ರ, ಮನುಷ್ಯರಿಗೆ ಶ್ರೇಷ್ಠಪುರುಷ, ಸ್ತ್ರೀಯರಿಗೆ ಮನ್ಮಥ, ಗೊಲ್ಲರಿಗೆ ಆತ್ಮೀಯ, ದುಷ್ಟರಾಜರಿಗೆ ತಕ್ಕ ಪಾಠ ಕಲಿಸುವ ಶಿಕ್ಷಕ, ಮಾತಾಪಿತೃಗಳಿಗೆ ಮುದ್ದುಮಗು, ಕಂಸನಿಗೆ ಯಮ, ಅಜ್ಞಾನಿಗಳಿಗೆ ವಿರಾಟ್ ಪುರುಷ, ಯೋಗಿಗಳಿಗೆ ಪರತತ್ತ್ವ, ವೃಷ್ಣಿವಂಶದವರಿಗೆ ಪರದೇವತೆ - ಹೀಗೆ ಉಲ್ಲೇಖಾ ಲಂಕಾರದಿಂದಲೂ, ರೌದ್ರ, ಅದ್ಭುತ, ಶೃಂಗಾರ, ಹಾಸ್ಯ, ವೀರ, ವಾತ್ಸಲ್ಯ, ಭಯಾನಕ, ಆಶ್ಚರ್ಯ, ಶಾಂತ, ಭಕ್ತಿ ಮೊದಲಾದ ರಸಗಳಿಂದಲೂ ಶ್ರೀಕೃಷ್ಣನನ್ನು ಸ್ತುತಿಸಲು ವ್ಯಾಸರಿಗೇ ಸಾಧ್ಯ. ಏಕೆಂದರೆ ವ್ಯಾಸರು ನಾರಾಯಣ ಸ್ವರೂಪರೇ ಆಗಿರುವರು.

ಕೃಷ್ಣದ್ವೈಪಾಯನಂ ವ್ಯಾಸಂ

ವಿದ್ಧಿ ನಾರಾಯಣಂ ಪ್ರಭುಂ ।

ಕುಚೋದ್ಯ ಮಾಡುವವರಿಗೆ ರಾಸಕ್ರೀಡೆ, ವಸ್ತ್ರಾಪಹರಣ - ಮೊದಲಾದ ಪ್ರಸಂಗಗಳು ವಿಷಯಗಳೇ ಆಗುತ್ತವೆ. ಆದರೆ ಭಾಗವತದ ಅಂತರಾರ್ಥವನ್ನು ತಿಳಿದುಕೊಂಡವರಿಗೆ ಶ್ರೀ ಕೃಷ್ಣನ ಆ ದಿವ್ಯಕ್ರೀಡೆ ಆತ್ಮನ್ಯವರುದ್ಧ ಸೌರತವಾಗಿ ತೋರುತ್ತದೆ. ಗೋಪಿಕೆಯರ ಒಡನಾಟ ಪರಮಾತ್ಮನ ಸರ್ವಾಂತರ್ಯಾಮಿತ್ವವನ್ನು ಪ್ರಕಟಿಸುತ್ತದೆ.

ನರಸಿಂಹಾವತಾರ ಮಾಡಿ ಹಿರಣ್ಯಕಶಿಪುವನ್ನು ಸಂಹರಿಸು ವುದಕ್ಕೆ ಪರಮಾತ್ಮನಿಗೆ ಬಹಳ ಕಷ್ಟವಾಯಿತಂತೆ! ಏಕೆಂದರೆ ಹಿರಣ್ಯಕಶಿಪು ಬ್ರಹ್ಮನಲ್ಲಿ ಆ ರೀತಿಯ ವರವನ್ನು ಕೇಳಿದ್ದ (ಹಗಲಿನಲ್ಲೂ ಅಲ್ಲ ರಾತ್ರಿಯಲ್ಲೂ ಅಲ್ಲ ಮನೆಯ ಒಳಗೂ ಅಲ್ಲ ಹೊರಗೂ ಅಲ್ಲ ಮನುಷ್ಯರಿಂದಲೂ ಅಲ್ಲ ಪ್ರಾಣಿ ಗಳಿಂದಲೂ ಅಲ್ಲ ಕೆಳಗೂ ಅಲ್ಲ ಮೇಲೂ ಅಲ್ಲ ಅಸ್ತ್ರ ದಿಂದಲೂ ಅಲ್ಲ ಶಸ್ತ್ರದಿಂದಲೂ ಅಲ್ಲ ಎಂಬಿತ್ಯಾದಿಯಾಗಿ ಮರಣ ಬಾರದಂತೆ ವರ ಕೇಳಿದ್ದ) ಆದ್ದರಿಂದ ಕಂಬದಿಂದ ಹೊರಬಂದ ಸ್ವಾಮಿಯು ಸಂಜೆ ವೇಳೆ ಹೊಸಿಲಲ್ಲಿ ಕುಳಿತು ನರಸಿಂಹರೂಪದಿಂದ ತೊಡೆಯ ಮೇಲೆ ಹಾಕಿಕೊಂಡು ಉಗುರುಗಳಿಂದಲೇ ಹಿರಣ್ಯಕಶಿಪುವನ್ನು ಸೀಳಿ ಹಾಕಿದ! ಬಳಿಕ ಬ್ರಹ್ಮನ ಬಳಿ ಇನ್ನು ಮುಂದೆ ಇಂತಹ ವರಗಳನ್ನು ನೀಡಿ

ನಮ್ಮನ್ನು ಪೇಚಿಗೆ ಸಿಕ್ಕಿಸಬೇಡ ಎಂದು ಹಾಸ್ಯಗೈದನಂತೆ. ಇಂದಿನ ರಾಜಕಾರಣಿಗಳು ಹಿರಣ್ಯಕಸಿಪುವಿನ ತಂತ್ರಗಾರಿಕೆ ಯನ್ನು ರಾಜಕೀಯದಲ್ಲಿ ಬಳಸುತ್ತಲೇ ಬಂದಿದ್ದಾರೆ! ದೇಶ ವನ್ನೂ ಪ್ರಜೆಗಳನ್ನೂ ಸಂಕಟಕ್ಕೀಡು ಮಾಡುತ್ತಲೇ ಇದ್ದಾರೆ.

ಶ್ರೀಮದ್ಭಾಗವತಕ್ಕೆ **'ಪಾರಮಹಂಸ್ಯ ಸಂಹಿತೆ'** ಎಂಬ ಹೆಸರಿದೆ! ಇದು ಧರ್ಮ - ಅರ್ಥ - ಕಾಮ - ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಪ್ರತಿಪಾದಿಸುತ್ತದೆ.

ಕಿಂ ವಾ ಭಾಗವತಾ ಧರ್ಮಾಃ
ನ ಪ್ರಾಯೇಣ ನಿರೂಪಿತಾಃ ।
ಪ್ರಿಯಾಃ ಪರಮ ಹಂಸಾನಾಂ
ತ ಏವ ಹ್ಯಚ್ಯುತ ಪ್ರಿಯಾಃ ॥

ಭಗವಂತನಲ್ಲಿ ಏಕಾಂತ ಭಕ್ತಿಯನ್ನಿಟ್ಟು ಭಗವಂತನಿಗೆ ಪ್ರಿಯ ರಾದ ಭಾಗವತರಲ್ಲೂ, ಸಮಸ್ತ ಜೀವಿಗಳಲ್ಲೂ ಭಗವದ್ ಭಾವವನ್ನು ಹೊಂದಿರುವವರು ತನಗೆ ಪ್ರಿಯರೆಂದು ಪರಮಾತ್ಮನು ಹೇಳಿರುವನು.

ಪರಮಾತ್ಮನ ಸಾಕ್ಷಾತ್ಕಾರಕ್ಕೆ ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗಗಳು ಅವಶ್ಯಕವೆಂದು ತಿಳಿಸಿ ಉಳಿದೆಲ್ಲಾ ಯೋಗ ಗಳು ಈ ಮೂರು ಯೋಗಗಳಲ್ಲಿ ಅಡಕವಾಗಿರುವುದಾಗಿ ಭಾಗವತ ಪ್ರತಿಪಾದಿಸಿದೆ. ಭಾಗವತದಲ್ಲಿ ಉಕ್ತವಾದ ಅನೇಕ ಕಥೆಗಳು ನಮಗೆ ಜೀವನದ ಸತ್ಯ ದರ್ಶನವನ್ನು ಮಾಡಿಸಿ ನಮ್ಮನ್ನು ಸನ್ಮಾರ್ಗದಲ್ಲಿ ತೊಡಗಿಸುತ್ತವೆ.

ಪ್ರಾತರ್ದ್ಯೂತ ಪ್ರಸಂಗೇನ ಮಧ್ಯಾಹ್ನೇ ಸ್ತ್ರೀ ಪ್ರಸಂಗತಃ ।
ರಾತ್ರೌ ಚೋರ ಪ್ರಸಂಗೇನ ಕಾಲೋ ಗಚ್ಛತಿ ಧೀಮತಾಂ ॥

ಮೇಲ್ನೋಟಕ್ಕೆ ಈ ಶ್ಲೋಕದಿಂದ ಜೂಜು, ಸ್ತ್ರೀಸಂಗ ಮತ್ತು ಕಳ್ಳತನವೆಂಬ ಅರ್ಥ ವ್ಯಕ್ತವಾದರೂ, ಶ್ರೀಮನ್ಮಹಾಭಾರತ, ಶ್ರೀಮದ್ರಾಮಾಯಣ ಮತ್ತು ಶ್ರೀಮದ್ಭಾಗವತದ ಆಸ್ವಾದನೆ ಯಲ್ಲಿ ಸಜ್ಜನರ ಕಾಲವು ಕಳೆಯುತ್ತದೆ ಎಂಬ ಅಂತರಾರ್ಥ ಹೊರಹೊಮ್ಮುತ್ತದೆ. ವಿದ್ಯಾವಂತರನ್ನು ಪರೀಕ್ಷೆ ಮಾಡಬೇಕಾ ದರೆ ಅದಕ್ಕೆ ಭಾಗವತವೇ ಒರೆಗಲ್ಲಾಗಿದೆಯಂತೆ.

ವಿದ್ಯಾವತಾಂ ಭಾಗವತೇ ಪರೀಕ್ಷಾ ।

ಆದ್ದರಿಂದ ರಸಿಕ ಭಕ್ತರಾದ ನಾವೆಲ್ಲರೂ ಶ್ರೀಮದ್ಭಾಗವತದ ಅಮೃತೋಪಮವಾದ ರಸವನ್ನು ಸವಿದು ಪಾವನ ಸತ್ಯದ ದರ್ಶನ ಮಾಡಿ ಪರಮಾತ್ಮನ ಕೃಪೆಗೆ ಪಾತ್ರರಾಗೋಣವೇ?

UPANISHADS

The exact number of the Upanishads is not clearly known. Scholars differ on the total number of Upanishads as well as on what constitutes an Upanishad. Some of the Upanishads are very ancient, but some are of recent origin.

The original Upanishads are the end portions of the four Vedas, and there by came to be identified with "Vedanta", which literally means the end of the Vedas. They dealt with the philosophical aspects of the Vedas and were taught in ancient India to highly qualified and selected individuals.

The Upanishadic texts are part of the Shruti literature and are considered to be divine in origin. They are associated with the names of several ancient seers. Some of them lived at least twenty generations before Lord Krishna and the probable date of the Mahabharata war. Prominent among these sages were Yagnavalkya, Uddalaka Aruni, Shandilya, Aitareya, Pipplapada and Sanatkumara.

It is estimated that there are to be about 350 Upanishads today, some well known and some least known. The Bhagavad-Gita of Lord Krishna is also considered to be an Upanishad because it contains the essence of many of the Upanishads.

ದೇಹವೆಂಬ ದೇಗುಲ

ಕವಿ ವೆಂ ಸುರೇಶ್
ಶಿವಮೊಗ್ಗ

ಮಾನವ ದೇಹ ಒಂದು ಅದ್ಭುತ ಯಂತ್ರ. ಅದರ ಒಂದೊಂದು ಅಂಗದ ರಚನೆಯೂ ಒಂದೊಂದು ವಿಸ್ಮಯ ಲೋಕ. ಆಧುನಿಕ ಆವಿಷ್ಕಾರದ ಫಲವಾಗಿ ಬಂದಿರುವ ವಿವಿಧ ಯಂತ್ರಗಳ ವಿವಿಧ ಕಾರ್ಯಗಳೆಲ್ಲವನ್ನೂ ಕೂಡ ಈ ಮಾನವನ ದೇಹದಲ್ಲಿರುವ ಅಂಗಾಂಗಗಳೇ ಸಮರ್ಥವಾಗಿ ನಿರ್ವಹಿಸ ಬಲ್ಲವು. ಮಾನವ ಸೃಷ್ಟಿಯಾದ ಈ ಯಂತ್ರಗಳ ಕಾರ್ಯ ಕ್ಷಮತೆ ಮಾತ್ರ ಸೀಮಿತ ಮತ್ತು ಅನಿಶ್ಚಿತ. ಆದರೆ ಮಾನವ ನಲ್ಲಿರುವ ಪ್ರತಿ ಅಂಗಾಂಗದ ಕಾರ್ಯಕ್ಷಮತೆ ಬಹುಶಃ ಅಪರಿಮಿತ, ನಿಶ್ಚಿತ - ಅನಂತ. ಯುಕ್ತವಾಗಿ ಬಳಸಿದಷ್ಟೂ ಅವುಗಳಿಂದ ಪಡೆಯಬಹುದಾದ ಫಲಗಳೂ ಕೂಡ ಕಲ್ಪನಾತೀತ. ಪರಿಶ್ರಮಕ್ಕೆ ತಕ್ಕ ಫಲದ ಗ್ಯಾರಂಟಿ ಇರುವುದು ಈ ದೇಹದಲ್ಲಿ ಮಾತ್ರ. ಪ್ರಪಂಚದಲ್ಲಿರುವ ಎಲ್ಲಾ ಚರಾಚರ ಪ್ರಾಣಿಗಳ ದೇಹ ರಚನೆಯನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ, ಮಾನವನ ದೇಹ ರಚನೆಗೂ, ಇತರೆ ಪ್ರಾಣಿಗಳ ದೇಹ ರಚನೆಗೂ ಇರುವ ವ್ಯತ್ಯಾಸ ಸ್ಪಷ್ಟವಾಗುತ್ತದೆ. ಬಹುತೇಕ ಎಲ್ಲಾ ಪ್ರಾಣಿಗಳಿಗೂ ಮಾನವನಿಗಿಂತ ಬುದ್ಧಿಶಕ್ತಿ ಕಡಿಮೆ ಅಥವಾ ಇಲ್ಲವೆಂದೇ ಹೇಳಬಹುದು. ಪ್ರಾಣಿಗಳು ಮಾನವರಂತೆ ಮಾತನಾಡಲಾರವು - ನಗಲಾರವು! ಅಷ್ಟೇಕೆ ಒಂದೊಂದು ಪ್ರಾಣಿಯ ದೇಹ ರಚನೆ ಕೂಡ ಭಿನ್ನವಾದದ್ದೇ. ಪ್ರಮುಖವಾಗಿ ಆಹಾರ ಸಂಪಾದನೆಗೆ ಸಹಾಯಕವಾಗುವ ಮಾದರಿಯಲ್ಲಿ ಅವುಗಳ ಅಂಗ ರಚನೆ ಇದೆ. ಉದಾ: ಉದ್ದ ಕತ್ತಿರುವ ಜಿರಾಫೆ, ಅತಿ ವೇಗವಾಗಿ ಓಡುವ ಚಿರತೆ ಇತ್ಯಾದಿ. ಅರ್ಥಾತ್ ಅವುಗಳಲ್ಲಿ ಒಂದೆರಡು ಅಂಗಗಳು ಮಾತ್ರ ಪ್ರಾಧಾನ್ಯವಾಗಿರುತ್ತವೆ. ಬದಲಾಗಿ ಮಾನವನ ದೇಹದ ಒಂದೊಂದು ಅಂಗವು ಒಂದು ವಿಶಿಷ್ಟವಾದ ಉಪಯೋಗಿ "tool" ಅಂತಲೇ ಬ್ರಹ್ಮ ತನ್ನೆಲ್ಲಾ ಕೌಶಲ್ಯವನ್ನೂ ಬಳಸಿ, ಒಂದು ಮಹತ್ತರವಾದ ಉದ್ದೇಶಕ್ಕಾಗಿ, ಬಹುಶಃ ಈ ಮಾನವ ಯಂತ್ರವನ್ನು ರಚಿಸಿರಬೇಕು.

ಇಂತಹ ಒಂದು ಅದ್ಭುತ ವಿಸ್ಮಯ ಮತ್ತು ಅಪರಿಮಿತ ಶಕ್ತಿ ಸಾಮರ್ಥ್ಯಗಳ ಭಂಡಾರವಾದ ಈ ದೇಹವನ್ನು ಮತ್ತು ಈ ಮಾನವ ಜನ್ಮವನ್ನು ಪಡೆದ ನಾವೇ ಧನ್ಯರು - ಅದೃಷ್ಟಶಾಲಿಗಳು. ಈ ಚಮತ್ಕಾರೀ ಯಂತ್ರದ ಒಡೆಯರಾದ ನಾವು, ಪ್ರಥಮತಃ ಅದನ್ನು ಸದಾ ಸುಸ್ಥಿತಿಯಲ್ಲಿಡಲು ಕಾಳಜಿ ವಹಿಸ ಬೇಕು. **ಶ್ರೀ ಸತ್ಯ ಸಾಯಿಬಾಬ**ರವರು ನುಡಿದಂತೆ "**ದೇಹವೊಂದು ದೇವರ ದೇವಾಲಯ, ಆದುದರಿಂದ ಅದನ್ನು ಸುಸ್ಥಿತಿಯಲ್ಲಿಡುವುದು ಮಾನವನ ಮೊದಲ ಕರ್ತವ್ಯ**" ದುರದೃಷ್ಟವಶಾತ್ ಮನುಷ್ಯ ತನ್ನಲ್ಲಿರುವ ಈ "**ಅಲ್ಲಾವುದ್ದೀನನ ಅದ್ಭುತ ದೀಪ**"ವನ್ನು ಕಡೆಗಣಿಸಿ, ಹೊರಗಿನ ಆಕರ್ಷಣೆಗೊಳಗಾಗುತ್ತಿದ್ದಾನೆ. ಅಶಾಶ್ವತವಾದ (ದೇಹವೂ ಅಶಾಶ್ವತವೇ - ಆದರೆ ದೇಹವೇ ಇಲ್ಲದಿದ್ದರೆ ಉಳಿದಿದ್ದರೇನು - ಇಲ್ಲದಿದ್ದರೇನು?) ಅಸಂಬದ್ಧವಾದ ಹಾಗೂ ಅಸಮಂಜಸವಾದ ವಿಷಯಗಳ, ವಿಚಾರಗಳ ಮತ್ತು ವಸ್ತುಗಳ ಬೆನ್ನು ಹತ್ತಿ ವಿಶೇಷವಾಗಿ ಹಣ ಸಂಪಾದನೆಯೇ ಮುಖ್ಯ ಗುರಿಯಾಗಿ, ಆ ನಾಗಾಲೋಟದ ಭರಾಟೆಯಲ್ಲಿ ದೇಹ ಸ್ವಾಸ್ಥ್ಯವನ್ನು - ದೇಹ ಪೋಷಣೆಯನ್ನು ಮಾನವ ಇಂದು ಕಡೆಗಣಿಸುತ್ತಿದ್ದಾನೆ. ಗಳಿಸಿದ್ದನ್ನು ನೆಮ್ಮದಿಯಾಗಿ ಅನುಭವಿಸುವ ಸಮಯವೇ ಇಲ್ಲದ ಕಾಲದಲ್ಲಿ ಅಂತಹಗಳಿಕೆ ಏಕೆ ಎಂಬ ಪ್ರಶ್ನೆ ನಮ್ಮನ್ನೇಕೆ ಕಾಡುತ್ತಿಲ್ಲ? ಎಂದೋ ಒಮ್ಮೆ ಎಚ್ಚರವಾಗಿ ಹಿಂತಿರುಗಿ ನೋಡುವಾಗ, ದೇಹ ದುರ್ಬಲವಾಗಿರುತ್ತದೆ - ಕೃಶವಾಗಿರುತ್ತದೆ ಮತ್ತು ನಮಗರಿವಿಲ್ಲದೆಯೇ ಹತ್ತು ಹಲವು ರೋಗಗಳ ಬೀಡಾಗಿ ಬಿಟ್ಟಿರುತ್ತದೆ.

ಈ ಹಿಂದೆ ಹೇಳಿದಂತೆ, ಈ ದೇಹ ಬ್ರಹ್ಮ ಕರುಣಿಸಿದ ಒಂದು ಶ್ರೇಷ್ಠ ವರದಾನ. ಅದನ್ನೇ ನಾವು '**ಮಾನವ ಶಕ್ತಿ**' (man-power) ಎಂದೂ ವ್ಯಾಖ್ಯಾನಿಸುತ್ತೇವೆ. ಈ man-power ನ್ನು ಸಮರ್ಥ ರೀತಿಯಲ್ಲಿ ಸರಿಯಾದ ದಿಶೆಯಲ್ಲಿ ಹಾಗೂ ಸರಿಯಾದ ಉದ್ದೇಶಕ್ಕಾಗಿ ಗರಿಷ್ಠಮಟ್ಟದಲ್ಲಿ ಬಳಸಿದಾಗ ಮಾತ್ರ, ಬ್ರಹ್ಮ ರಚಿಸಿದ ಈ ದೇಹ ಸಾರ್ಥಕ್ಯ ಕಾಣುತ್ತದೆ. ಅದೊಂದು ರೀತಿಯ '**ದೇಹ-ಸಾಕ್ಷಾತ್ಕಾರ**'ವೆಂದರೂ ತಪ್ಪಾಗಲಾರದು. ಪ್ರತಿಯೊಬ್ಬ ಮಾನವನೂ ಈ ಹಿನ್ನೆಲೆಯಲ್ಲಿ ತನ್ನ ದೇಹ ಸಾಮರ್ಥ್ಯವನ್ನು (ಇದರಲ್ಲಿ ಆತನ ಬುದ್ಧಿ ಶಕ್ತಿ - ವಿವೇಚನೆ ಕೂಡ ಸೇರಿದೆ) ನಿರ್ದಿಷ್ಟ ದಾರಿಯಲ್ಲಿ ಬಳಸಿಕೊಂಡರೆ ಬಹುಶಃ ಪ್ರಪಂಚ ಇನ್ನೂ ಹೆಚ್ಚು ಶಾಂತಿಯುತವಾಗಿ, ಆರೋಗ್ಯಕರವಾಗಿ ಹಾಗೂ ಸುಂದರವಾಗಬಲ್ಲದು. ಹಾಗಂತಲೇ ದೇಹವನ್ನು - ಅದರ ಎಲ್ಲಾ ಅಂಗಾಂಗಗಳನ್ನು ಆರೋಗ್ಯಕರವಾಗಿಡುವುದು ಎಲ್ಲರ ಪ್ರಾಥಮಿಕ ಆದ್ಯತೆ ಆಗಬೇಕು. ಅನಾರೋಗ್ಯ ಪೀಡಿತವಾದ, ದುರ್ಬಲವಾದ ಹಾಗೂ ಅನಾವಶ್ಯಕ ಚಿಂತೆ - ಯೋಚನೆಗಳ ಗೂಡಾದ ದೇಹ ಏನನ್ನೂ ಸಾಧಿಸಲಾರದು. ಅಷ್ಟೇಕೆ ಅದು ತನಗೂ ಪರರಿಗೂ

ಅಸಹನೀಯವೂ ಆದೀತು! ದೇಹ ಮತ್ತು ಮನಸ್ಸು ಪ್ರಫುಲ್ಲ ವಾದಾಗ ('a sound mind in a sound body'- ಎಂಬಂತೆ), ಆರೋಗ್ಯಕರವಾಗಿದ್ದಾಗ ಹಾಗೂ ಸ್ಫೂರ್ತಿಯ ಸೆಲೆ ಯಾದಾಗ ನಮ್ಮ ಉಳಿದೆಲ್ಲಾ ಚಟುವಟಿಕೆಗಳೂ, ಉದ್ದೇಶಗಳೂ ಹಾಗೂ ಆಶಯಗಳೂ ತಂತಾನೇ ಸಾಕಾರವಾದೀತು.

ಆದರೆ ಇಂದಿನ ದುರಂತ ನೋಡಿ. ಈ man-powerನ್ನು ಕಡೆಗಣಿಸಿ ನಾವಿಂದು horse-power (ವಿವಿಧ ಕೃತಕ ಯಂತ್ರಗಳ)ನ ದಾಸರಾಗುತ್ತಿದ್ದೇವೆ! ನಾಗರೀಕತೆ, ಅಭಿವೃದ್ಧಿ ಸೌಲಭ್ಯಗಳು ಮುಂತಾದ ಸೋಗಿನಡಿಯಲ್ಲಿ ನಮಗರಿವಿಲ್ಲ ದೆಯೇ ಹಾಗೂ ನಮ್ಮ ಅವಶ್ಯಕತೆಗಳನ್ನು ಮೀರಿ, ನಾವು ಯಂತ್ರಗಳ ಗುಲಾಮರಾಗಿದ್ದೇವೆ. ಇಂದು ಮನೆಯಿಂದ ಅರ್ಧ ಫರ್ಲಾಂಗು ದೂರದಿಂದ ಹಾಲು ತರಲು ಕೂಡ ಸ್ಕೂಟರ್ ಬೇಕು. ಡೈನಿಂಗ್ ಟೇಬಲ್ ಇಲ್ಲದೇ ಊಟವಾಗದು (ಏಕೆಂದರೆ ನೆಲದಲ್ಲಿ ಕೂರಲಿಕ್ಕೆ ಆಗದು!). ಬಟ್ಟೆ ಒಗೆಯಲು ವಾಷಿಂಗ್ ಮೆಷಿನ್ ಬೇಕೇ ಬೇಕು. ಆರ್ಥಿಕ ಅನುಕೂಲವಿಲ್ಲ ದಿದ್ದರೂ ಸಾಲ ಸೋಲ ಮಾಡಿ ಈ ಸಾಮಾಜಿಕ ಪ್ರತಿಷ್ಠೆಗಳ (ಹಾಗೆಂದು ನಾವೆಂದುಕೊಂಡಿದ್ದೇವೆ) ಪ್ರತೀಕವಾದ ಅನವಶ್ಯಕ ಯಂತ್ರಗಳನ್ನು ಹೊಂದುವ ಪ್ರವೃತ್ತಿ ಎಲ್ಲ ಕಡೆ. ಹಣ ಸಂಪಾದನೆಯ ಹುಚ್ಚು ಕುದುರೆ ಓಟದಲ್ಲಿ ನೆಮ್ಮದಿ ಯಾಗಿ ಊಟ - ತಿಂಡಿ ಮಾಡಲೂ, ಸ್ವಂತ ಹೆಂಡತಿ - ಮಕ್ಕಳೊಡನೆ ಸಂತಸವಾಗಿ ವ್ಯವಹರಿಸಲೂ ಸಮಯವಿಲ್ಲದ ಇಂದಿನ ಜೀವನ ಶೈಲಿ ಅರ್ಥಹೀನವೆಂದೇ ಹೇಳಬೇಕು. ಈ ರೀತಿ ಅನವಶ್ಯಕ ಯಂತ್ರಗಳ ಹಾಗೂ ದುರಾಸೆಯ ಗುಲಾಮನಾಗುತ್ತಿರುವ ಮಾನವ, ತನಗರಿವಿಲ್ಲದೆಯೇ ಬ್ರಹ್ಮ ಕರುಣಿಸಿದ ಈ ದೇಹವೆಂಬ ಯಂತ್ರಕ್ಕೆ ತುಕ್ಕು ಹಿಡಿಸುತ್ತಿದ್ದಾನೆ, ಇನ್ನೂ ಜಡಗೊಳಿಸುತ್ತಿದ್ದಾನೆ. ಬಳಸದ ಯಾವುದೇ ವಸ್ತು ಕ್ಷಯಿಸುವುದು ಪ್ರಕೃತಿ ನಿಯಮ. ಅದರಿಂದ ನಮ್ಮ ಈ ದೇಹವೂ ಹೊರತಲ್ಲ.

ಈ ರೀತಿ ನಿರ್ಲಕ್ಷ್ಯಗೊಳಗಾದ ದೇಹ ಸ್ವಾಭಾವಿಕವಾಗಿಯೇ ರೋಗಗ್ರಸ್ಥವಾಗುತ್ತದೆ. ಇತ್ತೀಚೆಗೆ ಹೆಚ್ಚು ಹೆಚ್ಚು ಕಂಡು ಬರುತ್ತಿರುವ ಹೃದಯ ರೋಗ, ಡಯಾಬಿಟೀಸ್, ರಕ್ತ ದೊತ್ತಡ, ಮಾನಸಿಕ ಕ್ಲೇಶ ಮುಂತಾದ ರೋಗಗಳ ಮೂಲ ಕಾರಣ ನಮ್ಮ ದೇಹ ಮತ್ತು ಮನಸ್ಸಿನ ಆರೋಗ್ಯದ ದಿವ್ಯ ನಿರ್ಲಕ್ಷ್ಯವೇ ಆಗಿದೆ. ನಿಯಮಿತವಲ್ಲದ, ತಂಗಳು ಪೆಟ್ಟಿಗೆಯ ಹಾಗೂ ಕೃತಕ ಆಹಾರ ಸೇವನೆ, ಧೂಮಪಾನ, ಮದ್ಯಪಾನ, ಇತ್ತೀಚೆಗೆ ಸಾರ್ವತ್ರಿಕವಾಗುತ್ತಿರುವ '**ಗುಟಖಾ**' ಸಂಸ್ಕೃತಿ, ಅವೇಳೆಯ ಕಾರ್ಯ ನಿರ್ವಹಣೆ, ಸದಾ ದುರಾಚಾರ-ದುರಾ ಲೋಚನೆ, ತನ್ನ ಹಿತಚಿಂತನೆಗಿಂತ ಪರರ ಏಳಿಗೆಯನ್ನು ಕಂಡು ಕರುಬುವುದು, ಗೊತ್ತು ಗುರಿಯಿಲ್ಲದ ಜೀವನ ಶೈಲಿ - ಎಲ್ಲವೂ ನಮ್ಮ ದೇಹಾರೋಗ್ಯದ ಮೇಲೆ ಸಾಕಷ್ಟು ನಕಾರಾತ್ಮಕ ಪರಿಣಾಮ ಬೀರಬಲ್ಲವು. ಓಡಾಡಲು ಕೊಟ್ಟಿರುವ ಕಾಲುಗಳನ್ನು ಕೆಲಸ ಮಾಡಲು ಕೊಟ್ಟಿರುವ ಕೈಗಳನ್ನು ನಾವು ಇಂದು under-utilise ಮಾಡುತ್ತಿದ್ದೇವೆ. ಕೈ ಕಾಲುಗಳ ಚಟುವಟಿಕೆ ಕಡಿಮೆಯಾದಂತೆ, ಉಳಿದ ಅಂಗಗಳ - ಅಂದರೆ ಹೃದಯ, ರಕ್ತ ಚಲನೆ, ಮುಂತಾದವುಗಳ ಕಾರ್ಯ ಕ್ಷಮತೆಯೂ ಕುಂಠಿತವಾಗುತ್ತದೆ. ಪರಿಣಾಮವಾಗಿ ಬುದ್ಧಿ ಶಕ್ತಿಯ ಸಾಮರ್ಥ್ಯವೂ ಪ್ರಭಾವಿತವಾಗುತ್ತದೆ. ಒಟ್ಟಿನಲ್ಲಿ ಹೇಳ ಬೇಕೆಂದರೆ, ಇಂತಹ ಒಂದು ನಿರ್ಲಕ್ಷ್ಯದ ಪ್ರವೃತ್ತಿಯಿಂದ ಮಾನವ ದೇಹ ಜರ್ಝರಿತವಾಗುತ್ತದೆ. ಕ್ರಮೇಣ ಅವಧಿಗೆ ಸಾಕಷ್ಟು ಮುನ್ನವೇ ಅನುಪಯುಕ್ತವಾಗುತ್ತದೆ - ತನಗೂ ಪರರಿಗೂ ಕೂಡ.

ಇಂತಹ ರೋಗಗಳು ಬಂದಾಗ ವೈದ್ಯರು ಕೊಡುವ ಮೊದಲ ಪ್ರಿಸ್ಕ್ರಿಪ್ಷನ್ ವಾಕಿಂಗ್, ಹಳ್ಳಿಯಿಂದ ದಿಲ್ಲಿಯವರೆಗೂ ಇಂದು ಬೀದಿ ಬೀದಿಗಳಲ್ಲಿ ಬೆಳಗ್ಗೆ ಕಾಣುವ ಮೊದಲ ನೋಟವೇ ಈ '**ವಾಕ್‌ಮನ್**'ಗಳ ಓಡಾಟದ ಭರಾಟೆ. ಸೂಕ್ಷ್ಮವಾಗಿ ಗಮನಿಸಿ ದಾಗ ಅದೊಂದು ಕುತೂಹಲಕರ ಮತ್ತು ಆಕರ್ಷಕ ನೋಟ. ಸಿಹಿನಿದ್ದೆಯನ್ನು ಬಿಟ್ಟು ಅನಿವಾರ್ಯವಾಗಿ ಈ ವಾಕಿಂಗ್‌ನ್ನು ಮುಖ ಕಿವುಚಿ ಪಾಲಿಸುತ್ತಿರುವ ಕೆಲಮಂದಿ, ದುಮ್ಮಾನದಿಂದ ಕಾಲೆಳೆದುಕೊಂಡು ಸಾಗುತ್ತಿರುವ ಕೆಲಮಂದಿ, ವಾಕಿಂಗ್ ಪ್ರಿಸ್ಕ್ರಿಪ್ಷನ್‌ನ್ನು ಹೊಸದಾಗಿ ಪಡೆದು, ನವೀನ ವಾಕಿಂಗ್ ದಿರಿಸಿನೊಂದಿಗೆ ವೇಗವಾಗಿ ಸಾಗುತ್ತಾ ಒಂದೇ ದಿನದಲ್ಲಿ ದೇಹವನ್ನು '**ಚುರುಕು**'ಗೊಳಿಸುವ (ವ್ಯರ್ಥ) ಯತ್ನದಲ್ಲಿರುವ ಕೆಲಮಂದಿ, "**ತೂ ತೂ - ಮೈ ಮೈ**" ವಿಚಾರಗಳನ್ನು ಗಹನವಾಗಿ ಚರ್ಚಿಸುತ್ತಾ ಸಾಗುವ ವೃದ್ಧರ ಪರಿ - ಹೀಗೆ ಇದೊಂದು ರೀತಿಯ ಆಧುನಿಕ ರೀತಿಯ "**ಪ್ರಭಾತ್ ಫೇರಿ**". ವ್ಯತ್ಯಾಸವೆಂದರೆ ಇಲ್ಲಿ ಘೋಷಣೆಗಳ - ಜೈಕಾರಗಳ ಬದಲಾಗಿ ಬರೀ ಗೊಣಗಾಟ! ಆದರೆ ಈ ಎಲ್ಲಾ ಸಂಕಟಗಳೂ ಸ್ವಯಂ - ಕೃತ ದಿವ್ಯ ನಿರ್ಲಕ್ಷ್ಯದ ಪರಿಣಾಮವೇ ಅಲ್ಲವೇ?

ಆದುದರಿಂದ ನಾವೆಲ್ಲರೂ ಇಂದಿನಿಂದಲೇ ನಮ್ಮ ದೇಹ ಸ್ವಾಸ್ಥ್ಯದತ್ತ ಗಮನ ನೀಡೋಣ. ದೇಹ ಆರೋಗ್ಯವಾಗಿದ್ದರೆ ಅದಕ್ಕಿಂತ ಹೆಚ್ಚೇನು ಬೇಕು - ಅದಕ್ಕೆ '**ಆರೋಗ್ಯವೇ ಭಾಗ್ಯ**' (health is wealth) ಎನ್ನುವುದು. ಸೃಷ್ಟಿಕರ್ತನಾದ ಬ್ರಹ್ಮ ರಚಿಸಿ ಕಳಿಸಿದ ಈ ದೇಹದ ಪ್ರತಿಯೊಂದು ಅಂಗಕ್ಕೂ ತನ್ನದೇ ಆದ ನಿರ್ದಿಷ್ಟ ಕಾರ್ಯವಿದೆ. ಅದು ಮೆದುಳಿರಬಹುದು - ಕಣ್ಣಿರಬಹುದು - ಕಿವಿಯಿರಬಹುದು - ಕೈ ಕಾಲಿರಬಹುದು. ನಮ್ಮ ದೇಹ '**ಫಿಟ್**' ಇರಬೇಕಾದರೆ ಈ ಎಲ್ಲಾ ಅಂಗಗಳು

ತಮಗೆ ನಿಗದಿಪಡಿಸಿದ ಕಾರ್ಯಗಳನ್ನು ನಿರಂತರವಾಗಿ, ಪರಿಣಾಮಕಾರಿಯಾಗಿ ಹಾಗೂ ಸಮನ್ವಿತವಾಗಿ ನಿರ್ವಹಿಸುವಂತೆ 'programme' ಮಾಡುವುದು ನಮ್ಮ ಕರ್ತವ್ಯ. ಇಲ್ಲಿ ದೇಹ ಎಂದರೆ ಮನಸ್ಸೂ ಕೂಡ ಸೇರಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಮನಸ್ಸನ್ನು ಹದ್ದು ಬಸ್ತಿನಲ್ಲಿಡದಿದ್ದರೆ, ಉತ್ತಮ ವಿಚಾರಗಳತ್ತ, ಉತ್ತಮ ಕಾರ್ಯಗಳತ್ತ ಹರಿಬಿಡದಿದ್ದರೆ - ಅದೂ ಕೂಡ ದೇಹದಂತೆ ಕಲುಷಿತವಾಗುತ್ತದೆ. ಕುಲುಷಿತವಾದ ಮನಸ್ಸಿನ ಪ್ರಭಾವದಿಂದ ದೇಹ ಅನುಚಿತವಾಗಿಯೇ ಸ್ಪಂದಿಸುತ್ತದೆ. ಕಲುಷಿತ ಮನಸ್ಸು - ಕಲುಷಿತ ದೇಹ - ಸಮಾಜಕ್ಕೆ ಮತ್ತು ಆ ವ್ಯಕ್ತಿಗೇ ಕಂಟಕವಾಗುತ್ತದೆ.

ಸಾರಾಂಶವೆಂದರೆ, ದೇಹವೆಂಬ ಯಂತ್ರಕ್ಕೆ ಸಾಕಷ್ಟು ಕೆಲಸ ಕೊಡಿ - ಸದಾ ಸುಸ್ಥಿತಿಯಲ್ಲಿಡಿ - ಮನಸ್ಸನ್ನು ಸದಾ ಸದ್ವಿಚಾರಗಳಲ್ಲಿ ತೊಡಗಿಸಿ - ಪರಿಣಾಮ ನಿಮ್ಮನ್ನು ನೀವೇ ಪ್ರೀತಿಸುತ್ತೀರಿ ಹಾಗೂ ನಿಮ್ಮ ದೇಹ ನಿಮ್ಮ ಅಭಿಮಾನದ ಸಂಕೇತವೂ ಆಗುತ್ತದೆ. ಅದೇ ನಿಜವಾದ '**ದೇಹ - ಸಾಕ್ಷಾತ್ಕಾರ**'. ಇದನ್ನು ನೀವು ಸಾಧಿಸಿದ್ದಾದಲ್ಲಿ, ಅತೀ ಕಷ್ಟದ ಸಾಧನೆಯಿಂದ ಗಳಿಸಬಹುದಾದ '**ಆತ್ಮ-ಸಾಕ್ಷಾತ್ಕಾರ**'ವೂ ಕೂಡ ಸುಲಭವಾಗಿ ನಿಮ್ಮದಾಗಬಲ್ಲದು. ಸದೃಢ ಶರೀರ - ಸದೃಢ ಮನಸ್ಸು ತನ್ಮೂಲಕ ಸದೃಢ ಮತ್ತು ಆರೋಗ್ಯಕರ ಸಮಾಜ ನಮ್ಮ ಗುರಿಯಾಗಲಿ.

We have listed below 108 Upanishads as per the list contained in the Muktikopanishad . We have arranged them in four categories according to the particular Veda to which each of them belong.

RIGVEDA (10)
Aitareya
Atmabodha
Kaushitaki
Mudgala
Nirvana
Nadabindu
Akshamaya
Tripura
Bahvruka
Saubhagyalakshmi

YAJURVEDA (50)
Katha
Taittiriya
Isavasya
Brihadaranyaka
Akshi
Ekakshara
Garbha
Prnagnihotra
Svetasvatara
Sariraka
Sukarahasya
Skanda
Sarvasara
Adhyatma
Niralamba
Paingala
Mantrika
Muktika
Subala
Avadhuta
Katharudra
Brahma
Jabala
Turiyatita
Paramahamsa
Bhikshuka
Yajnavalkya
Satyayani
Amrtanada
Amrtabindu
Kshurika
Tejobindu
Dhyanabindu
Brahmavidya
YogakundalinI
Yogatattva
Yogasikha
Varaha
Advayataraka
Trisikhibrahmana
Mandalabrahmana
Hamsa
Kalisantaraaa
Narayana
Tarasara
Kalagnirudra
Dakshinamurti
Pancabrahma
Rudrahrdaya
SarasvatIrahasya

SAMAVEDA (16)
Kena
Chandogya
Mahat
Maitrayani
Vajrasuci
Savitri
Aruneya
Kundika
Maitreyi
Samnyasa
Jabaladarsana
Yogacudaman
Avyakta
Vasudevai
Jabali
Rudrakshajabala

ATHARVAVEDA (32)
Prasna
Mandukya
Mundaka
Atma
Surya
Narada-Parivrajakas
Parabrahma
Paramahamsa-Parivrajakas
Pasupatha-Brahma
Mahavakya
Sandilya
Krishna
Garuda
Gopalatapani
Tripadavibhuti-Mahnarayana
Dattatreya
Kaivalya
NrsimhatapanI
Ramatapani
Ramarahasya
HayagrIva
Atharvasikha
Atharvasira
Ganapati
Brhajjabala
Bhasmajabala
Sarabha
Annapurna
TripuratapanI
Devi
Bhavana
Sita

"ಋಗ್ವೇದದಲ್ಲಿ ಋಷಿಗಳು ಸ್ತುತಿಸಿದಂತೆ ...."

ಒಂದು ವಿಷಯ ಪ್ರಸ್ತಾವನೆ - ಪರಿಚಯ

ವೇದಶ್ರೀ ಸೂರ್ಯನಾರಾಯಣ
ನಾಗರಭಾವಿ ವೃತ್ತ, ಬೆಂಗಳೂರು

ಋಗ್ವೇದ ಸಂಹಿತೆಯಲ್ಲಿ ಸ್ತುತಿತರಾಗಿರುವ ದೇವತೆಗಳನ್ನು ಕನ್ನಡ ಭಾಷೆಯಲ್ಲಿ ಪರಿಚಯ ಮಾಡಿಸುವ ಪ್ರಯತ್ನ ಇದು. '**ವೇದ**' - ಒಂದು '**ಋಷಿವಾಣಿ**'ಗಳ ಅಗಾಧವಾದ ಸಾಗರ, ಸಹಸ್ರ ಸಹಸ್ರ ಋಷಿಗಳಿಂದ, ಅನಾದಿಕಾಲದಿಂದ, ಬೆಳೆದುಬಂದ '**ವಿದ್ಯಾಸಾಗರ**'. ಮಾನವರ ನೆನಪಿನ ಶಕ್ತಿಯ ಮೇಲೇ ವೇದಗಳು ಉಳಿದುಕೊಂಡಿವೆ.

ಮಾನವನ ನೆನಪಿನ ಶಕ್ತಿಗೂ ಮಿತಿ ಇದೆ. ಅದೂ ಕುಂದುತ್ತಾ ಹೋಗುತ್ತಿದೆ. ಹೀಗಾಗಿ ಹಿಂದಿನದನ್ನು ಮರೆಯುವುದು, ಇಂದಿನದನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು - ಸಹಜವೇ. ವೇದವಿದ್ಯೆಯು - ಹಿಂದಿನದು ಮರೆಯಾಗುತ್ತಿರುವುದನ್ನು ಗಮನಿಸಿದ ದ್ವಾಪರಯುಗದಲ್ಲಿದ್ದ ಕೃಷ್ಣದ್ವೈಪಾಯನರು, ಆಗ, ಅವರಿಗೆ ಲಭ್ಯವಾದಷ್ಟು 'ವೇದವಿದ್ಯೆ' ಯನ್ನು ಉಳಿಸಿದರು.

ದೇವತೆಗಳ ಪ್ರಾರ್ಥನಾ ವಿಭಾಗದ ಮಂತ್ರಗಳನ್ನು '**ಋಗ್ವೇದ**' ಎಂದೂ ಯಜ್ಞಯಾಗಾದಿಗಳಲ್ಲಿ ಪ್ರಯೋಗಿತವಾದ ಮಂತ್ರಗಳನ್ನು '**ಯಜುರ್ವೇದ**' ಎಂದೂ, ಸಂಗೀತಗಾನಗಳಿಗೆ ಅಳವಡಿಸಬಹುದಾದ ಮಂತ್ರಗಳನ್ನು '**ಸಾಮವೇದ**' ಎಂದೂ, ಉಳಿದೆಲ್ಲ ವಿಭಾಗ ಗಳನ್ನು ಸೇರಿಸಿ '**ಅಥರ್ವಣವೇದ**' ಎಂದೂ ವಿಂಗಡಿಸಿದರು. ಕೃಷ್ಣದ್ವೈಪಾಯನರು ಈ ವೇದಗಳನ್ನು ತಮ್ಮ ಶಿಷ್ಯರಿಗೆ ಬೋಧಿಸಿ '**ವೇದ**' ರಕ್ಷಣೋಪಾಯಗಳನ್ನು ಮಾಡಿದರು. ಈ ಕಾರ್ಯಕ್ಕಾಗಿಯೇ ಅವರು 'ವೇದವ್ಯಾಸ' ಎಂದು ಹೆಸರಾದರು.

ಋಗ್ವೇದ ಸಂಹಿತೆಯಲ್ಲಿ 10552 ಋಕ್‌ಗಳೂ - ಮಂತ್ರಗಳೂ ಇವೆ. ಈ ಮಂತ್ರಗಳು, ನೂರಾರು ಋಷಿಗಳಿಂದ, ನೂರಾರು ದೇವತೆಗಳನ್ನು ಸ್ತುತಿಸಿದಂತಹವು.

ಋಗ್ವೇದದಲ್ಲಿ ಋಷಿಗಳು ಸ್ತುತಿಸಿದಂತೆ - ಗಣೇಶ (ಗಣೇಶ ಸೂಕ್ತ)

(ಋಗ್ವೇದ ಸಂಹಿತೆ ಮಂಡಲ 8 ಸೂಕ್ತ 81 ಋಕ್ 1-9, ಮಂಡಲ 2 ಸೂಕ್ತ 23 ಋಕ್ 1,
ಮಂಡಲ 10 ಸೂಕ್ತ 112 ಋಕ್ 9-10, ಹೀಗೆ 12 ಋಕ್‌ಗಳು ಗಣೇಶಸೂಕ್ತ ಎನಿಸಿದೆ)
(ಇಷ್ಟಾರ್ಥಪೂರ್ತಿಕೆ ಪ್ರಾರ್ಥನೆಗೆ ಮತ್ತು ಅಭಿಷೇಕದಲ್ಲಿ ಪ್ರಾರ್ಥನಾ ಸೂಕ್ತ)

ಕುಸೀದ ಕಾಣ್ವಋಷಿಗಳು ಗೃತ್ಸಮದರು, ನಭಃ ಪ್ರಭೋದನೋ ವೈರೂಪರುಗಳು, ಇಂದ್ರ ಮತ್ತು ಬೃಹಣಸ್ಪತಿ ರೂಪಿ '**ಗಣಪತಿ**' ಯನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಬೃಹಣಸ್ಪತಿಯು ಪ್ರಸಿದ್ಧಕರ್ಮಗಳಿಗೆ ಪ್ರಭು, ದೇವ ಸಂಬಂಧಿ, ಸ್ವರ್ಗದೊಡೆಯ, ಅಪರಿಮಿತ ಅನ್ನವಂತ, ಮಂತ್ರದೊಡೆಯ, ಶ್ಲಾಘ್ಯರ ನಡುವೆ ಪ್ರಕಾಶಿತನಾಗಿರುವವ.

ಬೃಹಣಸ್ಪತಿಯು ಕ್ರಾಂತಿದರ್ಶಿ, ಕವಿಗಳಲ್ಲೇ ಉತ್ತಮ ಕವಿ, ಮಹತ್ತಾದ ಆನೆಯಂತಹವ, ಕಳೆದು ಹೋದದ್ದನ್ನು ಕಾಣುವಂತಹವನೂ,ಭೂತ, ಭವಿಷ್ಯತ್, ವರ್ತಮಾನಗಳನ್ನು ತಿಳಿದವನೂ ಆಗಿದ್ದಾನೆ. ಯಜಮಾನ ಋಷಿಯು ಕಾರ್ಯನಿಮಿತ್ತವಾಗಿ ಬೃಹಣಸ್ಪತಿಯನ್ನು ಆಹ್ವಾನಿಸುತ್ತಾನೆ.

ಬೃಹಣಸ್ಪತಿಯ ಮಿತ್ರ - ಇಂದ್ರ, ಇಂದ್ರನು ಮೇಧಾವಿ, ಪ್ರಾಜ್ಞರ ನಡುವೆ ಪ್ರಾಜ್ಞವಿಸ್ತೃತ ಪ್ರಮಾಣದವ, ಸ್ವಯಂ ಪ್ರಕಾಶಕ, ಧನಾಧಿಪತಿ, ಧನಧಾತೃ, ಅನೇಕ ವಿಧಕರ್ಮಿ.

ಮರುದ್ಗಣಗಳ ಒಡೆಯ ಇಂದ್ರ ರೂಪಿಯೇ ಗಣಪತಿ. ಸತ್ತ್ವಾತ್ಮಕ ಶಕ್ತಿಯುತ ಮಹಾಪರಾಕ್ರಮಿ. ಯುದ್ಧನಿಪುಣ, ಶತ್ರುಗಳನ್ನು ಸೆದೆಬಡಿಯುವವ. ಶಿಷ್ಟರಕ್ಷಣೆಯೇ ಆತನ ಕಾಯಕ.

ಇಂದ್ರನಿಲ್ಲದೆ ಯಾವಕಾರ್ಯವೂ ನಡೆಯಲಾರದು. ಏಕೆಂದರೆ ಅವನು ಅನ್ನಾಧಿಪತಿ. ಭಯಂಕರ ವೃಷಭವನ್ನು ತಡೆಯುವುದು ಹೇಗೆ ಅಸಾಧ್ಯವೋ, ಹಾಗೆಯೇ ದಾನ ನೀಡಲು ಅಪೇಕ್ಷಿಯಾದ ಇಂದ್ರನನ್ನು ತಡೆಯಲು ದೇವ ಮಾನವರಾರಿಗೂ ಸಾಧ್ಯವಿಲ್ಲ!

ಗಣಪತಿಯು, ದಾನರಹಿತರ ಹಾಗೂ ಶತ್ರುಗಳ ಧನವನ್ನು ಸ್ವಶಕ್ತಿಯಿಂದ ಅಪಹರಿಸಿ, ಗ್ರಹಣಯೋಗ್ಯರಿಗೆ, ತಾನು ಎಡಗೈಯಲ್ಲಿ ಹಿಡಿದಿದ್ದನ್ನು ಬಲಗೈಲಿ ದಾನಮಾಡುವವ. ಅನೇಕ ಕಾಮನಾಯುತರೂ ಮೇಧಾವಿಗಳೂ ದಾನಿಯಾದ ಇಂದ್ರನನ್ನು ಪ್ರಶಂಸಿಸಿ ಸ್ತುತಿಸುತ್ತಾರೆ. ಸಮೀಪದಿಂದ ಅಥವಾ ದೂರದಿಂದ ಸ್ತುತನಾದ ಇಂದ್ರನು, ಯಜಮಾನನ ಸಾಮರೂಪ ಸ್ತೋತ್ರಗಳನ್ನು ನಾನಾರೂಪದಿಂದ ಗೌರವಿಸಲಿ, ಕೇಳಲಿ, ತಾನೂ ಗಾನ ಮಾಡಲಿ ಯಜಮಾನನ ಇಷ್ಟಾರ್ಥಗಳನ್ನು ಪೂರ್ತೈಸಲಿ. ಬೃಹಣಸ್ಪತಿಯು ಆಹ್ಲಾದಕರ ಅನ್ನಗಳೊಡನೆ, ಕ್ಷಿಪ್ರವಾಗಿ ಯಜ್ಞಗೃಹ ಪ್ರವೇಶಿಸಲಿ. ಗಣಪತಿಯ

ಯಜಮಾನನಿಗೆ ಧನವನ್ನು ಕೊಡಲಿ, ತೇಜೋಯುಕ್ತನನ್ನಾಗಿ ಮಾಡಲಿ. ಧನದಿಂದ ಯಜಮಾನನು ವಂಚಿತನಾಗದಿರಲಿ, ಯಾಚಿಸಿದಾಗಲೆಲ್ಲಾ ಧನಕೊಡಲಿ.

ಯಜಮಾನನಿಗೆ, ಸಂಪತ್ತಿನಲ್ಲಿ ಭಾಗವಿಲ್ಲದಿರುವ ಸ್ಥಾನದಲ್ಲಿಯೂ, ಆತನನ್ನು ಭಾಗಿಯಾಗಿರುವಂತೆ ಗಣೇಶನು ಮಾಡಲಿ. ಯಜಮಾನನಿಗೆ ಧನಮದ ಉಂಟಾಗದಂತೆ, ಧನಮದದಿಂದ ಯಾರೂ ಯಜಮಾನನನ್ನು ಹಿಂಸಿಸದಂತೆ ಗಣಪತಿಯು ರಕ್ಷಿಸಲಿ.

ಋಗ್ವೇದದಲ್ಲಿ ಋಷಿಗಳು ಸ್ತುತಿಸಿದಂತೆ - ವಿಷ್ಣು

(ಋಗ್ವೇದ ಸಂಹಿತೆ ಮಂಡಲ 1 ಸೂಕ್ತ 22 ಋಕ್ 16-22 ಸೂಕ್ತ 54 ಋಕ್ 1-6, ಸೂಕ್ತ 155 ಋಕ್ 1-6, ಸೂಕ್ತ 156 ಋಕ್ 1-6, ಮಂಡಲ 6 ಸೂಕ್ತ 69 ಋಕ್ 1-8, ಮಂಡಲ 7 ಸೂಕ್ತ 99 ಋಕ್ 1-7, ಸೂಕ್ತ 100 ಋಕ್ 1-7)

(ಅಭಿಷೇಕ ಮತ್ತು ಪ್ರಾರ್ಥನೆಗೆ)

ಋಷಿಗಳಾದ ಮೇಧಾತಿಥಿಃ ಕಾಣ್ವರು, ದೀರ್ಘತಮಾ ಔಚಿತ್ಯರು, ಭಾರದ್ವಾಜೋ ಬಾರ್ಹಸ್ಪತ್ಯರು, ವಸಿಷ್ಠರು - ಇವರುಗಳು, ಗಾಯತ್ರೀ ತ್ರಿಷ್ಟುಪ್, ಜಗತೀ ಛಂದಸ್ಸಿನ ಋಕ್‌ಗಳಲ್ಲಿ ವಿಷ್ಣುದೇವನನ್ನು ಸ್ತುತಿಸಿದ್ದಾರೆ.

ಪರಲೋಕದ ಉತ್ಕೃಷ್ಟತೆಯನ್ನು ಅಳೆಯಲು ಸಾಧ್ಯವಿಲ್ಲ! ಇದನ್ನು ಅರಿತಿರುವವನು '**ವಿಷ್ಣು**' ಒಬ್ಬನೇ! ವಿಷ್ಣುವೇ ದ್ಯುಲೋಕವನ್ನೂ ಪೃಥ್ವಿಯ ಪೂರ್ವದಿಕ್ಕನ್ನೂ ಹಿಡಿದಿರುವವನು. ವಿಷ್ಣುವಿನ - ಭೂಲೋಕ ಮತ್ತು ಅಂತರಿಕ್ಷಗಳನ್ನು ಅಳೆಯುವ ಪಾದಗಳನ್ನು ಸ್ತುತಿಮಾಡಿ ತಿಳಿಯಬಹುದು. ಆದರೆ ದ್ಯುಲೋಕವನ್ನು ಅಳೆಯುವ ಪಾದವನ್ನು ತಿಳಿಯಲು ಸಾಧ್ಯವಿಲ್ಲ! ಸಕಲ ಪ್ರದೇಶ ಸಂಚಾರಿ ವಾಯುವಿಗೂ ಸಹಾ ತಿಳಿಯಲು ಸಾಧ್ಯವಿಲ್ಲ! ವಿಷ್ಣುವು ಯಾರ ಸಾಹಾಯವೂ ಇಲ್ಲದೇ ತನ್ನ ಮೂರು ಪಾದಗಳಿಂದಲೇ ಅದ್ವಿತೀಯವಾಗಿ, ವಿಸ್ತಾರವಾದ - ಪೃಥಿವ್ಯಾದಿ ಮೂರು ಲೋಕಗಳನ್ನು ನಿರ್ಮಿಸಿದ್ದಾನೆ. ಅನೇಕ ಕಾಂತಿಯುತವಾದ ಭೂಮಿಯನ್ನು ವಿಷ್ಣುವು ಮೂರು ಪ್ರಕಾರಗಳಲ್ಲಿಯೂ ತನ್ನ ಮಹಾತ್ಮ್ಯದಿಂದಲೇ ವ್ಯಾಪಿಸಿದ್ದಾನೆ.

ವಿಷ್ಣುವಿನ ಮೂರು ಪಾದ ಪ್ರಕ್ಷೇಪಗಳಲ್ಲಿಯೇ, ಸಮಸ್ತ ಭೂತ ಜಾತಗಳೂ ಅಡಗಿವೆ. ಅಸುರರಿಂದ ಅಪಹೃತವಾದ ಭೂಮಿಯನ್ನು, ತನ್ನನ್ನು ಪೂಜಿಸುವ ಭಕ್ತ ಯಜಮಾನರ ನಿವಾಸಕ್ಕಾಗಿ ವಿಷ್ಣುವು ಆಕ್ರಮಿಸಿದ್ದಾನೆ.

ವಿಷ್ಣುವಿನ ಪಾದಪ್ರಕ್ಷೇಪವು, ನಾಶರಹಿತವಾದ ಅಮೃತ ತುಂಬಿದ ಸುಖಸ್ಥಾನಗಳು. ವಿಷ್ಣುವಿನ ಹರಡಿದ ಪಾದರಶ್ಮಿಗಳು, ಆಶ್ರಿತರನ್ನು ಅನ್ನದಾನದಿಂದ ಸಂತೋಷ ಪಡಿಸುವಂತಹವುಗಳು. ವಿಷ್ಣುವು, ಮಿತ್ರನಾದ ಇಂದ್ರನೊಡನೆ ಸೇರಿ, ದ್ಯಾವಾಪೃಥ್ವಿಗಳನ್ನು ಪ್ರತ್ಯೇಕವಾಗಿ ಎತ್ತಿ ಹಿಡಿದಿದ್ದಾನೆ. ಪೃಥ್ವಿಯನ್ನು ಪರ್ವತಗಳಿಂದ ಸುತ್ತುವರಿಯುವಂತೆ ಮಾಡಿದ್ದಾನೆ. ವಿಷ್ಣುವಿನಿಂದಲೇ, ಪುರುಷಶಕ್ತಿಯನ್ನು ವೃದ್ಧಿಸುವ ಸೋಮವು '**ಪುತ್ರಪೌತ್ರ**' ಎಂಬ ಅನುಗ್ರಹ ಪಡೆದದ್ದು. ಪುರುಷಶಕ್ತಿಯು, ಇಂದ್ರನದಾಗಿದ್ದು, ಆದಿತ್ಯಮಂಡಲದಲ್ಲಿ ಸ್ಥಾಪಿತವಾಗಿದೆ. '**ಈ ಪುರುಷಶಕ್ತಿಯನ್ನು ಸಂತಾನ ಭೋಗಗಳನ್ನೂ ಪ್ರಾಣಿಗಳೂ ಅನುಭವಿಸಲಿ**' ಎಂದು ಈ ಶಕ್ತಿಯನ್ನು ದ್ಯಾವಾಪೃಥ್ವಿಗಳಲ್ಲಿ ಸೇರಿಸಿದ್ದಾನೆ.

ವಿಷ್ಣುವು, ಸ್ವರ್ಗೋತ್ಪಾದಕಶಕ್ತಿಯುತ, ಸಮುದ್ರದಂತೆ ಗಂಭೀರ ನಿಯಮವಂತ, ಎತ್ತರದಲ್ಲಿರುವ ಮೇಘಗಳಿಂದ ಮಳೆಗರಿಸುವವ, ವಿಶಾಲ ಅಂತರಿಕ್ಷ ನಿರ್ಮಿಸಿ, ಅದನ್ನು ಇನ್ನೂ ಹೆಚ್ಚು ವಿಸ್ತರಿಸಿದವ ವಿಷ್ಣುವು, ಸಮಸ್ತ ಜಗದ್ರಕ್ಷಕ. ಉತ್ಕೃಷ್ಟವಾದ ವಿಶಾಲವಾದ ಸಕಲ ಲೋಕಗಳನ್ನೂ 'ಜೀವನಕ್ಕೆ ಯೋಗ್ಯ'ವಾಗುವಂತೆ ಸ್ವಶಕ್ತಿಯಿಂದಲೇ ಮಾಡಿ ಪ್ರಕಟಿಸಿದ್ದಾನೆ. ವಿಷ್ಣುವು, ದೇವತಿರ್ಯಗಾದಿ ನಾನಾ ರೂಪಗಳನ್ನು ವಿಭಾಗಿಸಿ, ತನ್ನ ಸ್ವರೂಪವನ್ನು ಪರಿಣಾಮಗೊಳಿಸಿದ್ದಾನೆ.

ವಿಷ್ಣುವು '**ಭ್ರಮಣ ಪರಾಕ್ರಮಿ**' ಎಂದು ಪ್ರಸಿದ್ಧ, ಅತ್ಯಂತ ದೂರದೇಶ ನಿವಾಸಿ, ರಶ್ಮಿಗಳಿಂದ ವ್ಯಾಪಕ, ಹವಿಸ್ಸುಗಳಿಗೆ ಸ್ವಾಮಿ, ಅಧಿಕ ಹಿತಕಾರಿ, ಅನೇಕರಿಂದ ಪ್ರಶಂಸಿತ, ಅತ್ಯಂತ ಪ್ರಸಿದ್ಧ ದಾನಾದಿ ಗುಣಯುಕ್ತ, ಅಧ್ಯಾತ್ಮಿಕ ಲೋಕಪಾಲಕ, ಉತ್ತಮ ಪ್ರಾದುರ್ಭಾವ ಉಳ್ಳವ.

ವಿಷ್ಣುವು, ಸೋಮಪಾನದಿಂದ ಹರ್ಷಗೊಳ್ಳುವವ ಹಾಗೂ ವೃದ್ಧಿಸುವವ, ಸೋಮಾಗ್ರ ಭಕ್ಷಕ, ಸೋಮ ಇಡುವ ಕಳಶರೂಪಿಯಾದ ಸೋಮಸ್ವಾಮಿ.

ವಿಷ್ಣುವು ಶತ್ರುಜಯಿ, ಶತ್ರು ಭಯಂಕರ, ಶತ್ರುಗಳ ಅತಿ ಹಿಂಸಕ, ಹೀಗಾಗಿ ವಿಷ್ಣುವನ್ನು ಹಿಂಸಿಸಲು ಯಾರಿಗೂ ಸಾಧ್ಯವಿಲ್ಲ. ವಿಷ್ಣುವು, ವಂಚಕನಾದ '**ವೃಷಶಿಪ್ರ**'ನ ಕರ್ಮಗಳನ್ನು ನಾಶ ಮಾಡಿದ, ಶಂಭರಾಸುರನ ತೊಂಭತ್ತೊಂಭತ್ತು ಪಟ್ಟಣಗಳನ್ನು ನಾಶ ಮಾಡಿದ. ಅಸುರ '**ಅರ್ಚಿ**'ಯ ಒಂದು ಲಕ್ಷ ಭಟರನ್ನು ಒಟ್ಟಾಗಿ ನಾಶಮಾಡಿದ.

ಈಗ ಉತ್ಪನ್ನರಾಗಿರುವ, ಮುಂದೆ ಉತ್ಪನ್ನರಾಗುವ, ಯಾರೂ ಸಹಾ - ವಿಷ್ಣುವಿನ ಮಾಹತ್ಮೆಗಳನ್ನು ಅರಿಯಲಾರರು! ಅವರಿಗೆ ವಿಷ್ಣುವನ್ನು ಸಮೀಪಿಸಲೂ ಸಹ ಆಗದು!

ಗಾಯತ್ರ್ಯಾದಿ ಛಂದೋಪೇತ ವಿಷ್ಣುವು, ಪಾದ ಇಟ್ಟ ಭೂ ಪ್ರದೇಶದಲ್ಲಿ ಮಾನವರು ಜೀವಿಸುತ್ತಾರೆ. ಮಾನವರು ಅಗ್ನಿ ಹೋತ್ರಾದಿ ಕರ್ಮಮಾಡಲು ಸಮರ್ಥರಾಗಿರುವುದು ವಿಷ್ಣುವಿನ ಮಹಿಮೆಯಿಂದಲೇ.

ಅಗ್ನಿಯ ಮೂಲಕ - ಅನ್ನ ಪೂಜೆ ಸ್ತೋತ್ರಗಳ ಅರ್ಪಣೆ - ವಿಷ್ಣು ವಿಗೆ ಆದನಂತರವೇ, ಯಜಮಾನ ಋಷಿಯು '**ಹುತಶಿಷ್ಟ**' ಸೋಮವನ್ನು ಸೇವಿಸುವುದು.

ಪುರುಷಾರ್ಥಪ್ರದವಾದ, ವಿಷ್ಣುವಿನ ಮಹಾನಾಮವನ್ನು ಎಲ್ಲರೂ ಧ್ಯಾನಿಸಬೇಕಾದದ್ದೇ. ಪೃಥ್ವಿ ಅಂತರಿಕ್ಷಗಳನ್ನು ಮಾತ್ರಾ ಅರಿತಿರುವ ಅಲ್ಪನಾದ ಯಜಮಾನನು ಸ್ತುತಿಸಿದಾಗ, ವಿಷ್ಣುವು, ಭಕ್ತ ಯಜಮಾನನ ಸಹಾಯಕ್ಕೆ ಬರುತ್ತಾನೆ.

ಯಜಮಾನ ಋಷಿಗಳು ವಿಷ್ಣುವನ್ನು ಹೀಗೆಲ್ಲಾ ಕಂಡಿದ್ದಾರೆ. ವಿಷ್ಣುವು, ಲೋಕಸ್ವಾಮಿ, ಆಕರ್ಷಕ, ಸಕಲರ ಬಂಧು, ಬೃಹತ್ ಸ್ವರೂಪದ ತರುಣ, ಪ್ರತಿಸ್ತುತಿಗೂ ಉತ್ಪನ್ನ ಸ್ಥಾನಿ ಆಗಿದ್ದಾನೆ.

ವಿಷ್ಣುವು ಹದಿನಾಲ್ಕು ಲೋಕಗಳನ್ನು - ಪೃಥ್ವಿ ಅಪ, ತೇಜ ಗಳೆಂಬ-ಮೂರು ಧಾತುಗಳಿಂದ ಕೂಡಿರುವಂತೆ ಮಾಡಿದ್ದಾನೆ.

ವಿಷ್ಣುವು, ತ್ರಿವಿಕ್ರಮನಾಗಿ ಇಟ್ಟ ಮೂರು ಪಾದಗಳಿಂದ, ಅಗ್ನಿ ಹೋತ್ರಾದಿ ಧರ್ಮಪಾಲನೆಯಾಗಿ, ಆ ಪಾದ ಧೂಳಿನಿಂದ - ಭೂಪ್ರದೇಶವೇ ಕಾಣದಂತೆ ಮುಚ್ಚಿಹೋಯಿತು.

ವಿಷ್ಣುವಿನ, ತ್ರಿವಿಕ್ರಮವಾದ ವಿಕ್ಷೇಪಗಳು, ಮೂರು ಲೋಕಗಳನ್ನೂ ವಲಯಾಕಾರದಲ್ಲಿ ಸುತ್ತುವರೆದಿದೆ. ಉನ್ನತ ಇಷ್ಟಾರ್ಥಗಳನ್ನು ಸುರಿಸುವ ವಿಷ್ಣುವಿನ ಪಾದಗಳನ್ನು ಅನೇಕ ಮಹಾತ್ಮರು ಸ್ತುತಿಸಿದ್ದಾರೆ.

ವಿಷ್ಣುವಿನ, ವಿರಾಟ ಸ್ವರೂಪವನ್ನೂ ಅವನ ಉತ್ಕೃಷ್ಟವಾದ ಪರಮಪದವನ್ನೂ ಬುದ್ಧಿವಂತರೂ, ವಿವೇಕಿಗಳೂ ಆದ ವಿದ್ವಾಂಸರುಗಳು, ವಿಸ್ತಾರವಾದ ಆಕಾಶದಲ್ಲಿ ಸದಾ ನೋಡು ತ್ತಾರೆ. ವಿಷ್ಣುವನ್ನೂ ವಿಷ್ಣುವಿನ ವೀರ ಕರ್ಮಗಳನ್ನು ಹೊಗಳುತ್ತಾ ವಿದ್ವಾಂಸರು, ಅವನನ್ನು ಮಹಾತ್ಮನನ್ನಾಗಿ ತೇಜೋಭರಿತನನ್ನಾಗಿ ಮಾಡುತ್ತಾರೆ. ಕರ್ತವ್ಯಜ್ಞಾನದಿಂದ, ಪ್ರಶಂಸಾತ್ಮಕ ವಾಕ್ಯಗಳಿಂದ, ಸ್ತುತಿರೂಪ ಕರ್ಮಗಳಿಂದ ವಷಟ್ಕಾರ ಪೂರ್ವಕ ಮಂತ್ರಗಳಿಂದ, ವಿಷ್ಣುವನ್ನು ಸ್ತುತಿಸಿ, ಹವಿಸ್ಸನ್ನು ಅರ್ಪಿಸಿ, ವಿಷ್ಣುವನ್ನು ಪ್ರಸಿದ್ಧಗೊಳಿಸಿದ್ದಾರೆ.

ಯಜಮಾನ ಋಷಿಗಳು, ಪ್ರಸಿದ್ಧನಾದ ವಿಷ್ಣುವನ್ನು ತಮ್ಮ ಯಜ್ಞಕ್ಕೆ ಆಹ್ವಾನಿಸುತ್ತಾರೆ. ಯಜಮಾನರುಗಳು, ವಿಷ್ಣುವಿನ ಪುರುಷರೂಪ ಪರಾಕ್ರಮಗಳನ್ನು ಲೋಕರಕ್ಷಣಾರ್ಥವಾಗಿ ಸ್ತುತಿಸುತ್ತಾರೆ. ಪುನಃ ಪುನಃ ವಿಷ್ಣುಸ್ತುತಿ ಸ್ತೋತ್ರಗಳನ್ನು ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದಂತೆ ಪಠಿಸುತ್ತಾರೆ.

ಯಜಮಾನನ, ವಿಷ್ಣುವನ್ನು ಕುರಿತು ಯಜ್ಞವನ್ನು ವರುಣನೂ ಅಶ್ವಿನೀದೇವತೆಗಳೂ ಸೇವಿಸುತ್ತಾರೆ. '**ಸಕಲ ಲೋಕಗಳೂ ಜೀವನಕ್ಕೆ ಯೋಗ್ಯ**' ಎಂದು ಪ್ರಕಟಿಸಿ, ಯಜಮಾನನನ್ನು '**ಫಲ ಅನುಭವಿಸಲು ಯೋಗ್ಯ**'ನನ್ನಾಗಿ ಮಾಡಿ ಸಂತೋಷ ಗೊಳಿಸುತ್ತಾರೆ. ಇಂದ್ರನೊಡಗೂಡಿ ವಿಷ್ಣುವು ಅಸುರರೊಂದಿ ಗಿನ ಸ್ಪರ್ಧಾಯುದ್ಧದಲ್ಲಿ, ಅಪರಿಮಿತ ಜಯಶಾಲಿ ಆಗಿದ್ದಾನೆ.

ಯಜಮಾನಾರ್ಪಿತ, ವಷಟ್ಕಾರಮಂತ್ರ, ಶಸ್ತ್ರರೂಪ, ಸ್ತೋತ್ರ ರೂಪ, ಪ್ರಶಂಸಾವಾಕ್ಯ ಧ್ಯಾನಾತ್ಮಕಸ್ತುತಿ, ಅತಿಶಯ ಪೂಜೆ, ಅರ್ಪಿತ ಹವಿಸ್ಸು- ಇವನ್ನೆಲ್ಲಾ ವಿಷ್ಣುವು ಸ್ವೀಕರಿಸಲಿ.

ಯಜಮಾನನ, ನಮಸ್ಕಾರ ಪೂರ್ವಕ ಸ್ತುತಿ ಆಹ್ವಾನಗಳನ್ನು ಇಂದ್ರನೂ ಸ್ವೀಕರಿಸಲಿ, ಆಲಿಸಲಿ, ಮನ್ನಿಸಲಿ, ಸಮೀಪಿಸಲಿ.

ಯಜಮಾನನಿಂದ ಮರೆಯಾಗಿ ಇದ್ದು ಯಜಮಾನನಿಗೆ ಸಂಗ್ರಾಮದಲ್ಲಿ ಸಹಾಯ ಮಾಡುತ್ತಿದ್ದರೂ, ವಿಷ್ಣುವು ತನ್ನ ನಿಜಸ್ವರೂಪವನ್ನು ಯಜಮಾನನಿಂದ ಮರೆಮಾಚುವುದು ಬೇಡ. ಯಜಮಾನ ಋಷಿಗೆ, ವಿಷ್ಣುವು, ಸುಲಭವಾಗಿ ಹೊಂದತಕ್ಕ ದ್ವೇಷವರ್ಜಿತವಾದ, ಹಿತಕರವಾದ, '**ಸದ್ಬುದ್ಧಿ**' ಯನ್ನು ಕೊಡಲಿ. ಕಷ್ಟಕಾಲದಲ್ಲಿದ್ದು ಆರಾಧಿಸುವ ಯಜ ಮಾನನಿಗೆ - ಪ್ರಭೂತ ಅನ್ನ ಅಶ್ವಯುಕ್ತ ಸಂಪತ್ತು ಕ್ಷಿಪ್ರಧನ, ಕಲ್ಯಾಣಗಳನ್ನು ಕೊಡಲಿ. ಹಿಂಸಾಚಾರಕ ಮಾರ್ಗಗಳಿಂದ ತೊಂದರೆ ಆಗದಂತೆ - ವಿಷ್ಣುವು ಕಾಪಾಡಲಿ.

ವಿಷ್ಣುದತ್ತವಾದ ಯಶಸ್ಸನ್ನೂ ಅನುಗ್ರಹವನ್ನೂ ಅನುಭವಿಸುವ ಶಕ್ತಿಯನ್ನು - ವಿಷ್ಣುವು, ಯಜಮಾನನಿಗೆ ಕೊಡಲಿ. ವಿಷ್ಣುವಿನ ಅನುಗ್ರಹಾಪೇಕ್ಷಿ ಮಾನವರೆಲ್ಲರಿಗೂ, ವಿಷ್ಣುವಿನ ಮಧುರ ಆನಂದರಸ ಇರುವ ಸನ್ನಿಧಿಯ ಅಂತರಿಕ್ಷಮಾರ್ಗ ದೊರೆ ಯಲಿ. ಯಜಮಾನರೊಡನೆ ಅವರ ಪತ್ನಿಯರೂ ಬಂದು, ವಿಷ್ಣುಸಾನ್ನಿಧ್ಯವನ್ನು ತಲುಪುವಂತಾಗಲಿ - ಎಂದು ಋಷಿ ಯಜ ಮಾನರು ಪ್ರಾರ್ಥಿಸುತ್ತಾರೆ.

'ಶಿಪಿವಿಷ್ಟದೇವ' - ಎಂದು ಹೆಸರಾದ, ವಿಷ್ಣುವಿನ ನಾಮವನ್ನು ಹೇಗೆ ಪ್ರಕಟಿಸಬೇಕು? ಎಂಬುದನ್ನು ತಿಳಿಯಲು ಯಜ ಮಾನನು ಬಯಸುತ್ತಾನೆ.

ಹೀಗೆ ಋಗ್ವೇದದಲ್ಲಿ ಋಷಿಗಳು ದೇವತೆಗಳನ್ನು ಸ್ತುತಿಸಿ ಅವರ ಶಕ್ತಿಸಾಮರ್ಥ್ಯಗಳನ್ನು ವರ್ಣಿಸಿದ್ದಾರೆ. ಇವೆಲ್ಲವೂ ಸರ್ವಕಾಲ ದಲ್ಲಿಯೂ ನಮಗೆ ದಾರಿದೀಪಗಳು. ಈ ಸ್ತುತಿಗಳು ಜ್ಞಾನ ಭಂಡಾರಗಳಾಗುವುದರ ಜೊತೆಗೆ ವಾಙ್ಮಯ ಭಂಡಾರಗಳೂ ಆಗಿರುವುದು ನಮ್ಮ ಸುದೈವ.

ದೇವರು - ಧರ್ಮ

ನಂಬಿದರೆ ಭಯವಿಲ್ಲ ನಂಬದಿರೆ ಬಾಳಿಲ್ಲ

ಶ್ರೀ ಹರಿಹರಪುರ ಎಸ್. ಮಂಜುನಾಥ್
ರಾಜರಾಜೇಶ್ವರಿನಗರ, ಬೆಂಗಳೂರು

ನೀವು ಯಾವುದೇ ಕಾಲದ ಇತಿಹಾಸವನ್ನು ತಿರುವಿಹಾಕಿ, ಅಲ್ಲಿ ದೇವರು - ಧರ್ಮಗಳ ಬಗ್ಗೆ ನಡೆದಿರುವಷ್ಟು ಚರ್ಚೆ, ಸಂಘರ್ಷಗಳು ಬೇರಾವುದೇ ವಿಚಾರದಲ್ಲಿ ನಡೆದಿರುವುದು ಕಂಡು ಬರುವುದಿಲ್ಲ. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಂತಿರುವುದರಿಂದ ಒಂದನ್ನು ಬಿಟ್ಟು ಇನ್ನೊಂದನ್ನು ಅಪ್ಪಿ ಕೊಳ್ಳುವುದು ಕಷ್ಟ. ಮನುಷ್ಯನಾದವನು ದೇವರು - ಧರ್ಮಗಳನ್ನು ನಂಬುವುದು, ಆಚರಿಸುವುದು ತನ್ನ ಸುಖ ನೆಮ್ಮದಿಗಳಿಗಾಗಿಯೇ ಹೊರತು, ಚರ್ಚೆ - ಸಂಘರ್ಷಗಳಿಗಾಗಿ ಅಲ್ಲ. ಆದರೆ ಮನುಷ್ಯತ್ವವಿಲ್ಲದ ರಾಜಕಾರಣಿಗಳು, ಸಮಯ ಸಾಧಕರು ಹಾಗೂ ಸ್ವಾರ್ಥಿಗಳಿಂದಾಗಿ ದೇವರು, ಧರ್ಮಗಳ ಮೂಲೋದ್ದೇಶ ಮರೆಯಾಗಿ ಬೇಡದ ವಿವಿಧೋದ್ದೇಶಕ್ಕೆ ಕಾರಣವಾಗುತ್ತಿರುವುದು ಇಂದಿನ ದುರಂತಗಳಲ್ಲೊಂದು.

ದೇವರು - ಧರ್ಮಗಳ ಬಗ್ಗೆ ಒಂದೇ ವಾಕ್ಯದಲ್ಲಿ ಹೇಳುವುದಾದರೆ "**ನಂಬಿದರೆ ಭಯವಿಲ್ಲ, ನಂಬದಿರೆ ಬಾಳಿಲ್ಲ**". '**ನೆನೆದವರ ಮನದಲ್ಲಿ**' ಎನ್ನುವಂತೆ, ನಂಬಿದವರಲ್ಲಿ ಅವನಿದ್ದಾನೆ. ಅಂಥವರು ತಮ್ಮೊಳಗೇ ಅವನನ್ನು ನೋಡಿಕೊಳ್ಳುತ್ತಾರೆ. ಆದರೆ ನಂಬದವನ ಅನುಮಾನವಿದೆಯಲ್ಲ ! ಅದೊಂದು ದೊಡ್ಡರೋಗ. ನಂಬದವರು ಕೇಳುವುದು ಒಂದೇ ಪ್ರಶ್ನೆ, '**ನಿನ್ನ ದೇವರನ್ನು ತೋರಿಸು**' ಎಂದು. ಹಿರಣ್ಯಕಶಿಪು ಪ್ರಹ್ಲಾದನಿಗೆ ಕೇಳಿದ್ದು ಇದೇಮಾತನ್ನು. ಆದರೆ ಆಗ ಪ್ರಹ್ಲಾದನ ಕರೆಗೆ ಓಗೊಟ್ಟ ಪರಮಾತ್ಮ ನೃಸಿಂಹನಾಗಿ ಕಂಬದಲ್ಲೇ ದರ್ಶನ ಕೊಟ್ಟುಬಿಟ್ಟ. ಈಗ ಕಲಿಗಾಲ! ಹಾಗೆಲ್ಲ ಆಗದು. ಹಾಗಾಗಿ ನಂಬಿದವರು ಸುಮ್ಮನಿರುವುದಿಲ್ಲ. "**ಗಾಳಿಯನ್ನು ತೋರಿಸು, ಹೂವಿನ ಪರಿಮಳವನ್ನು ತೋರಿಸು, ದೇವರನ್ನು ತೋರಿಸುತ್ತೇನೆ**" ಎಂದು ನಂಬದವರ ಬಾಯಿ ಮುಚ್ಚಿಸುತ್ತಾರೆ. ಅವರವರ ನಂಬುಗೆ ಅವರವರಿಗೆ ಎಂದು ಸುಮ್ಮನಿರಲು ಆ ಮನುಷ್ಯತ್ವವಿಲ್ಲದವರು ಬಿಡುವುದಿಲ್ಲ.

ಹೀಗಾಗಿ ಇಂದು ಮಠ ಮಾನ್ಯಗಳು ದೇವರು ಧರ್ಮಗಳ ಮೂಲ ಸ್ಥಾನವೆನಿಸುವ ಬದಲು ರಾಜಕಾರಣಿಗಳ ಕಪ್ಪು ಹಣ ಸಂಗ್ರಹಣೆ, ಚುನಾವಣೆ ಸಮಯದಲ್ಲಿ ಗೆಲುವಿಗಾಗಿ ಅವಲಂಬಿಸುವ ಜಂಪ್ ಬೋರ್ಡ್‌ಗಳಾಗಿಬಿಟ್ಟಿವೆ. ಆದರೆ ನಾನು ಹುಟ್ಟಿ ಬೆಳೆದ ಹರಿಹರಪುರದಲ್ಲಿರುವ ಶ್ರೀಮಠ ಹಾಗೂ ಶೃಂಗೇರಿ ಮಠಗಳು ಇಂಥ ವಿಚಾರಗಳಿಗೆ ತಲೆಹಾಕದೆ ಒಂದು ಧಾರ್ಮಿಕ ಸಂಸ್ಥೆ ಹೇಗಿರಬೇಕು ಎನ್ನುವುದಕ್ಕೆ ಮೇಲ್ಪಂಕ್ತಿಯಾಗಿರುವುದನ್ನು ನೋಡಿದಾಗ ಇವುಗಳ ಬಗ್ಗೆ ಹೆಮ್ಮೆ ಎನಿಸುತ್ತದೆ.

ಹರಿಹರಪುರ ಟಿ. ಸುಬ್ರಹ್ಮಣ್ಯಂ ಅವರ ತೃತೀಯ ಪುತ್ರನಾದ ನಾನು 1955ರಲ್ಲಿ ಜನಿಸಿದವನು. 1968ರವರೆಗೆ ಅಂದರೆ ನನಗೆ 13 ವರ್ಷಗಳಾಗುವವರೆಗೂ ಊರು - ಮಠಗಳ ಒಡನಾಟದಲ್ಲಿದ್ದವನು. ಆ ದಿನಗಳಲ್ಲೇ ನಮ್ಮ ಊರಿನ ಹಾಗೂ ಸುತ್ತ ಮುತ್ತಲ ಹಳ್ಳಿಗಳ ಬಾಲಕಿಯರಿಗಾಗಿ ಪ್ರತ್ಯೇಕ ಶಾಲೆ ನಿರ್ಮಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಶ್ರೀಮಠ ಮುಂದೆ ಊರಿನ ಅನೇಕ ಅಭಿವೃದ್ಧಿ ಕಾರ್ಯಗಳಲ್ಲಿಯೂ ತನ್ನನ್ನು ತೊಡಗಿಸಿಕೊಂಡಿದ್ದು ಗಮನಾರ್ಹ.

ದಕ್ಷಿಣ ಭಾರತ್ ಹಿಂದೀ ಪ್ರಚಾರ ಸಭಾ, ಮದ್ರಾಸ್‌ನವರು ನಡೆಸುತ್ತಿದ್ದ ಪ್ರಥಮ, ಮಧ್ಯಮ, ರಾಷ್ಟ್ರ ಭಾಷಾ, ಪ್ರವೀಣ ಮೊದಲಾದ ಹಿಂದೀ ಪರೀಕ್ಷೆಗಳಿಗೆ ಆ ಕಾಲದಲ್ಲೇ ನಮ್ಮಂಥ ಹುಡುಗರಿಗೆ ಉಚಿತವಾಗಿ ಕೋಚಿಂಗ್ ನೀಡಿ ಪರೀಕ್ಷೆಗೆ ಕಟ್ಟಿಸಿ ನಾವೆಲ್ಲ ರಾಷ್ಟ್ರಭಾಷೆಯನ್ನು ಅರಿಯಲು ನೆರವಾದ ಶ್ರೀಮಠವನ್ನು ಮರೆಯುವುದಾದರೂ ಹೇಗೆ?

1968ರಲ್ಲಿ ಬೆಂಗಳೂರು ಸೇರಿದ ನಾನು 1973ರಿಂದ 1997ರವರೆಗೂ ಎನ್‌ಜಿಇಎಫ್ ಸಂಸ್ಥೆಯಲ್ಲಿ ಕೆಲಸ ಮಾಡುವಾಗ, ನಂತರ ಡಾ|| ಟಿ.ವಿ. ವೈಕುಂಠರಾಜು ಅವರ 'ವಾರಪತ್ರಿಕೆ' '**ರಾಜುಪತ್ರಿಕೆ**' '**ಹರಿಣಿ**' '**ಗೋಧೂಳಿ**' ಪತ್ರಿಕೆಗಳಲ್ಲಿ ಸಹ ಸಂಪಾದಕನಾಗಿ ಕೆಲಸ ಮಾಡುವಾಗ ಅಮೇಲೆ '**ಕ್ರಿಕೆಟ್**' ಪತ್ರಿಕೆಯ ಸಂಪಾದಕನಾಗಿ ದುಡಿಯುವಾಗಲೂ 13 ವರ್ಷಗಳ ನನ್ನ ಬಾಲ್ಯದ ಅನುಭವ - ದೇವರು - ಗುರು ಹಿರಿಯರ ಮೇಲಿನ ನಂಬಿಕೆ ನನ್ನ ಬದುಕಿನಲ್ಲಿ ಭದ್ರ ಬುನಾದಿಯಂತೆ ಕೆಲಸ ಮಾಡಿದೆ.

ಇದುವರೆಗೆ ನನ್ನ 5 ಕೃತಿಗಳು ಪ್ರಕಟವಾಗಿದ್ದು ಸದ್ಯ ಎನ್‌ಜಿಇಎಫ್ ಕುರಿತಾದ ಕೃತಿ ರಚನೆಯಲ್ಲಿ ತೊಡಗಿಕೊಂಡಿದ್ದೇನೆ.

ಇದನ್ನೆಲ್ಲ ಏಕೆ ಹೇಳಿದೆನೆಂದರೆ ಮಲೆನಾಡಿನ ಹಳ್ಳಿಯೊಂದರಲ್ಲಿ ಹುಟ್ಟಿ 13 ವರ್ಷಗಳ ಬಾಲ್ಯವನ್ನು ಅಲ್ಲಿ ಕಳೆದ ನನ್ನಂತಹ ಸಾಮಾನ್ಯನೊಬ್ಬ ಇಷ್ಟೆಲ್ಲ ಸಾಧಿಸುವುದಕ್ಕೆ ಕಾರಣವಾದದ್ದು

ತಾಯಿ ಶಾರದೆಯ ಕೃಪಾಶೀರ್ವಾದ - ತಂದೆ-ತಾಯಿ - ಗುರುಗಳ ಮಾರ್ಗದರ್ಶನ ಎನ್ನುವ ಅರಿವು ನನ್ನಲ್ಲಿದೆ. ಈ ಅರಿವೇ ನನ್ನನ್ನು ಇಂದಿಗೂ ಮುನ್ನಡೆಸುತ್ತಿದೆ ಎನ್ನುವ ನಂಬಿಕೆ ನನ್ನದು.

ನನ್ನ ಬಾಲ್ಯದಿಂದ ಇಂದಿನವರೆಗೂ ನಮ್ಮೂರಿನಲ್ಲಿ ನಡೆಯುವ ಮುಖ್ಯವಾದ ವಿದ್ಯಮಾನಗಳನ್ನೆಲ್ಲ ನಾನು ನೋಡಿ, ಓದಿ, ಕೇಳಿ ತಿಳಿದಿದ್ದೇನೆ. ಇಲ್ಲಿ ಯಾವತ್ತೂ ಊರಿನ ಜನರ ನೆಮ್ಮದಿ ಕೆಡು ವಂತಹ ಘಟನೆಗಳಾಗಲೀ, ಕೋಮು ಜಗಳಗಳಾಗಲೀ ಸಂಭವಿ ಸಿಲ್ಲ. ಹೀಗೆ ಜನರ ನೆಮ್ಮದಿ ಕಾಪಾಡುವಲ್ಲಿ ಊರಿಗೆ ದಾರಿ ದೀಪದಂತಿರುವ ಶ್ರೀಮಠದ ಪಾತ್ರ ಬಹಳ ಮುಖ್ಯವಾದುದು.

ಕೇವಲ ಗೊಡ್ಡು ಧರ್ಮಾಚರಣೆ ಮಾತ್ರ ಮಠಮಾನ್ಯಗಳ, ಗುರುಗಳ ಕೆಲಸವಲ್ಲ ಎಂದು ಮನಗಂಡಿದ್ದ ಅಂದಿನ ಶ್ರೀಗಳು ವಿದ್ಯಾದಾನದ ಜೊತೆ, ಸಾಹಿತ್ಯ ರಚನೆ, ಕೃಷಿ ಕೈಂಕರ್ಯ ದಲ್ಲೂ ಮಠವನ್ನು, ತಮ್ಮನ್ನೂ ತೊಡಗಿಸಿಕೊಂಡಿದ್ದರು. ಈಗಿನ ಶ್ರೀಗಳು ಕೂಡ ಅದೇ ದಾರಿಯಲ್ಲಿ ನಡೆಯುತ್ತಿದ್ದು ಭವ್ಯ ಕಲಾಪೂರ್ಣ ಶಾಸ್ತ್ರೀಯ ಯಾಗಶಾಲೆ ನಿರ್ಮಾಣ, ವೇದ, ಸಂಸ್ಕೃತ ಪಾಠಶಾಲೆ ನಿರ್ವಹಣೆ, ಸ್ವಯಂಪ್ರಕಾಶ ಪತ್ರಿಕೆಯ ಪ್ರಕಟಣೆಗಳ ಮೂಲಕ ಧರ್ಮಪೀಠವೊಂದು ನಿಜವಾಗಿ ಮಾಡಬೇಕಾದ ಕೆಲಸವನ್ನು ಮಾಡುತ್ತಿರುವುದನ್ನು ನೋಡಿ ದಾಗ ನನ್ನಂತಹ ಅನೇಕರಿಗೆ ನಾವು ಈ ಊರಿನವರೆಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ.

ಸಾರಾಂಶವಾಗಿ ದೇವರು - ಧರ್ಮವೆಂಬುದನ್ನು ಅವರವರ ನಂಬಿಕೆಗೆ ಅನ್ವಯಿಸಬಹುದು. ನಂಬಿದರೆ ಅದರಲ್ಲಿ ಆನಂದವನ್ನು ಕಾಣುತ್ತೇವೆ. ನಂಬದಿರೆ ಇಂತಹ ಆನಂದ ದೊರೆಯುವುದಿಲ್ಲ. ಇದಕ್ಕೆ ನಂಬಿಕೆಯೇ ಆಧಾರವಾಗುತ್ತದೆ.

ಸಾಹಿತ್ಯ ದಿಗ್ಗಜ ಡಾ|| ಶಿವರಾಮ ಕಾರಂತರ ಕಾದಂಬರಿ ಯೊಂದರ ಶೀರ್ಷಿಕೆ **ನಂಬಿದವರ ನಾಕ - ನರಕ**, ಎಂದರೆ ದೇವರಲ್ಲಿ ನಂಬಿಕೆ ಇರುವವರಿಗೆ ನಾಕ! ಇಲ್ಲದವರಿಗೆ ನರಕ (ಸ್ವರ್ಗವಲ್ಲದ್ದು) ಲಭಿಸುವುದು.

ಖ್ಯಾಪನೇನಾನುತಾಪೇನ
ತಪಸಾಽಧ್ಯಯನೇನ ಚ ।
ಪಾಪಕೃನ್ಮುಚ್ಯತೇ ಪಾಪಾತ್ತಥಾ
ದಾನೇನ ಚಾಪದಿ ॥
(ಮನುಸ್ಮೃತಿ, 11-227)

ಪಾಪಮಾಡಿದವನು ತನ್ನ ಪಾಪವನ್ನು
ಹೇಳಿಕೊಳ್ಳುವುದರಿಂದಲೂ,
ಪಶ್ಚಾತ್ತಾಪದಿಂದಲೂ, ತಪಸ್ಸಿನಿಂದಲೂ,
ಅಧ್ಯಯನದಿಂದಲೂ,
ದಾನದಿಂದಲೂ ಶುದ್ಧನಾಗುತ್ತಾನೆ.

ಚಾತಕಸ್ತ್ರಿಚತುರಾನ್ ಪಯಃಕಣಾನ್
ಯಾಚತೇ ಜಲಧರಂ ಪಿಪಾಸಯಾ ।
ಸೋಽಪಿ ಪೂರಯತಿ ವಿಶ್ವಮಂಭಸಾ
ಹಂತ ಹಂತ ಮಹತಾಮುದಾರತಾ ॥
(ಕುವಲಯಾನಂದ)

ಚಾತಕಪಕ್ಷಿ ಬಾಯಾರಿಕೆಯಿಂದ ಮೂರು ನಾಲ್ಕು
ನೀರಿನ ಹನಿಗಳಿಗಾಗಿ ಮೇಘವನ್ನು
ಯಾಚಿಸುತ್ತದೆ. ಮೇಘವಾದರೋ ವಿಶ್ವವನ್ನೇ
ನೀರಿನಿಂದ ತುಂಬಿಬಿಡುತ್ತದೆ.
ಅಬ್ಬಬ್ಬಾ! ಮಹಾತ್ಮರ ಔದಾರ್ಯವೇ!

ಜಲಬಿಂದುನಿಪಾತೇನ ಕ್ರಮಶಃ ಪೂರ್ಯತೇ ಘಟಃ ।
ಸ ಹೇತುಃ ಸರ್ವವಿದ್ಯಾನಾಂ ಧರ್ಮಸ್ಯ ಚ ಧನಸ್ಯ ಚ ॥
(ಹಿತೋಪದೇಶ, ಸುಹೃದ್ಭೇದ - 11)

ನೀರಿನ ಒಂದೊಂದು ಹನಿಯ ಬೀಳುವಿಕೆಯಿಂದ
ಕ್ರಮವಾಗಿ ಮಡಕೆ ತುಂಬುತ್ತದೆ.
ಎಲ್ಲ ವಿದ್ಯೆಗಳಿಗೂ, ಧರ್ಮಕ್ಕೂ, ಧನಕ್ಕೂ ಇದೇ ಕಾರಣ.

ತಪಃ ಪರಂ ಕೃತಯುಗೇ ತ್ರೇತಾಯಾಂ ಜ್ಞಾನಮುಚ್ಯತೇ ।
ದ್ವಾಪರೇ ಯಜ್ಞಮೇವಾಹುರ್ದಾನಮೇವ ಕಲೌ ಯುಗೇ ॥
(ಸುಭಾಷಿತಸುಧಾನಿಧಿ)

ಕೃತಯುಗದಲ್ಲಿ ತಪಸ್ಸು ಶ್ರೇಷ್ಠವಾದ ಧರ್ಮವಾಗಿತ್ತು,
ತ್ರೇತಾಯುಗದಲ್ಲಿ ಜ್ಞಾನವನ್ನೂ, ದ್ವಾಪರಯುಗದಲ್ಲಿ ಯಜ್ಞವನ್ನೂ
ಶ್ರೇಷ್ಠವಾದ ಧರ್ಮವೆಂದು ತಿಳಿದರು. ಆದರೆ ಕಲಿಯುಗದಲ್ಲಿ
ದಾನವನ್ನೇ ಶ್ರೇಷ್ಠವಾದ ಧರ್ಮವೆಂದು ಹೇಳಿದ್ದಾರೆ.

ತಸ್ಮಾದ್ಧರ್ಮಂ ಸಹಾಯಾರ್ಥಂ ನಿತ್ಯಂ ಸಂಚಿನುಯಾಚ್ಛನೈಃ ।
ಧರ್ಮೇಣ ಹಿ ಸಹಾಯೇನ ತಮಸ್ತರತಿ ದುಸ್ತರಂ ॥
(ಮನುಸ್ಮೃತಿ, 4-242)

ದಿನವೂ ಕ್ರಮವಾಗಿ ತನ್ನ ಸಹಾಯಕ್ಕಾಗಿ ಧರ್ಮವನ್ನು ಗಳಿಸಬೇಕು.
ಧರ್ಮದಿಂದ ಕಷ್ಟಕರವಾದ ಪಾಪಗಳನ್ನೂ ಕಳೆದುಕೊಳ್ಳುತ್ತಾನೆ.

ಮುಂಡಕೋಪನಿಷತ್

ಸೂಚಿಸಿರುವ ಶ್ರೇಯೋಮಾರ್ಗ

ಪ್ರೊ. ಕೆ.ಆರ್. ರವಿಕುಮಾರ್
ಪ್ರಾಂಶುಪಾಲರು, ಸ.ಪ್ರ.ದ.ಕಾ. ಮಾಲೂರು

ಕರ್ಮ ವಿಚಾರಕ್ಕೆ ಪ್ರತಿಯಾಗಿ ಜ್ಞಾನ ಮಾರ್ಗವನ್ನು ತೋರಿದಂತಹ ಕೃತಿಗಳು ಉಪನಿಷತ್ತುಗಳಾಗಿವೆ. ಫಲಾಪೇಕ್ಷೆಯಿಂದ ಮಾಡುವ ಯಜ್ಞ ಯಾಗಾದಿಗಳಿಂದ ಸಿಗುವ ಪುಣ್ಯವು ಅಸ್ಥಿರ ಮತ್ತು ಅನಿತ್ಯ. ಆ ಕಾರಣದಿಂದಲೇ ಬ್ರಹ್ಮಜ್ಞಾನವನ್ನು ಸಂಪಾದಿಸಿ ಸಂಸಾರದ ಕ್ಲೇಶಗಳಿಂದ ಮುಕ್ತರಾಗಬೇಕೆಂದು ಉಪನಿಷತ್ತುಗಳು ಸಾರಿದವು. ಇದಕ್ಕೆ ಕರ್ಮ ಮಾರ್ಗ ಪೂರಕವಲ್ಲ. ಆದ್ದರಿಂದ ಕರ್ಮವನ್ನು ತ್ಯಜಿಸಿ '**ಜ್ಞಾನ**'ವನ್ನು ಹೆಚ್ಚಿಸಿಕೊಳ್ಳಬೇಕೆಂದು ಉಪನಿಷತ್ತುಗಳು ಸಾರಿ ಹೇಳುತ್ತವೆ.

ಮುಂಡಕೋಪನಿಷತ್ತು ಕರ್ಮದ ವಿಚಾರವನ್ನು ತನ್ನದೇ ಆದ ರೀತಿಯಲ್ಲಿ ಪ್ರತಿಪಾದಿಸಿದೆ. ಮೊದಲು ಯಜ್ಞ ಯಾಗಾದಿಗಳ ಸ್ವರೂಪ, ಅವುಗಳ ಪ್ರಶಂಸೆಯಿಂದ ಪ್ರಾರಂಭವಾಗಿ ಕೊನೆಗೆ ಈ ಕರ್ಮಗಳ ವಿಚಾರಗಳೊಂದಿಗೆ ಅವುಗಳ ನಿಂದನೆಯೊಂದಿಗೆ ಪರ್ಯಾವಸಾನಗೊಳ್ಳುತ್ತದೆ. ಜನರು ಯಜ್ಞ ಯಾಗಾದಿ ಕರ್ಮಗಳ ಬಗ್ಗೆ ಅವುಗಳ ಫಲದ ಬಗ್ಗೆ ಹೊಂದಿರುವ ಅಭಿಪ್ರಾಯಗಳನ್ನು ವಿವರಿಸುತ್ತದೆ. ಆ ಅಭಿಪ್ರಾಯಗಳು ತಪ್ಪು ಎಂದು ನಿರೂಪಿಸುತ್ತವೆ. ಅನಂತರ ಆ ಯಜ್ಞ ಯಾಗಾದಿಗಳ ಕರ್ಮದ ಮಿತಿಯನ್ನು ತಿಳಿಸುತ್ತವೆ. ಇವುಗಳ ಫಲದಿಂದ ಪ್ರೇಯಸ್ಸುಗಳನ್ನು ಹೊಂದಬಹುದೇ ವಿನಃ ಶ್ರೇಯಸ್ಸನ್ನು ಹೊಂದುವುದಸಾಧ್ಯ 'ಎಂಬ ವಿಷಯವನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಅನಂತರ ಅಂತಹ ಶ್ರೇಯಸ್ಸನ್ನು ಹೊಂದಲು ಜ್ಞಾನಮಾರ್ಗವನ್ನವಲಂಬಿಸಬೇಕೆಂದು ಈ ಉಪನಿಷತ್ತು ಹೇಳುತ್ತದೆ.

ಜ್ಞಾನವನ್ನು ಪಡೆಯ ಬಯಸುವವರು ಅರಣ್ಯದಲ್ಲಿ ಕುಳಿತು ಶ್ರದ್ಧೆಯಿಂದ ಜಿತೇಂದ್ರಿಯರಾಗಿ ತಪಸ್ಸು ಮಾಡಬೇಕು. ಇದರಿಂದವರು ಅಮೃತಮಯನೂ, ಅವ್ಯಯಾತ್ಮನೂ ಆದ ಬ್ರಹ್ಮನನ್ನು ಹೊಂದುತ್ತಾರೆ. ಯಜ್ಞಯಾಗಾದಿ ಕರ್ಮಗಳಿಂದ ಸಿಗುವ ಫಲ ಅನಿತ್ಯ. ಈ ಫಲದಿಂದ ನಿತ್ಯನಾದ ಬ್ರಹ್ಮನನ್ನು ಹೊಂದಲಸಾಧ್ಯ.

ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ।
ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ॥

ಅದನ್ನು ತಿಳಿಯುವುದಕ್ಕಾಗಿ ಸಮಿತ್ತುಗಳನ್ನು ಹಿಡಿದು ಶ್ರೋತ್ರಿಯನೂ, ಬ್ರಹ್ಮನಿಷ್ಠನೂ ಆದ ಗುರುವನ್ನು ಹೊಂದಬೇಕು. ಆಗ ಯೋಗ್ಯನಾದ ಶಿಷ್ಯನು ಪ್ರಶಾಂತಚಿತ್ತನೂ ಶಮದಿಂದ ಕೂಡಿದವನೂ ಆಗಿ ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆದ ಗುರುವಿನಿಂದ ಯಥಾರ್ಥವಾಗಿ ಉಪದೇಶಿಸಲ್ಪಡುತ್ತಾನೆ. ಈ ರೀತಿ ಆಧ್ಯಾತ್ಮಿಕ ಚಿಂತನೆ ಹೊಂದಿದ ಆ ಶಿಷ್ಯನಿಗೆ ಯಾವುದು ನಿತ್ಯ, ಯಾವುದು ಅನಿತ್ಯ? ಶ್ರೇಯಸ್ಸು ಯಾವುದು? ಪ್ರೇಯಸ್ಸು ಯಾವುದು? ಎಂಬುದರ ಅರಿವು ಉಂಟಾಗುತ್ತದೆ. ವೇದಗಳನ್ನು ಅಪರಾ ಎನ್ನುವ ಮುಂಡಕೋಪನಿಷತ್ತು ನಾಶವಿಲ್ಲದ ಬ್ರಹ್ಮನನ್ನು ತಿಳಿಯುವ ವಿದ್ಯೆಯನ್ನು '**ಪರಾ**' ಎಂದಿದೆ. ಪರಾ ವಿದ್ಯೆಯ ವಿಷಯವಾದ '**ಅಕ್ಷರ**'ವೆಂಬುದು ಪರಮಾರ್ಥವಾಗಿ ಸತ್ಯವಾಗಿರುತ್ತದೆ. ಚೇತನಾರೂಪರಾದ ಎಲ್ಲ ಜೀವರೂ ಬೆಂಕಿಯಿಂದ ಹೊರಡುವ ಕಿಡಿಗಳಂತೆ ಇದರಿಂದಲೇ ಬಂದಿರುವರು.

ಎಲ್ಲ ಪ್ರಪಂಚವೂ ಇದರಿಂದಲೇ ಬಂದಿರುವುದು. ಕರ್ಮ ಉಪಾಸನೆ, ಇವುಗಳ ಫಲ ಇಷ್ಟೇ ಈ ಪ್ರಪಂಚವೆಂಬುದು. ಇದೆಲ್ಲವೂ ಈ ಅಕ್ಷರನೆಂಬ ಪುರುಷನಿಂದಲೇ ಉಂಟಾಗುತ್ತದೆ. ಯಾವನು ಈ ಪುರುಷ ತನ್ನ ಹೃದಯದಲ್ಲಿಯೇ ಇರುವವನನೆಂದು ಅರಿತುಕೊಳ್ಳುವನೋ ಅವನಿಗೆ ಬ್ರಹ್ಮಾನಂದ ಉಂಟಾಗುತ್ತದೆ ಎಂದು ಹೇಳುವ ಮುಂಡಕೋಪನಿಷತ್ತು ಪರಮಾತ್ಮ ಜ್ಞಾನಕ್ಕೆ ಫಲವಾಗಿ ಹೀಗೆ ಹೇಳುತ್ತದೆ.

ಭಿದ್ಯತೇ ಹೃದಯಗ್ರಂಥಿಶ್ಛಿದ್ಯನ್ತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥

ಆ ಪರಬ್ರಹ್ಮನನ್ನು ಕಂಡುಕೊಂಡರೆ, ಹೃದಯ ಗ್ರಂಥಿಯು ಒಡೆದು ಹೋಗುತ್ತದೆ. ಅಂದರೆ ಆ ವಿದ್ಯೆಯ ವಾಸನೆಗಳಿಂದ ಕೂಡಿದ ಬುದ್ಧಿ ಹಾಗೂ ಹೃದಯವನ್ನೂ ಆಶ್ರಯಿಸಿಕೊಂಡಿರುವ ಕಾಮಗಳು ಹೊರಟು ಹೋಗುತ್ತವೆ. ಎಲ್ಲ ಸಂಶಯಗಳೂ ಹೊರಟು ಹೊಗುವವು. ಅವನ ಕರ್ಮಗಳೆಲ್ಲ ನಾಶವಾಗುವವು. ಅಂದರೆ ಬ್ರಹ್ಮಜ್ಞಾನವುಂಟಾಗುವುದಕ್ಕೆ ಮುಂಚೆ ಮಾಡಿದ ಹಾಗೂ ಜನ್ಮಾಂತರಗಳಲ್ಲಿ ಅವನು ಮಾಡಿದ ಕರ್ಮಗಳು ಕ್ಷಯವಾಗುವವು.

ಈ ಬ್ರಹ್ಮಜ್ಞಾನವನ್ನು ಹೊಂದುವ ಬಗೆಯನ್ನು ಉಪನಿಷತ್ತು ಹೀಗೆ ಹೇಳುತ್ತದೆ.

ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಮ್
ಶರಂ ಹ್ಯುಪಾಸಾನಿಶಿತಂ ಸಂದಧೀತ ।

ಅಯುಷ್ಯ ತದ್ಭಾಗವತೇನ ಚೇತಸಾ
ಲಕ್ಷ್ಯಂ ತದೇವಾಕ್ಷರಂ ಸೋಮ್ಯ ವಿದ್ಧಿ॥

ಅಂದರೆ ಉಪನಿಷತ್ತಿನಲ್ಲಿ ಹೇಳಿರುವ ಓಂಕಾರವನ್ನು ಬಿಲ್ಲು ಮಾಡಿಕೊಂಡು ತಾನೇ ಬಾಣವಾಗಿ, ಬ್ರಹ್ಮವೇ ಲಕ್ಷ್ಯವು ಎಂದು ಭಾವಿಸಿ ಹೊರಗಿನ ವಿಷಯಗಳನ್ನೆಲ್ಲ ಮರೆತು ಏಕಾಗ್ರತೆಯಿಂದ ಚಿಂತಿಸುತ್ತಾ ಬಾಣವು ತನ್ನ ಗುರಿಯನ್ನು ಮುಟ್ಟುವಂತೆ ಬ್ರಹ್ಮವನ್ನು ಹೋಗಿ ಸೇರಬೇಕು. ಆದ್ದರಿಂದ ಓಂಕಾರವೇ ಬಿಲ್ಲು ಆತ್ಮನೇ ಬಾಣ. ಆ ಬ್ರಹ್ಮವೇ ಲಕ್ಷ್ಯವೆನಿಸುತ್ತದೆ. ಎಚ್ಚರ ತಪ್ಪದೇ ಹೊಡೆಯಬೇಕು. ಬಾಣದಂತೆ ತನ್ಮಯನಾಗಬೇಕು. ಈ ಬ್ರಹ್ಮನೇ ಅಕ್ಷರ, ಸತ್ಯ, ಪುರುಷ, ಎಲ್ಲವೂ ಇವನನ್ನೇ ಆಶ್ರಯಿಸಿವೆ. ಈ ಬ್ರಹ್ಮ ಚೈತನ್ಯದ ಬೆಳಕಿಲ್ಲದೇ ಯಾವುದು ಬೆಳಗಲಾರದು. ಆದ್ದರಿಂದ ಬ್ರಹ್ಮ ಹಾಗೂ ಆತ್ಮನ ಅರಿವು ಅವಶ್ಯ.

ಬ್ರಹ್ಮ ಮತ್ತು ಆತ್ಮ ಇವೆರೆಡರ ಸ್ವಭಾವವನ್ನೂ ಈ ಉಪನಿಷತ್ತು ಕಾವ್ಯಮಯವಾಗಿ ಹೇಳುತ್ತದೆ.

ದ್ವಾಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ।
ತಯೋ ರನ್ಯಃ ಪಿಪ್ಪಲಂ ಸ್ವಾದ್ಯ
ತ್ತ್ಯನಶ್ನನ್ನನ್ಯೋऽಭಿಚಾಕಶೀತಿ॥

ಒಂದೇ ತರಹದ ಎರಡು ಹಕ್ಕಿಗಳು ಸ್ನೇಹಿತರಾಗಿ ಒಂದೇ ಮರವನ್ನು ಆಶ್ರಯಿಸಿವೆ. ಇವುಗಳಲ್ಲಿ ಒಂದು ಸವಿಯಾದ ಹಣ್ಣನ್ನು ತಿನ್ನುತ್ತಿದೆ. ಇನ್ನೊಂದು ತಿನ್ನದೇ ಅದನ್ನು ನೋಡುತ್ತಿದೆ. ಅಂದರೆ ಶರೀರವೆಂಬುದೇ ವೃಕ್ಷ ಈ ಎರಡು ಹಕ್ಕಿಗಳಲ್ಲಿ ಒಂದು ಆತ್ಮ ಇನ್ನೊಂದು ಬ್ರಹ್ಮ. ಆತ್ಮವು ಶರೀರವನ್ನು ಆಶ್ರಯಿಸಿ ಸುಖದುಃಖ ರೂಪವಾದ ತನ್ನ ಕರ್ಮ ಫಲ ತಿನ್ನುತ್ತದೆ. ಇನ್ನೊಬ್ಬನು ಈಶ್ವರ (ಬ್ರಹ್ಮ)ನಾಗಿರುವುದರಿಂದ ನಿತ್ಯಶುದ್ಧನಾಗಿರುವುದರಿಂದ ತಿನ್ನದೇ ನೋಡುತ್ತಲೇ ಇರುವನು. ಹೀಗೆ ಆತ್ಮನನ್ನು ಅರಿಯಬೇಕು ಎಂದು ಆತ್ಮನನ್ನೂ ಕಾಣುವ ಸಾಧನವು ಹೀಗೆ ಹೇಳಲಾಗಿದೆ.

ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ
ನಾನ್ಯೈರ್ದೇವೈಸ್ತಪಸಾ ಕರ್ಮಣಾವಾ।
ಜ್ಞಾನಪ್ರಸಾದೇನ ವಿಶುದ್ಧ ಸತ್ತ್ವಸ್ತತಸ್ತು
ತಂ ಪಶ್ಯತೇ ನಿಷ್ಕಲಂ ಧ್ಯಾಯಮಾನಃ॥

(ಈ ಆತ್ಮನನ್ನು ಕಣ್ಣಿನಿಂದ ಗ್ರಹಿಸಲಾಗದು. ಏಕೆಂದರೆ ಆತ್ಮನಿಗೆ ರೂಪವಿಲ್ಲ ಮಾತಿನಿಂದಲೂ ಗ್ರಹಿಸಲಾಗದು. ಉಳಿದ ದೇವತೆಗಳಿಂದಲೂ, ತಪಸ್ಸಿನಿಂದಾಗಲಿ ಕರ್ಮದಿಂದಾಗಲಿ, ಆಗುವುದಿಲ್ಲ, ಆದರೆ ಜ್ಞಾನ ಪ್ರಸಾದದಿಂದ ಶುದ್ಧವಾದ ಅಂತಃಕರಣದಿಂದ ಆತ್ಮನನ್ನು ಕಂಡುಕೊಳ್ಳುತ್ತಾನೆ.

ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾಶ್ರುತೇನ।
ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ
ಆತ್ಮಾವಿವೃಣುತೇ ತನುಂಸ್ವಾಮ್॥

ಈ ಆತ್ಮನು ಅಧ್ಯಯನಗಳಿಂದ ಸಿಗುವುದಿಲ್ಲ, ಸ್ಮರಣ ಶಕ್ತಿಯಿಂದಲೂ ದೊರಕುವುದಿಲ್ಲ, ಹೆಚ್ಚಾಗಿ ಶ್ರವಣ ಮಾಡುವುದರಿಂದಲೂ ಸಿಗುವುದಿಲ್ಲ, ಯಾವನು ಪರಮಾತ್ಮನನ್ನು ಪಡೆಯಬೇಕೆಂದು ಬಯಸುತ್ತಿರುವನೋ ಆ ಬಯಕೆಯಿಂದ ಈ ಪರಮಾತ್ಮನು ಸಿಕ್ಕುವನು.

ಆತ್ಮನಿಷ್ಠೆಯಿಂದ ಉಂಟಾದ ಬಲವುಳ್ಳವನಿಗೆ, ಸಂಸಾರದ ಆಸಕ್ತಿಯನ್ನು ತೊರೆದವನಿಗೆ, ಜ್ಞಾನ ಹಾಗೂ ಸಂನ್ಯಾಸ ಇವುಗಳಲ್ಲಿ ತತ್ಪರನಾದ ಯಾವ ವಿದ್ವಾಂಸನು ಯತ್ನ ಮಾಡುವನೋ ಅವನ ಈ ಆತ್ಮನು ಬ್ರಹ್ಮಧಾಮವನ್ನು ಪ್ರವೇಶಿಸುವನು.

ಬ್ರಹ್ಮನನ್ನು ಪಡೆದುಕೊಂಡ ಋಷಿಗಳು ಜ್ಞಾನತೃಪ್ತರಾಗಿ ಪರಮಾತ್ಮ ಸ್ವರೂಪದಿಂದಲೇ ಏರ್ಪಟ್ಟಿರುವ ಆತ್ಮವುಳ್ಳವರಾಗಿ ರಾಗಾದಿ ದ್ವೇಷಗಳಿಂದ ಮುಕ್ತರಾಗಿ ಪ್ರಶಾಂತರಾಗಿರುವರು. ಅಂತಹ ಧೀರರು ಆತ್ಮಜ್ಞಾನವನ್ನು ಹೊಂದಿ ಬ್ರಹ್ಮನನ್ನು ಪ್ರವೇಶಿಸುವರು.

ಜ್ಞಾನಿಯು ಮುಕ್ತನಾಗುವ ಬಗೆಯನ್ನು ಮುಂಡಕೋಪನಿಷತ್ತು ಹೀಗೆ ತಿಳಿಸುತ್ತದೆ.

ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ
ಸಂನ್ಯಾಸ ಯೋಗಾತ್ ಯತಯಃ ಶುದ್ಧಸತ್ತ್ವಾಃ।
ತೇ ಬ್ರಹ್ಮ ಲೋಕೇಷು ಪರಾಂತಕಾಲೇ
ಪರಾಮೃತಾಃ ಪರಿಮುಚ್ಯಂತಿ ಸರ್ವೇ॥

ಅಂದರೆ ವೇದಾಂತ ವಿಜ್ಞಾನದ ಅರ್ಥವನ್ನು ಚೆನ್ನಾಗಿ ನಿಶ್ಚಯ ಮಾಡಿಕೊಂಡವರಾಗಿ ಸಂನ್ಯಾಸ ಯೋಗದಿಂದ ಶುದ್ಧ ಸತ್ತ್ವರಾಗಿ ಅವರು ಬ್ರಹ್ಮಲೋಕಗಳಲ್ಲಿ ದೇಹವನ್ನು ಬಿಡುವ ಕಾಲದಲ್ಲಿ, ಬದುಕಿರುವಾಗಲೇ ಬ್ರಹ್ಮಸ್ವರೂಪವಾಗಿ ಪರಿಮುಕ್ತರಾಗುವರು. ಬ್ರಹ್ಮೈಕ್ಯರಾಗಿ ಬಿಡುವರು.

ಯಥಾನದ್ಯಃಸ್ಯಂ ದಮಾನೇ ಸಮುದ್ರೇऽ
ಸ್ತಂಗಚ್ಛಂತಿ ನಾಮರೂಪೇವಿಹಾಯ।
ತಥಾ ವಿದ್ವಾನ್ ನಾಮರೂಧ್ವಿಮುಕ್ತಃ
ಪರಾತ್ಪರಂಪುರುಷಮುಪೈತಿ ದಿವ್ಯಮ್॥

ಹೇಗೆ ನದಿಗಳು ಹರಿಯುತ್ತಾ (ಹೋಗಿ) ನಾಮರೂಪಗಳನ್ನು ಬಿಟ್ಟು ಸಮುದ್ರದಲ್ಲಿ ಅಸ್ತಂಗತವಾಗುವವೋ ಹಾಗೆ ಅವಿದ್ಯೆಯಿಂದ ಬಿಡುಗಡೆ ಹೊಂದಿದ ದಿವ್ಯ ಪುರುಷ ಪರಮಾತ್ಮನ ಬಳಿಗೆ ಹೋಗುವನು.

"ವೇದಗಳಲ್ಲಿ ಸುಭಾಷಿತಗಳು"

ವಿದ್ವಾನ್ ಬಿ.ಕೆ. ಶೇಷಗಿರಿ ಭಟ್
ಶೃಂಗೇರಿ

"**ಜನ್ತೂನಾಂ ನರಜನ್ಮ ದುರ್ಲಭಮ್**" ಜೀವಕೋಟಿಗಳಲ್ಲಿ ನರಜನ್ಮವೆಂಬುದು ಅತ್ಯಂತ ದುರ್ಲಭ. ಅಷ್ಟೇ ಪವಿತ್ರ. ಜನ್ಮ ಜನ್ಮಾಂತರಗಳ ಪುಣ್ಯಫಲದಿಂದ ಪ್ರಾಪ್ತವಾದ ಈ ನರಜನ್ಮವನ್ನು ಪಡೆದ ಬಳಿಕ ನರನಾಗಿ ಬಾಳಬೇಕೇ ಹೊರತು ವಾನರನಾಗಬಾರದು. ಪಶುವಾಗಬಾರದು.

ಹಾಗೆ ಬಾಳ ಬೇಕಾದರೆ ಬದುಕಿಗೊಂದು ಇತಿ ಮಿತಿ ರೀತಿ ನೀತಿ ನಿಯಮಗಳು ಇರಲೇಬೇಕು. ಇಂತಹ ನೀತಿ ಸಂಹಿತೆಯನ್ನು ನಿರೂಪಿಸುವುದು ವೇದ. "**ವೇದೋಽಖಿಲೋ ಧರ್ಮ ಮೂಲಮ್**" ಇದು ವೇದದ ಹೆಗ್ಗಳಿಕೆ.

ಅಪೌರುಷೇಯವಾಗಿ ಜ್ಞಾನಭಂಡಾರವೆನಿಸಿ ಪರಂಪರಾಗತವಾಗಿ ಬಂದ ವೇದಗಳಿಗೆ "ಶ್ರುತಿ" ಎಂಬ ಅಭಿಧಾನವಿದೆ. ವೇದ ಎಂದರೆ ಜ್ಞಾನ. ಜ್ಞಾನ ಅಂದರೆ ವಿವೇಕ. ವಿವೇಕವೆಂದರೆ ಯಾವುದು ಸರಿ ಯಾವುದು ತಪ್ಪು ಯಾವುದು ಸತ್ಯ, ಯಾವುದು ಮಿಥ್ಯ ಯಾವುದು ಧರ್ಮ ಯಾವುದು ಅಧರ್ಮ ಎಂಬ ಸರಿತಪ್ಪುಗಳ ಸರಿಯಾದ ವಿವೇಚನೆ. "**ವಿವಿಚ್ಯ ಬೋಧನಂ ವಿವೇಕಃ**".

ಪರಮಾತ್ಮನ ವದನಾರವಿಂದದಿಂದ ಹೊರಹೊಮ್ಮಿದ ಕಾರಣ ವೇದ ಅಪೌರುಷೇಯ. ಪ್ರಾತಸ್ಮರಣೀಯರಾದ ನಮ್ಮ ಪೂರ್ವಜ ಋಷಿಮುನಿಗಳು ತಮ್ಮ ತಪಸ್ಸಿನ ಫಲವಾಗಿ ವೇದಗಳನ್ನು ಸಾಕ್ಷಾತ್ಕಾರಕ್ಕೆ ಮಾಡಿಕೊಂಡರು. "**ಋಷಯಃ ಮಂತ್ರ ದ್ರಷ್ಟಾರಃ ನ ತು ಮಂತ್ರಕರ್ತಾರಃ**"

ಸಮಷ್ಟಿಯಾಗಿದ್ದ ವೇದವನ್ನು ಭಗವಾನ್ ವ್ಯಾಸರು ಋಗ್ಯಜುಸ್ಸಾಮಾಥರ್ವಗಳೆಂದು ನಾಲ್ಕು ವಿಭಾಗಮಾಡಿ ಸುಮಂತು ಜೈಮಿನಿ ವೈಶಂಪಾಯನ ಪೈಲರೆಂಬ ನಾಲ್ಕು 'ಋಷಿಗಳನ್ನು ನಾಲ್ಕು ಆಮ್ನಾಯಗಳಿಗೆ ಸಂರಕ್ಷಕರನ್ನಾಗಿ ನಿಯಮಿಸಿದರು. ಬ್ರಹ್ಮಯಜ್ಞದಲ್ಲಿ ಇವರಿಗೆ ತರ್ಪಣ ನೀಡುತ್ತೇವೆ.

ಹೀಗೆ ಬಹುಜನಹಿತಾಯ ಬಹುಜನಸುಖಾಯ ಸಾರ್ವಕಾಲಿಕ ಸತ್ಯ ವಾದ ಭಗವದಾವಿರ್ಭೂತ ಋಷಿಮುನಿ ಸಾಕ್ಷಾತ್ಕೃತ ಜ್ಞಾನನಿಧಿ ವೇದ ನಿತ್ಯಸತ್ಯ. ಮಹೌನ್ನತ್ಯ, ಸರ್ವಾದರಣೀಯ ವಿಶ್ವಕೋಶ.

ಕಾವ್ಯನಾಟಕಾದಿಗಳಲ್ಲಿ ಅಂದು ಉಲ್ಲೇಖಿತ ವಿಚಾರಗಳು ಕಾಲ ಕಾಲಕ್ಕೆ ಬದಲಾವಣೆ ಹೊಂದಲೂಬಹುದು. ಕಾಲಗತಿಯಲ್ಲಿ ತಿದ್ದುಪಡಿ ಮಾರ್ಪಾಟು ಸಹಜ. ಸ್ವಾಭಾವಿಕ. ಆದರೆ ವೇದಗಳಲ್ಲಿನ ಒಂದಕ್ಷರದ ತಿದ್ದುಪಡಿ ಬದಲಾವಣೆ ಮಾತ್ರ ಸಾಧ್ಯವೇ ಇಲ್ಲ. ಅದು ಅಂದು ಹೇಗೋ ಇಂದೂ ಹಾಗೇ ಮುಂದೆಯೂ ಹಾಗೆಯೇ. ಅದಕ್ಕೇ "ಸಾಕ್ಷಾತ್ ಮೂಲ ಪ್ರಮಾಣಾಯ" ಎಂದಿದ್ದಾರೆ. ಬದಲಾಗದ ಸನಾತನ ವೈದಿಕ ಸಂವಿಧಾನವೆಂದರೆ ಅದು ವೇದಗಳು ಮಾತ್ರ.

ನಾವು ಆಚರಣೆ ಮಾಡುವ ಜಪ ತಪ ಹೋಮ ಹವನ ದಾನ ಧರ್ಮ ಪೂಜೆ ಪುನಸ್ಕಾರ ಯಜ್ಞಯಾಗಾದಿಗಳಿಗೆ ವೇದಗಳೇ ಆಧಾರ. "**ವೇದಾಃ ಪ್ರಮಾಣಮ್**" ಅಂದಮೇಲೆ ವೇದ ಚೋದಿತ ಕರ್ಮಾನುಷ್ಠಾನಗಳನ್ನು ಮಾತ್ರ ಮಾಡಬೇಕು. ವೇದನಿಂದ್ಯವಾದ ಕರ್ಮಾಚರಣೆ ಸಲ್ಲದು. "**ವೇದೋ ನಿತ್ಯಮಧೀಯತಾಂ ತದುದಿತಂ ಕರ್ಮಸ್ವನುಷ್ಠೀಯತಾಮ್**" ಏಷಃ ಆದೇಶಃ ಏಷಃ ಉಪದೇಶಃ ಎಂಬ ಎಚ್ಚರಿಕೆಯ ಗಂಟೆ ಕಿವಿಯೊಳಗೆ ಸದಾ ಅನುಸರಣಿಸುತ್ತಿರಬೇಕು. ಈ ಚೌಕಟ್ಟನ್ನು ಬಿಟ್ಟರೆ ನಾವು ದಿಕ್ಕೆಟ್ಟಂತೆ.

"ಅನಂತಾ ವೈ ವೇದಾಃ" ವೇದಗಳು ಅಪಾರ. ಪ್ರಕೃತ ನಮಗೆ ಉಪಲಬ್ಧವಾಗಿರುವುದು ಆಮ್ನಾಯಚತುಷ್ಟಯಗಳು. "**ಆದ್ಯಾಯ ಸರ್ವವೇದಾನಾಂ ಋಗ್ವೇದಾಯ ನಮೋ ನಮಃ**" ಎಂಬಂತೆ ಋಗ್ವೇದ ಪ್ರಥಮ.

ಋಗ್ವೇದವು ಶಾಕಲ ಮತ್ತು ಬಾಷ್ಕಲ ಎಂದು ಎರಡು ವಿಭಾಗ ವಿದ್ದರೂ ಪ್ರಕೃತ ನಮಗೆ ಪ್ರಾಪ್ತವಾಗಿರುವುದು ಶಾಕಲ ಋಕ್ಸಂಹಿತಾ. ಇದರಲ್ಲಿ ಎಂಟು ಅಷ್ಟಕಗಳಿದ್ದು ಪ್ರತಿ ಅಷ್ಟಕದಲ್ಲಿ ತಲಾ ಎಂಟು ಅಧ್ಯಾಯಗಳಂತೆ ಒಟ್ಟು ಅರವತ್ತನಾಲ್ಕು ಅಧ್ಯಾಯಗಳಿವೆ. ಪ್ರತಿ ಅಧ್ಯಾಯಗಳಲ್ಲಿ ಅನಿರ್ದಿಷ್ಟ ಸಂಖ್ಯೆಯಲ್ಲಿ ಸೂಕ್ತಗಳು ವರ್ಗಗಳು ಮಂತ್ರಗಳು ಇವೆ. ಮಂತ್ರಗಳಲ್ಲಿ ಅರ್ಧಋಕ್, ಋಕ್, ಪಾದಗಳೆಂದು ವಿಭಾಗವಿದೆ.

ಸೂಕ್ತಾದಿಯಲ್ಲಿ ಋಷಿ ದೇವತಾ ಛಂದಸ್ಸು ಉಕ್ತವಾಗಿದ್ದು ಕರ್ಮಾನುಗುಣವಾಗಿ ಉದ್ದೇಶ ತ್ಯಾಗವನ್ನು ಹೇಳಬೇಕು. ಸಮಗ್ರ ಋಗ್ವೇದ ಮಂತ್ರಗಳನ್ನು ಹತ್ತು ಮಂಡಲಗಳಿಗೆ ವ್ಯವಸ್ಥೆ ಮಾಡಿದ್ದಾರೆ.

ನಡು ನಡುವೆ ಖಿಲ ಅಥವಾ ಪರಿಶಿಷ್ಟ ಎಂಬ ಹೆಸರಿನಿಂದ ಕೆಲವು ಮಂತ್ರಗಳು ಉಕ್ತವಾಗಿವೆ. ಈ ಮಂತ್ರಗಳನ್ನು ಸಂಹಿತಾ

ಯಾಗದಲ್ಲಿ ಸ್ವಾಹಾಂತವಾಗಿ ಬಳಸುವುದಿಲ್ಲ. ಅವುಗಳಿಗೆ ಅಲ್ಲಿ ಪಠನ ಮಾತ್ರ ಉದ್ದೇಶ ವಿನಿಯೋಗ.

ಪಾರಾಯಣ ಪುರಶ್ಚರಣೆ ಹೋಮ ಜ್ಞಾನಾರ್ಜನೆ ಮುಂತಾದ ವಿವಿಧ ಉದ್ದೇಶಗಳಿಗೆ ವಿನಿಯೋಗಿಸಲ್ಪಡುವ ವೇದ ಮಂತ್ರಗಳಿಗೆ ಸಾಯಣಾಚಾರ್ಯರು ಭಾಷ್ಯವನ್ನು ಬರೆದಿದ್ದಾರೆ. ಯಾಸ್ಕರು ನಿಘಂಟು ರಚಿಸಿದ್ದಾರೆ.

ಪರಮ ಪವಿತ್ರವಾದ ವೇದ ಮಂತ್ರಗಳಲ್ಲಿ ನಮ್ಮ ನಿತ್ಯ ಜೀವನಕ್ಕೆ ತೀರ ಹತ್ತಿರವಾದ ಕೆಲವು ಸುಭಾಷಿತಗಳೂ ಅಂತರ್ಗತವಾಗಿವೆ. ಅಂದರೆ ಕಾವ್ಯನಾಟಕಾದಿಗಳಲ್ಲಿ ಪದ್ಯಾತ್ಮಕ ವಾಕ್ಯಾತ್ಮಕ ಸುಭಾಷಿತಗಳು ಇರುವಂತೆ ವೇದಮಂತ್ರಗಳಲ್ಲೂ ಸುಭಾಷಿತಗಳು ಇವೆ. ಇವು ಮಂತ್ರಾತ್ಮಕ ಸುಭಾಷಿತಗಳು.

"ಸುಷ್ಠು ಭಾಷಿತಮ್ = ಸುಭಾಷಿತಮ್" ಒಳ್ಳೆಯ ಮಾತು. ಮನುಷ್ಯನ ಮನಸ್ಸು ಮರ್ಕಟದಂತೆ ಚಂಚಲ. ಕ್ಷಣಕ್ಕೊಂದು ಬುದ್ಧಿ. ಇಂತಹ ಚಂಚಲಮನಕ್ಕೆ ಮದ್ದು ಸುಭಾಷಿತ. ಕೆಲವೇ ಪದಗಳಿಂದ ಹಲವು ವಿಚಾರಗಳನ್ನು ತಿಳಿಸುವುದು ಸುಭಾಷಿತಗಳ ವೈಶಿಷ್ಟ್ಯ. ಸಭಾಷಿತಗಳು ರಸಗುಲ್ಲದಂತೆ ಸುತ್ತಲೂ ಸವಿ.

"ರಾಮವತ್ ವರ್ತಿತವ್ಯಂ ನ ರಾವಣವತ್" ಎಂದು ವಿಧಿ ನಿಷೇಧಗಳ ಮುಖೇನ ನಮ್ಮನ್ನು ಸನ್ಮಾರ್ಗಗಾಮಿಗಳನ್ನಾಗಿ ಮಾಡುವುದೇ ಸುಭಾಷಿತಗಳ ಪರಮ ಚರಮ ಗುರಿ. ಬದುಕಿನ ದಾರಿ ತಪ್ಪಿದ ನಮಗೆ ಕೈಮರವಿದ್ದಂತೆ.

ಸರಿತಪ್ಪುಗಳನ್ನು ಸಕಾರಣವಾಗಿ ಸಾಂದರ್ಭಿಕವಾಗಿ ಉಪದೇಶಿಸಿ ದಾನವತ್ವದಿಂದ ಮಾನವತ್ವದೆಡೆಗೆ ಕೊಂಡೊಯ್ಯುವ ಏಕೈಕ ಸೇತು ಸುಭಾಷಿತ. **"ಸುಭಾಷಿತ ರಸಸ್ಯಾಗ್ರೇ ಸುಧಾ ಭೀತಾ ದಿವಂಗತಾ"** ಅಮೃತಕ್ಕಿಂತಲೂ ಸಿಹಿ ಸವಿ ಸುಭಾಷಿತ.

ಇದೀಗ ವೇದಮಂತ್ರಗಳಲ್ಲಿ ಅಲ್ಲಲ್ಲಿ ಕಂಡುಬರುವ ಕೆಲವು ಸುಭಾಷಿತಗಳತ್ತ ಗಮನ ಹರಿಸೋಣ.

- **ಋಚಃ ಸಾಮಾನಿ ಯಜೂಗ್‍ಂಷಿ ಸಾ ಹಿ ಶ್ರೀರಮೃತಾ** ಸತಾಮ್. ಋ॥ ನಾಲ್ಕುವೇದಗಳು, ಉಪಾಸಕರಿಗೆ, ಸಾಧುಸಜ್ಜನರಿಗೆ, ಆಸ್ತಿಕರಿಗೆ ಕೇಳಿದ್ದನ್ನು ಕೊಡುವ ಕಾಮಧೇನು ಕಲ್ಪವೃಕ್ಷ ಚಿಂತಾಮಣಿಗಳು.

- **ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ** । ....
ಋ. ಅ1 ಅ6ವ16
ನಮ್ಮ ಕಿವಿಗಳಿಂದ ಒಳ್ಳೆಯ ಸುದ್ದಿಯನ್ನೇ ಕೇಳೋಣ. ಕಣ್ಣುಗಳಿಂದ ಒಳ್ಳೆಯ ದೃಶ್ಯಗಳನ್ನೇ ನೋಡೋಣ. ಸ್ವಷ್ಟ ಪುಷ್ಟ ನಿರೋಗ ದೃಢಕಾಯರಾಗಿ ತನ್ಮೂಲಕ ದೇವತೆಗಳನ್ನು ಸ್ತುತಿಸುತ್ತಾ ಅವರನ್ನು ಸಂತೃಪ್ತಿ ಪಡಿಸೋಣ.

- **ಅಕ್ಷೈರ್ಮಾದೀವ್ಯಃ ಕೃಷಿಮಿತ್ ಕೃಷಸ್ವ** ....
ಋ.ಅ7 ಅ8ವ5
ಜೂಜು ರಾಟರಿ ಇಸ್ಪೀಟು ಮುಂತಾದ ದುಶ್ಚಟಗಳಿಂದ ದೂರವಿರು. ಕೃಷಿಕರ್ಮವನ್ನು ಮಾಡು. **"ಕೃಷಿತೋ ನಾಸ್ತಿ ದುರ್ಭಿಕ್ಷಮ್"** ಬೆವರು ಸುರಿಸಿ ದುಡಿದು ಬಂದ ಬೆಳೆಯನ್ನು ಬಂಗಾರವೆಂದು ಭಾವಿಸು. ಅದರಿಂದ ದನ ಕರು ಹೆಂಡತಿ ಮಕ್ಕಳು ಒಟ್ಟಾರೆ ನಿನ್ನ ಕುಟುಂಬವನ್ನು ಪೋಷಿಸುತ್ತಾ ಸುಖಿಸು.

- **ಮೋಘಮನ್ನಂ ವಿಂದತೇ ಅಪ್ರಚೇತಾಃ** ....
ಋ.ಅ8ಅ6ವ23
ಯಾರು ಭೂಮಿಗೆ ಭಾರವಾಗಿ ಕೂಳಿಗೆ ಮಾರಿಯಾಗಿ ಕರ್ತವ್ಯಭ್ರಷ್ಟರಾಗಿ ಮಾನವರೂಪೀ ದಾನವರಾಗಿ ಬದುಕುವರೋ ಅವರಿಂದ ಯಾವತ್ತೂ ಯಾರಿಗೂ ಯಾವ ಪ್ರಯೋಜನವೂ ಇಲ್ಲ. ಅವರು ಲೋಕ ಕಂಟಕರು. ಸಮಾಜಕ್ಕೆ ಮಾರಕರೇ ಹೊರತು ತಾರಕರಲ್ಲ. ಅವರು ತಿನ್ನುವುದು ಅನ್ನವನ್ನಲ್ಲ. ಪಾಪದ ಪಿಂಡ. **ಸಃ ಕೇವಲಾಘಃ ಭವತಿ.**

- **ಸಕ್ತುಮಿವ ತಿತಉನಾ ಪುನಂತಃ** ....
ಋ.ಅ8.ಅ2.ವ23
ನಾವು ಒಂದು ಮಾತನಾಡಬೇಕಾದರೂ ಹತ್ತು ಹಲವು ಸಲ ಸಾಧಕ ಬಾಧಕಗಳನ್ನು ಯೋಚಿಸಿ ಮಾತನಾಡಬೇಕು. ಜರಡಿಯು ಧಾನ್ಯದ ಕಾಳುಗಳನ್ನು ಜಾಲಾಡಿ ಶುದ್ಧವಾದ ಕಾಳುಗಳನ್ನು ಮಾತ್ರ ಹೊರಹಾಕಿ ಹೊಟ್ಟು ಜೊಳ್ಳುಗಳನ್ನು ತನ್ನೊಳಗೇ ಇಟ್ಟುಕೊಳ್ಳುವಂತೆ ನಮ್ಮ ನಾಲಿಗೆ ಎಂಬ ಜರಡಿಯಿಂದ ಪರಿಷ್ಕೃತವಾದ ಒಳ್ಳೆಯ ಮಾತುಗಳನ್ನೆ ಆಡಬೇಕು. ಇಂತಹ ಮಾತುಗಳಿಂದ ಶತ್ರುಗಳೂ ಮಿತ್ರರಾಗುತ್ತಾರೆ. ಅಲ್ಲಿ ಲಕ್ಷ್ಮಿಯು ನೆರೆಯಾಗಿ ನಿಲ್ಲುತ್ತಾಳೆ. **"ಜಿಹ್ವಾಗ್ರೇ ವಸತೇ ಲಕ್ಷ್ಮೀಃ"**

- **ಪರೇಷಾಮುಪ ಕಾರಾರ್ಥಂ ಯಜ್ಜೀವತಿ ಸ ಜೀವತಿ** ...
ಋ. ಖಿಲ
ಯಾರು ತಮ್ಮ ಬದುಕಿನುದ್ದಗಲಕ್ಕೂ ಕನಸು ಮನಸಿನಲ್ಲಿಯೂ ಸ್ವಾರ್ಥವೆಣಿಸದೆ ಕ್ಷಣಕ್ಷಣದಲ್ಲೂ ಪರಹಿತ ಚಿಂತನೆಯನ್ನೇ ಮಾಡುವರೋ ಅವರ ಬದುಕು ಸಾರ್ಥಕ. ಹುಟ್ಟು ಸಾವುಗಳ ನಡುವೆ ಅಂತಹವರ ಬಾಳು ಅಜರ, ಅಮರ. **"ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್"** ಇದು ಅವರ ಮೂಲಮಂತ್ರ.

- **ಸಹನಾವವತು ಸಹನೌ ಭುನಕ್ತು**........................ ಋ॥
  ಒಟ್ಟಿಗೆ ವಾಸಿಸೋಣ. ಒಟ್ಟಿಗೆ ಆಹಾರ ಸೇವಿಸೋಣ. ಒಟ್ಟಾಗಿ ದುಡಿಯೋಣ. ಓಜಸ್ವಿಗಳಾಗಿ, ತೇಜಸ್ವಿಗಳಾಗಿ ವೀರ್ಯವಂತರಾಗಿ ಬಾಳೋಣ. ನಮ್ಮ ನಮ್ಮೊಳಗೆ ಮೇಲು, ಕೀಳು, ಬಡವ, ಬಲ್ಲಿದ ಎಂಬ ಕರಿನೆರಳು ಬೀಳದಿರಲಿ. ವೈರವಿದ್ವೇಷಗಳನ್ನು ಮರೆತು "**ವಯಂ ಸರ್ವೇ ಸೋದರಾಃ**" ಎಂಬ ಐಕ್ಯಮಂತ್ರವನ್ನು ಪಠಿಸುತ್ತಾ ಭ್ರಾತೃತ್ವದಿಂದ ಬಾಳೋಣ. ಜಾತಿಗಿಂತ ನೀತಿ, ನೀತಿಗಿಂತ ಪ್ರೀತಿಯನ್ನೇ ಗುರುತಿಸೋಣ.

- **ಆನೋ ಭದ್ರಾಃ ಕ್ರತವೋಯಂತು ವಿಶ್ವತಃ** ....
  ಋ.ಅ1ಅ6ವ15
  ಒಳ್ಳೆಯ ಆಚಾರ ವಿಚಾರಗಳು ಉತ್ತಮ ಸಂಸ್ಕೃತಿ ಸದ್ಬುದ್ಧಿ ನಮಗೆ ಎಲ್ಲ ಕಡೆಗಳಿಂದ ಬರಲಿ. ಅವುಗಳನ್ನು ಸ್ವಾಗತಿಸಿ ಮೈಗೂಡಿಸಿಕೊಳ್ಳೋಣ. ಹಳತಿನೊಂದಿಗೆ ಹೊಸತನ್ನು ಮೇಳೈಸಿಕೊಂಡು ಹಸನಾಗಿ ಬಾಳೋಣ.

- **ಅಸತೋ ಮಾ ಸದ್ಗಮಯ** ....
  ಬೃಹದಾರಣ್ಯಕೋಪನಿಷತ್
  ದುರ್ಮಾರ್ಗದಿಂದ ಸನ್ಮಾರ್ಗದತ್ತ ನಮ್ಮ ನಡೆಯಿರಲಿ. ಕತ್ತಲೆಯಿಂದ ಬೆಳಕಿನೆಡೆಗೆ ನಮ್ಮ ಗುರಿಯಿರಲಿ. ಮೃತ್ಯುವಿನಿಂದ ಅಮರತ್ವದೆಡೆಗೆ ನಮ್ಮ ಪಯಣ ಸಾಗಲಿ.

- **ಸಮಾನೀವ ಆಕೂತಿಃ ಸಮಾನಹೃದಯಾನಿ ವಃ** ....
  ಋಅ8ಅ8ವ49
  ನಮ್ಮ ಅಭಿಪ್ರಾಯಗಳು ಅನಿಸಿಕೆಗಳು ಸಮಾನವಾಗಿರಲಿ. ನಮ್ಮೊಳಗೆ ಭಿನ್ನಾಭಿಪ್ರಾಯಗಳು ಎಂದೂ ನುಸುಳದೇ ಸಮಾನ ಮನಸ್ಕರಾಗಿ ಸಾಧನೆಗೈಯ್ಯೋಣ.

- **ಏಕಂ ಸತ್ ವಿಪ್ರಾ ಬಹುಧಾವದಂತಿ** ....
  ಋಅ3ಅ3ವ22
  ನಮ್ಮ ಚರ್ಮ ಚಕ್ಷುಸ್ಸಿಗೆ ನಾಮರೂಪಾದಿಗಳಿಂದ ಭಗವಂತ ಭಿನ್ನ ಭಿನ್ನವಾಗಿ ಕಂಡರೂ ದೇವನೊಬ್ಬನೆ. ನಾಮ ಹಲವು. "**ಉಪಾಧಿ ಭೇದಾತ್ ರೂಪಭೇದಃ**" ಅವರವರ ಭಾವಕ್ಕೆ ಅವರವರ ಭಕುತಿಗೆ ಶಕ್ತ್ಯಾನುಸಾರ ತಕ್ಕ ವ್ಯವಹಾರ. "**ಏಕೋದೇವಃ ಸರ್ವಭೂತೇಷು ಗೂಢಃ**"

- **ಸತ್ಯಂ ವದ ಧರ್ಮಂಚರ** ....
  ತೈತ್ತಿರೀಯೋಪನಿಷತ್
  ಸತ್ಯವನ್ನೇ ನುಡಿ ಒಳ್ಳೆಯ ಕಾರ್ಯವನ್ನೇ ಮಾಡು. ಅಧ್ಯಯನದಿಂದ ಎಂದೂ ವಿಮುಖನಾಗದಿರು. ಗುರುವಿಗೆ ಇಷ್ಟವಾದ ಕಾಣಿಕೆ ನೀಡಿ ಕೃತಾರ್ಥನಾಗು. ಹೀಗೆ ಮುಂದುವರಿಯುತ್ತದೆ ದೀಕ್ಷಾಂತ ಉಪದೇಶ. ತೈತ್ತಿರೀಯೋಪನಿಷತ್ತಿನ ಅಣಿಮುತ್ತುಗಳಿವು. ಕೈತುತ್ತುಗಳು.

- **ಈಶಾವಾಸ್ಯಮಿದಂ ಸರ್ವಂ** ....
  ಈಶಾವಾಸ್ಯೋಪನಿಷತ್
  ಈ ಪ್ರಪಂಚದಲ್ಲಿ ಕಾಣುವ ಅಣುರೇಣು ತೃಣಕಾಷ್ಠವು ಭಗವಂತನದು. ನಮ್ಮ ಕರ್ಮಾನುಸಾರವಾಗಿ ಪ್ರಾಪ್ತವಾದುದನ್ನು ಮಹಾಪ್ರಸಾದವೆಂದು ಸ್ವೀಕರಿಸಬೇಕು. ಪರಸ್ವವನ್ನು ತೃಣವೆಂದು ಭಾವಿಸಿ ದೂರವಿಡಬೇಕು. "**ಯಲ್ಲಭಸೆ ನಿಜ ಕರ್ಮೋಪಾತ್ತ ವಿತ್ತಂ**" ಅದು ಮಾತ್ರ ನಮ್ಮದು. ತೇನ ವಿನೋದಯ ಚಿತ್ತಮ್.

ಆರ್ಥಿಕ, ಸಾಮಾಜಿಕ, ಸಾಂಸಾರಿಕ, ದೈಹಿಕ, ಮಾನಸಿಕ ವ್ಯಾವಹಾರಿಕವಾಗಿ ಗೊಂದಲಗೊಂಡ ಮನಸ್ಸಿಗೆ ಸಾಂತ್ವನ ನೀಡುವುದು ವೇದ. ಮಾನವನ ಅಭ್ಯುದಯಕ್ಕೆ ಏನೆಲ್ಲ ಅವಶ್ಯಕವೋ ಅವೆಲ್ಲ ವೇದಗಳಲ್ಲಿವೆ. ಧರ್ಮ ಕರ್ಮಗಳ ವಿವರಣೆಯೊಂದಿಗೆ ಅಲ್ಲಲ್ಲಿ ಅತ್ಯುತ್ತಮ ಸುಭಾಷಿತಗಳ ಉಪದೇಶದಿಂದ ನಮ್ಮನ್ನು ತಿದ್ದಿತೀಡಿ ಮಹದುಪಕಾರ ಮಾಡಿವೆ. ಇಂತಹ ಸಾವಿರಾರು ಸುಭಾಷಿತಗಳು ಸಾರೋದ್ಧಾರವಾಗಿ ವೇದಗರ್ಭಿತವಾಗಿವೆ.

ಅವೆಲ್ಲವನ್ನೂ ಉಲ್ಲೇಖಿಸುವ ಸಾಹಸ ನನ್ನದಲ್ಲ. ಲೇಖನ ವಿಸ್ತಾರ ಭಯದಿಂದ ಮಂತ್ರಗಳನ್ನು ಪೂರ್ಣವಾಗಿ ಬರೆಯದೇ ಪ್ರಾರಂಭದ ಪಾಠವನ್ನು ಮಾತ್ರ ಬರೆದಿದ್ದೇನೆ. ಮಂತ್ರಗಳ ಮುಂದೆ ಅಷ್ಟಕ ಅಧ್ಯಾಯ, ವರ್ಗ ಇತ್ಯಾದಿ ವಿವರಗಳಿವೆ.

ವೇದ ಪ್ರತಿಪಾದ್ಯಮಾನವಾದ ದಿವ್ಯ ಭವ್ಯ ರಮ್ಯ ಸಂದೇಶಗಳನ್ನು ಆಲಿಸಿ ಅರಿತು ಕಲಿತು ಕಲೆತು ಅದರಂತೆ ನಡೆದಾಗ ಇದೇ ಜನ್ಮ ಕಡೆ. ಇರಲಿ ಅತ್ತಕಡೆ ನಮ್ಮ ನಡೆ. ಬದುಕು ಕ್ಷಣಿಕ. ಅಷ್ಟರಲ್ಲೇ ಅದನ್ನು ಮಧುರವಾಗಿಸಲು ಪ್ರಯತ್ನಿಸೋಣ.

॥ ಓಂ ನಮೋ ಭಗವತೇ ಅಪೌರುಷೇಯಾಯ ವೇದಾಯ ವೇದ ಪುರುಷಾಯ ಚ ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಮಾಂಡೂಕ್ಯ

ವಿದ್ವಾನ್ ಯಲ್ಲಾಪುರ ಕೃಷ್ಣ ಶರ್ಮಾ
ಗಿರಿನಗರ, ಬೆಂಗಳೂರು

ಮಾಂಡೂಕ್ಯವೆಂಬುದು ಗಾತ್ರದಲ್ಲಿ ಕಿರಿದಾದ, ಅರ್ಥದಿಂದ ಹಿರಿದಾದ ಒಂದು ಉಪನಿಷತ್ತು. ಇದರಲ್ಲಿ ಹನ್ನೆರಡು ಮಂತ್ರಗಳಿವೆ. "**ಓಮಿತ್ಯೇತದಕ್ಷರಂ....... ಸರ್ವಮೋಂಕಾರ ಏವ**" ಎಂಬೀ ರೀತಿಯಲ್ಲಿ ಎಲ್ಲವೂ ಓಂಕಾರವೇ ಎಂಬ ಪ್ರತಿಜ್ಞೆಯೊಂದಿಗೆ ಈ ಉಪನಿಷತ್ತು ಆರಂಭವಾಗುತ್ತದೆ. "**ಅದ್ವೈತ ಮೋಂಕಾರ ಆತ್ಮೈವ**" ಪರಮಾತ್ಮ ತತ್ತ್ವವೇ ಓಂಕಾರದ ಅರ್ಥವೆಂಬೀ ನಿಗಮನದೊಂದಿಗೆ ಈ ಉಪನಿಷತ್ತು ಮುಗಿಯುತ್ತದೆ. ಈ ರಹಸ್ಯಾರ್ಥದ ವಿವರಣೆಯ ನಡುವೆ ಜಾಗ್ರತ್ (ಎಚ್ಚರ) ಸ್ವಪ್ನ (ಕನಸು) ಸುಷುಪ್ತಿ (ಗಾಢನಿದ್ರೆ) ಎಂಬೀ ಮೂರು ಅವಸ್ಥೆಗಳ ಚರ್ಚೆಯೂ ಇಲ್ಲಿ ಮುಖ್ಯವಾಗಿ ಬಂದಿದೆ. ನಮ್ಮ ದೈನಂದಿನ ವ್ಯವಹಾರಗಳೆಲ್ಲವೂ ಜಾಗ್ರದಾವಸ್ಥೆಯಲ್ಲಿ ಜರುಗುತ್ತವೆ. ಈ ಅವಸ್ಥೆಯಲ್ಲಿ ನಾವು ಮನೆ, ಮಠ, ಆಸ್ತಿಪಾಸ್ತಿ, ಕೃಷಿ ಉದ್ಯೋಗ, ಮಡದಿ ಮಕ್ಕಳು, ಹೋಮ ಹವನ, ಪೂಜೆ ಪಾಠ, ಕಾಳು ಕಡಿ, ದನಕರು, ದುಡ್ಡುಕಾಸು ಮುಂತಾದ ಸುಖ ಸಾಧನಗಳನ್ನು ಸಂಪಾದಿಸಿ ಅವುಗಳನ್ನು ಅನುಭವಿಸಿ ಸುಖ ಪಡುತ್ತೇವೆ. ಇದೇ ರೀತಿ ಜೀವನಿಗೆ ಕನಸಿನ ಪ್ರಪಂಚವೂ ಒಂದಿದೆ. ಹಿಂದಿನ ಹಾಗೂ ಇಂದಿನ ಜನ್ಮಗಳಲ್ಲಿ ನಾವು ಮಾಡಿದ ಸುಕೃತ, ದುಷ್ಕೃತಗಳ ಫಲರೂಪದಲ್ಲಿ ನಮಗಿಲ್ಲಿ ದೊರಕಿದ ಸುಖ ದುಃಖಗಳನ್ನು ಜಾಗ್ರದಾವಸ್ಥೆಯಲ್ಲಿ ನಾವು ಅನುಭವಿಸುತ್ತಿರುತ್ತೇವೆ. ಎಚ್ಚರದ ಹೊತ್ತಿನಲ್ಲಿ ನಮ್ಮ ಕಣ್ಣು, ಕಿವಿ, ಕೈ ಕಾಲುಗಳು ಹಾಗೂ ಮನಸ್ಸು ಚುರುಕಾಗಿದ್ದು ಏನಾದರೊಂದು ಚಟುವಟಿಕೆಯಲ್ಲಿ ತೊಡಗಿರುತ್ತವೆ. ಕನಸಿನ ಸಮಯದಲ್ಲಿ ಮನಸ್ಸು ಮಾತ್ರ ಚಟುವಟಿಕೆಯಿಂದಿದ್ದು ಹಲವು ಹತ್ತು ಬಗೆಯಲ್ಲಿ ವಿಷಯಗಳನ್ನು ಕಲ್ಪಿಸಿಕೊಂಡು ಆ ವಿಷಯಗಳ ಮೂಲಕ ತೈಜಸ ಜೀವನಿಗೆ ಸುಖ ದುಃಖಗಳ ಅನುಭವವನ್ನು ಒದಗಿಸುತ್ತದೆ. ಸುಷುಪ್ತಿಯಲ್ಲಿ ಮನಸ್ಸು ಇಂದ್ರಿಯಗಳೆಲ್ಲವೂ ತಣ್ಣಗೆ ಒರಗಿರುವುದರಿಂದ ಆಗ ಜೀವನಿಗೆ ಅದು ಬೇಕು, ಇದು ಬೇಡ, ಇನ್ನಷ್ಟು ಮತ್ತಷ್ಟು ಎಂಬಂತಹ ಬಯಕೆ ಹಂಬಲ ಹಪಹಪಿಕೆಯಾಗಲಿ, ನೋಡು, ಕೇಳು, ತಿನ್ನು ಕೊಡು, ಕೊಳ್ಳು, ಹೋಗು, ಬಾ ಮುಂತಾದ ಚೇಷ್ಟೆಗಳಾಗಲಿ, ಹಸಿವು ಬಾಯಾರಿಕೆಗಳ ಅರಿವಾಗಲಿ ಯಾವುದೂ ಇಲ್ಲದ್ದರಿಂದ ಸುಖದುಃಖಗಳ ಅನುಭವದ ಲವರೇಶವೂ ಇಲ್ಲದೇ ಅನಾಯಾಸದ ಸ್ಥಿತಿಯಲ್ಲಿರುತ್ತದೆ. ಈ ಅನಾಯಾಸವೆಂಬ ಆನಂದದಲ್ಲಿ ಮುಳುಗಿ ಕರಗಿ ಪರಮಾತ್ಮತ್ವದಲ್ಲಿ ಒಂದಾಗಿರುವಷ್ಟು ಹೊತ್ತು ಜೀವನು (ಪ್ರಾಜ್ಞನು) ಅರಿವಿನ ಮುದ್ದೆ, ಪ್ರಜ್ಞಾನ ಘನ, ಘನಪ್ರಜ್ಞನಾಗಿರುತ್ತಾನಂತೆ. ಸುಷುಪ್ತಿಯಲ್ಲಿ ತಾನು ಏನಾಗಿದ್ದೆ? ಎಲ್ಲಿದ್ದೆ? ಹೇಗಿದ್ದೆನೆಂಬುದೇನೂ ಅರಿವಿಗೆ ಬಾರದಿದ್ದರೂ ತನಿನಿದ್ದೆ ತಿಳಿದೆದ್ದೊಡನೆ, ಜೀವನು '**ಸುಖವಾಗಿ ಮಲಗಿದ್ದೆ**' ಎಂದು ಮಾತ್ರ ನೆನಪಿಸಿಕೊಳ್ಳುತ್ತಾನೆ. ಇಂದ್ರಿಯ ಮನಸ್ಸುಗಳ ಕಾರುಬಾರದ ಅಲ್ಲೋಲ ಕಲ್ಲೋಲಗಳೇನೂ ಇಲ್ಲದ್ದರಿಂದ ಸುಷುಪ್ತಾವಸ್ಥೆಯಲ್ಲಿ ಜೀವನು (ಪ್ರಾಜ್ಞನು) ನಿವಾತ - ನಿಷ್ಪಂದ - ದೀಪದಂತಿರುತ್ತಾನೆ. ಸಂಸಾರ ಬೀಜವಾದ ಮಾಯೆಯು ಅಂಟಿಕೊಂಡಿರುವದರಿಂದ ಎಚ್ಚರಕ್ಕೆ ಬಂದೊಡನೆ ಸಂಸಾರಕ್ಕಿಳಿಯುತ್ತಾನೆ. ವೇದಾಂತ ಶಾಸ್ತ್ರದ ಅರ್ಥಗಳ ಶ್ರವಣ ಮನನಾದಿಗಳಿಂದಲೂ, ಗುರೂಪದೇಶದಿಂದಲೂ ಕೂಡ '**ತತ್ತ್ವಮಸಿ**' ಮುಂತಾದ ಉಪನಿಷದ್ ವಾಕ್ಯಾರ್ಥಗಳ ದೃಢತರವಾದ ಸಂಸ್ಕಾರವೇರ್ಪಟ್ಟು '**ಅಹಂ ಬ್ರಹ್ಮಾಸ್ಮಿ**' ಎಂಬಂತಹ ಅರಿವು ಅನುಭವ ಮೂಡುವ ವರೆಗೂ ಜೀವನು ಸಂಸಾರದಲ್ಲಿ ಸುತ್ತುತ್ತಲೇ ಇರುತ್ತಾನೆ. ನಿಜವಾದ ಅರಿವು ಮೂಡಿದಾಗ, ತನ್ನ ಸ್ವರೂಪವನ್ನು ತನ್ನಲ್ಲೇ ಕಂಡುಕೊಂಡಾಗ ಜೀವನು ಆನಂದಘನನಾಗುತ್ತಾನೆ. ಹೀಗೆ ಆನಂದ ಘನನಾಗುವಿಕೆಯೇ ಮೋಕ್ಷ. ಈ ತುರೀಯಾವಸ್ಥೆಗೆ ಮತ್ತೆಂದೂ ಕುಂದಿಲ್ಲ ಎಂಬುದಾಗಿ ಉಪನಿಷತ್ತುಗಳು ತಿಳಿಸಿಕೊಡುತ್ತವೆ.

ಮಾಂಡೂಕ್ಯೋಪನಿಷತ್ತಿಗೆ ಪೂಜ್ಯ ಶ್ರೀ ಗೌಡಪಾದರು ವ್ಯಾಖ್ಯಾರೂಪದ ಕಾರಿಕೆಗಳನ್ನು ರಚಿಸಿದ್ದಾರೆ. ನಮಗಿಂದು ದೊರೆತಿರುವ ಅದ್ವೈತ ತತ್ತ್ವ ವ್ಯಾಖ್ಯಾಗ್ರಂಥಗಳ ಪೈಕಿ ಈ ಕಾರಿಕಾಗ್ರಂಥವೇ ಪ್ರಾಚೀನವೆಂದು ಹೇಳುತ್ತಾರೆ. ಮಾಂಡೂಕ್ಯ ಕಾರಿಕೆಗಳು ಆಗಮ ಪ್ರಕರಣ, ವೈತಥ್ಯ ಪ್ರಕರಣ, ಅದ್ವೈತ ಪ್ರಕರಣ ಮತ್ತು ಅರಾತ ಶಾಂತಿ ಪ್ರಕರಣವೆಂದು ನಾಲ್ಕು ಭಾಗವಾಗಿ ವಿಂಗಡಿಸಲ್ಪಟ್ಟಿವೆ. ಅರಾತವೆಂದರೆ ದೊಂದಿ, ಪಂಜು, ಹಿರಾಲು. ಆರಾತವು ದ್ವೈತವಾದದ, ದ್ವೈತ ಪ್ರಪಂಚದ ಪ್ರತೀಕ. ಜಾಗ್ರತ್ ಸ್ವಪ್ನ ಸುಷುಪ್ತಿ (ಎಚ್ಚರ, ಕನಸು, ಗಾಢನಿದ್ರೆ) ಎಂಬೀ ಮೂರು ಅವಸ್ಥೆಗಳ ವಿಶ್ಲೇಷಣೆ ಆಗಮ ಪ್ರಕರಣದಲ್ಲಿ ಬಂದಿದೆ. ಎರಡನೆಯ ವೈತಥ್ಯ ಪ್ರಕರಣದಲ್ಲಿ ಕನಸಿನ

ವಿಚಾರವಿದೆ. ಜಾಗ್ರದಾವಸ್ಥೆಯಲ್ಲಿ ಜೀವನನ್ನು ವಿಶ್ವನೆಂದೂ, ಕನಸಿನಲ್ಲಿ ತೇಜಸನೆಂದೂ, ಸುಷುಪ್ತಿಯಲ್ಲಿ ಪ್ರಾಜ್ಞನೆಂದೂ ಕರೆಯಲಾಗಿದೆ. ಬಾಹ್ಯ ಪ್ರಪಂಚವೂ, ಸ್ವಪ್ನ ಪ್ರಪಂಚವೂ ಸುಳ್ಳು. ಮೂರು ಅವಸ್ಥೆಗಳಲ್ಲೂ ಅನುಸ್ಯೂತವಾಗಿರುವ ಆತ್ಮ ವಸ್ತುವೊಂದೇ ಸತ್ಯವೆಂದೂ ಶಾಸ್ತ್ರ ಪ್ರಮಾಣ ಹಾಗೂ ಯುಕ್ತಿಯಿಂದ, ಮೂರನೆಯ ಅದ್ವೈತ ಪ್ರಕರಣದಲ್ಲಿ ಸ್ಥಾಪಿಸ ಲಾಗಿದೆ. ನಾಲ್ಕನೆಯ ಅಲಾತ ಶಾಂತಿ ಪ್ರಕರಣದಲ್ಲಿ ದ್ವೈತಗಳ ಶಂಕೆಗೆ ಶಾಸ್ತ್ರವಚನ ಹಾಗೂ ಯುಕ್ತಿಗಳಿಂದ ಸಮಾಧಾನ ಹೇಳಿ ಅದ್ವೈತವನ್ನು ಸ್ಥಾಪಿಸಲಾಗಿದೆ.

ನಮ್ಮ ಹಿಂದಿನ ಹಾಗೂ ಇಂದಿನ ಜನ್ಮಗಳಲ್ಲಿ ನಾವು ಮಾಡಿದ ಸುಕೃತ - ದುಷ್ಕೃತ ಪುಣ್ಯಕರ್ಮ, ಪಾಪಕರ್ಮಗಳ ಫಲ ರೂಪದ ಸುಖ, ದುಃಖ, ನೋವು, ನಲಿವುಗಳನ್ನು ಅನುಭವಿಸುವುದಕ್ಕೆ ಜಾಗ್ರದಾವಸ್ಥೆಯು ಮೀಸಲಾಗಿದೆ. ಸ್ವಪ್ನ ಸುಷುಪ್ತಿಗಳು ಯಾಕೆ? ಜೀವನಿಗೆ ಈ ಎರಡು ಅವಸ್ಥೆಗಳಿಂದ ಪ್ರಯೋಜನ ವೇನು? ಎಂಬುದಿಲ್ಲಿ ಪ್ರಶ್ನೆ. ಲೌಕಿಕ ವ್ಯವಹಾರಗಳಲ್ಲಿ ದಿನವಿಡೀ ತೊಡಗಿರುವುದರಿಂದ ಕೈ ಕಾಲು, ಮೈ, ಮನಸ್ಸುಗಳಿಗಾಗಿರುವ ಬಳಲಿಕೆಯನ್ನು ನೀಗಿಕೊಳ್ಳಲು ಸುಷುಪ್ತಿಯು ಬೇಕು ಎನ್ನಬಹುದು. ಕನಸಿನಿಂದೇನು ಪ್ರಯೋಜನ? ಕನಸಿನಲ್ಲಿ ಕಾಣುವ ನೋಟಗಳು ಬರೀ ಸುಳ್ಳು, ಮಿಥ್ಯೆ. ಸ್ವಪ್ನದಲ್ಲಿ ಅನುಭವಿಸುವ ದೃಶ್ಯಗಳಿಂದ ಕಾಸಿನ ಪ್ರಯೋಜನವೂ ಇಲ್ಲವಲ್ಲ ಅಂದರೆ ಸ್ವಪ್ನದ ಮಿಥ್ಯಾತ್ವ ದೃಷ್ಟಾಂತದಿಂದ ಎಚ್ಚರದ, ಜಾಗ್ರದಾವಸ್ಥೆಯ, ನಮ್ಮೆದುರಿ ಗಿರುವ, ಲೌಕಿಕ ಪ್ರಪಂಚವೂ ಕೂಡ ಮಿಥ್ಯಾ, ಮಾಯಾಕಲ್ಪಿತ, ಅಜ್ಞಾನ ವಿಜೃಂಭಿತವೆಂದು ತಿಳಿಸುವುದೇ ಕನಸಿನ ಪ್ರಯೋಜನವೆನ್ನಬಹುದು. ಅಂತಃಕರಣಕ್ಕೆ ಅಂಟಿರುವ ಅನಾದಿಯಾದ ಅವಿದ್ಯೆಯ ಆವರಣ ಶಕ್ತಿಯ ಪ್ರಭಾವ ದಿಂದಾಗಿ ಈ ಪ್ರಪಂಚವು ಸತ್ಯವೆಂದು ನಾವು ಭ್ರಮಿಸಿದ್ದೇವೆ. ಸ್ವಪ್ನ ಪ್ರಪಂಚವು ಕನಸಿನ ಸಮಯದಲ್ಲಿ ನಿಜವೆಂದೇ ನಾವು ಗ್ರಹಿಸುತ್ತೇವೆ. ಎಚ್ಚರವಾದೊಡನೆ ಅದು ಸುಳ್ಳೆಂಬುದು ನಮಗೆ ಮನದಟ್ಟಾಗುತ್ತದೆ. ಅಂತೆಯೇ ಬಾಹ್ಯ ಪ್ರಪಂಚವೂ ಕೂಡ ಮನಃಕಲ್ಪಿತವೇ ಆದುದರಿಂದ ಮನಃಕಲ್ಪಿತವಾದ ಸ್ವಪ್ನದಂತೆಯೇ ಇದೂ ಮಿಥ್ಯೆಯೇ ಸರಿ ಎಂದು ತಿಳಿಸಿಕೊಡು ವುದೇ ಕನಸಿನ ಪ್ರಯೋಜನ. ಅಷ್ಟೇ ಅಲ್ಲ, ಸಂಚಿತವನ್ನು ಸವೆಯಿಸುವುದೂ ಕೂಡ ಕನಸಿನ ಇನ್ನೊಂದು ಪ್ರಯೋಜನ ವೆಂದು ಹೇಳುತ್ತಾರೆ. ಆಹಾರ ದೋಷ ಮಾತ್ರವೇ ಕನಸಿಗೆ ಕಾರಣವಲ್ಲ. ಆಹಾರದೋಷವೇನೂ ಇಲ್ಲದೇ ಇದ್ದಾಗಲೂ ಕೂಡ ಕನಸು ಬೀಳುವುದುಂಟು. ಕಾರಣ, ಕನಸುಗಳ ಅನುಭವದಿಂದಲೂ ಸಹ ನಮ್ಮಲ್ಲಿ ಸಂಚಿತವಾಗಿರುವ ಪಾಪ ಪುಣ್ಯಗಳ ಮೊತ್ತವು ಅಷ್ಟಿಷ್ಟು ಖರ್ಚಾಗುತ್ತಿರತ್ತದೆಂದು ಒಪ್ಪಬೇಕಾಗಿದೆ.

ಎಚ್ಚರದ ಹಾಗೂ ಕನಸಿನ ಪ್ರಪಂಚದ ಸಂಬಂಧವಿರುವುದು ದೇಹ, ಇಂದ್ರಿಯ, ಮನಸುಗಳಿಗೆ ಮಾತ್ರವೇ ಹೊರತು ಆತ್ಮ ನಿಗೆ ಸುತರಾಂ ಪ್ರಪಂಚದ ಸಂಬಂಧವಿಲ್ಲವೆಂಬುದನ್ನು ಸುಷುಪ್ತಿಯ ದೃಷ್ಟಾಂತದಿಂದ ಕಂಡುಕೊಳ್ಳಬಹುದು. ಸುಷುಪ್ತಿಯಲ್ಲಿ (ಗಾಢನಿದ್ರೆ ತಲೆನಿದ್ದೆ) ಜೀವನು ತನ್ನ ಸ್ವಸ್ವರೂಪದಲ್ಲಿ ಲೀನನಾಗಿರುವುದರಿಂದ ಇಂದ್ರಿಯ ಮನಸ್ಸು ಗಳ ಸಂಬಂಧವೇ ಕಡಿದು ಹೋಗಿರುವುದರಿಂದ ಆಗ ಜೀವನಿಗೆ ಸುಖ ದುಃಖಗಳ ಅನುಭವವಿರುವುದಿಲ್ಲ. ಸುಷುಪ್ತಿ ಯೆಂದರೆ ಜೀವನ ಅನಾಯಾಸ ಸ್ಥಿತಿ, ಆತ್ಮನ ನಿಜಸ್ಥಿತಿ. ಸಂಸಾರ ಬೀಜವಾದ ಮಾಯೆಯು, ಬೀಜನಿದ್ರೆಯು, ಇನ್ನೂ ಅಂಟಿಕೊಂಡಿರುವುದರಿಂದ ನಿದ್ದೆ ತಿಳಿದೆದ್ದೊಡನೆ ಅಂತಃ ಕರಣದ ಸಂಬಂಧದಿಂದಾಗಿ ಜೀವನು ಮತ್ತೆ ಸಂಸಾರ ಕ್ಕಿಳಿಯುತ್ತಾನೆ. ದೇಹೇಂದ್ರಿಯ ಮನಸ್ಸುಗಳ ಸಂಬಂಧ ದಿಂದಾಗಿ ಎಚ್ಚರ, ಜಾಗ್ರದಾವಸ್ಥೆ ಹಾಗೂ ಕನಸಿನ ಸ್ಥಿತಿಯಲ್ಲಿ ಸ್ವಪ್ನಾವಸ್ಥೆಯಲ್ಲಿ ಜೀವನಿಗೆ ಸುಖ ದುಃಖಗಳ ಅನುಭವವಾಗು ತ್ತದೆ. ಸುಷುಪ್ತಿಯ, ಗಾಢನಿದ್ರೆಯ ಸ್ಥಿತಿಯಲ್ಲಿ ಜೀವನಿಗೆ ಅಂತಃಕರಣದ ಸಂಬಂಧವಿಲ್ಲದ್ದರಿಂದ ಸುಖದುಃಖಗಳ ಅನುಭವವಿಲ್ಲ. ಆಗ ಜೀವನು ಯಾವುದೇ ಬಗೆಯ ಅನುಭವದ ಗೊಂದಲ, ಕಿರಿಕಿರಿಯೂ ಇಲ್ಲದ ಅನಾಯಾಸ ಸ್ಥಿತಿಯಲ್ಲಿದ್ದನೆಂದು ಹೇಳಬೇಕು. **'ನಾನು ಸುಖವಾಗಿ ಮಲಗಿದ್ದೆ'** ಎಂಬುದು ಅನಾಯಾಸ ಸ್ಥಿತಿಯ ಊಹೆಯೆಂದು ಹೇಳುತ್ತಾರೆ. ತನ್ನಲ್ಲಿ ತನ್ನನ್ನು ಕಂಡುಕೊಳ್ಳುವುದೆಂದರೆ ಅನಾಯಾಸ ಸ್ಥಿತಿಯಲ್ಲಿರುವಿಕೆ. ಹೀಗೆ, ಅವಸ್ಥಾತ್ರಯದ ಪರಿಶೀಲನೆಯಿಂದ ಆತ್ಮ ಸ್ವರೂಪವನ್ನರಿತು ಸಂಸಾರ ಬೀಜ ವೆಂಬ ಮಾಯಾಶಕ್ತಿಯನ್ನು ಅಂತಃಕರಣದಿಂದ ತೊಡೆದು ಹಾಕಿದಾಗ ಜೀವನಿಗೆ ಸ್ವಸ್ವರೂಪಾವಸ್ಥಿತಿ ಪ್ರಾಪ್ತವಾಗುತ್ತದೆ. ಇದುವೇ ತುರೀಯಾವಸ್ಥೆ, ಸಂಸಾರದಿಂದ ಬಿಡುಗಡೆ. ತಾನೇ ತಾನಾಗಿರುವಿಕೆ, ತಾನೇ ತನ್ನನ್ನು ಅರಿಯುವಿಕೆ. **ಇದುವೇ ಮೋಕ್ಷವೆಂದು ಹೇಳುತ್ತಾರೆ.** ಈ ಎಲ್ಲದರ ಪ್ರತಿಪಾದನೆಯೇ ಮಾಂಡೂಕ್ಯ ಉಪನಿಷತ್ತಿನ ಉದ್ದೇಶ.

A.R.S.P.U. College

The Prime Institution

Sri A.R.S.P.U. College is located in the remote part of Malenadu. In Koppa Taluk, 18 kms from Sringeri, lies the village of Hariharapura - that spells tranquility with its abundance of greenery and here is this institution located. The place is renowned as cultural landscape with Sri Math and His Holiness Sri Sachchidananada Saraswathi Swamiji to be the part of this world.

"Education is discipline for the adventure of life". Education is an important institution in any modern or modernizing society. It should be available to all. With this prime intention, Hariharapura Proudhashala came into existence in 1962. A great effort was made by Proudhashala Samithi to bring education to the masses. Later in 1979, the institution registered the status of a Pre-University College and was renamed Sri Abhinava Ramananda Saraswathi Pre-University college.

Since started, Sri A.R.S.P.U.C. has laid emphasis on spreading knowledge, instilling a sense of purpose and developing social consciousness besides its commitment to provide quality based education. The institute has been doing yeoman service to the public at large by exposing them to the world of education.

It is noticed that this institute is not a college for education alone but a



disciplined and cultural centre for the students from the ordinary background and this has made the institution stand distinct and is ranked one of the best in Chickmagalur District.

The institution has a very good infrastructure with a big playground that marks a difference in the vicinity.

Moral courage and strength which is far better than bulging biceps and steel like nerves, comes through selfless service and yearning for the well being of others. In fact, the staff happens to be so. The institution is blessed with highly merited and dedication oriented professionals on the staff. Some are deemed to be the state resource persons and authors.

Indian education system is often criticized for giving less importance to creativity, practicality and self-expressions for the students. In this institution scope is provided for both knowledge and creativity through various platforms. Literary, Eco and Science clubs do exist here.

The college brings out a Souvenir **"Sahyadri Sourabha"** every year to make the participation of students more practical and has made many of the talents come to exhibit.

Aiming at exploring the role of the English language and technical studies in education, special training classes are being conducted in the campus. (Computer Science is included as an optional subject for commerce students).

Yogasana - Dhyana - Pranayama camps are regularly organized to inculcate physical and mental emotional abilities among the students.

The college has reached new heights both in academics and co-curricular activities. the college stands reputed presenting good results every year (94% this year). The students have made it a routine to represent the institution at state level sports and cultural activities.

The institution is being managed by an eminent and well organized Proudha

shala Samiti with His Holiness, Sri Sri Sachchidananda Saraswathi Swamiji as the Hon. Chairperson.

The management committee feels elated to see their students earning a prosperous life and trusts that the Institution will continue to excel in the years to come with the blessing of deity Sri Sharadamba and His Holiness.

Report by:
Mohan prakash
Dayamananda B.P.
Anna Rosy D. Almedia

ದಶ ಧರ್ಮಂ ನ ಜಾನಂತಿ ಧೃತರಾಷ್ಟ್ರ ನಿಬೋಧ ತಾನ್ । ಮತ್ತಃ ಪ್ರಮತ್ತ ಉನ್ಮತ್ತಃ ಶ್ರಾಂತಃ ಕ್ರುದ್ಧೋ ಬುಭುಕ್ಷಿತಃ ॥
ತ್ವರಮಾಣಶ್ಚ ಲುಬ್ಧಶ್ಚ ಭೀತಃ ಕಾಮೀ ಚ ತೇ ದಶ । ತಸ್ಮಾದೇತೇಷು ಸರ್ವೇಷು ನ ಪ್ರಸಜ್ಜೇತ ಪಂಡಿತಃ ॥

(ಮಹಾಭಾರತ, ಉದ್ಯೋಗ, 22-101,102)

ಧೃತರಾಷ್ಟ್ರ, ಈ ಹತ್ತು ಜನರಿಗೆ ಧರ್ಮವು ತಿಳಿಯದು. ಅವರು ಯಾರೆಂದರೆ; ಅಹಂಕಾರಿ, ಅಮಲೇರಿದವನು, ಹುಚ್ಚ, ಬಳಲಿದವನು, ಕ್ರೋಧಗೊಂಡವನು, ಹಸಿವಾದವನು, ಅವಸರದಲ್ಲಿರತಕ್ಕವನು, ಲೋಭಿ, ಭೀತ ಮತ್ತು ಕಾಮಿ ಆದ್ದರಿಂದ ಪಂಡಿತನು ಇಂಥವರ ಸಹವಾಸ ಮಾಡಬಾರದು

ನ ವಿದ್ಯಯಾ ಕೇವಲಯಾ ತಪಸಾ ವಾऽಪಿ ಪಾತ್ರತಾ । ಯತ್ರ ವೃತ್ತಮಿಮೇ ಚೋಭೇ ತದ್ಧಿ ಪಾತ್ರಂ ಪ್ರಕೀರ್ತಿತಮ್ ॥

(ಯಾಜ್ಞವಲ್ಕ್ಯ, 1-200)

ಬರೀ ವಿದ್ಯೆಯಿಂದಾಗಲೀ, ತಪಸ್ಸಿನಿಂದಾಗಲೀ ಯಾರೂ 'ಪಾತ್ರ'ನೆನಿಸುವುದಿಲ್ಲ,
ಯಾರಲ್ಲಿ ನಡತೆ, ವಿದ್ಯೆ ಮತ್ತು ತಪಸ್ಸು ಇರುತ್ತವೆಯೋ ಅವನೇ ಸುಪಾತ್ರ

With Pranams to Swamiji

P. Ramalakshmi
Patanjali & Co., Chennai

Pranams to

Sri Sri Guruji

H. Sridhar

With Pranams to Swamiji

BHOOMI
CONSTRUCTIONS & DEVELOPERS
Land Developers & Contractors

19/1, 1st Main Road, Above Vijaya Bank
Behind CBI, Ganganagar, Bangalore 560 032
Tel: 41284055

With Pranams to Sri Sri Swamiji

ESTD: 15.04.1979 Phone: 26611141 / 22956419/22956420

SIR M. VISVESVARAYA CO-OPERATIVE BANK LIMITED

Corporate Office, #109, Shankaramutt Road, Shankarapuram, Bangalore - 4
E-mail: visweshwaraiah@dataone.in

CREDIT FACILITIES AVAILABALE FOR MEMBERS/CUSTOMERS

1. **IMMOVABLE PROPERTY LOAN** - for construction, Purchase of property, Purchase of Site, (including cost of registration and stamp duty) Re-payment of Debts, Higher Education and Marriage at attractive rate of interest.
2. **BUSINESS LOANS/INDUSTRIAL LOAN** - Term loan facility for purchase of equipments / machineries, CC facility for working capital.
3. **VEHICLE LOAN/HPS** - Two & Three Wheelers - 75% and four Wheelers - 90%
4. **GOLD LOAN** - upto 75% on valuation (upto Rs. 5 lakhs) with increased rate per gram
5. **PERSONAL LOANS/USL** - for the purpose of Domestic, Education, Housing, Business and others (conditions apply) upto Rs. 1 lakh.
6. **EDUCATIONAL LOAN** - (for higher studies in India & Abroad) - upto Rs. 8 lakhs.
7. **GOVT. SECURITY LOAN/NSC** - 75% on the face value.

All the above loans are available at very competitive rate of interest and no hidden cost

For any facilities/services please contact the following Branches / G.M. Office:

Kumarapark West - 22956401/402, Shankaramutt Road - 22956403/404/405, Rajajinagar - 22956406/407/408, J.P. Nagar - 22956409/410, BSK III Stage - 22956411/412, Vijayanagar - 22956413/414, Kengeri Satellite Town - 22956415, mathikere - 22956416, BTM Layout - 22956417/418, G.M.Office - 22428246

BOARD OF MANAGEMENT

OFFICE BEARERS

Sri. K.N. Venkatanarayana,
President

Dr. R.V. Jayathirtha
Vice-President

DIRECTORS

Sri. H.K. Nanjundaswamy
Sri. V.R. Gowrishankar
Sri. Ramananda
Sri. H.S. Shivashankar
Sri. K.S. Viswananda
Sri. D.S. Honnappa

Sri. H.R. Gopinath
Sri. Shankaranarayana Rao
Sri. B.S. Sripathi Rao
Sri. B. bhagavan
Sri. K.S. Nagaraj
Smt. K.P. Bharathi

Sri. H.K. Srinivas
Chief Executive Officer

Sri. H.K. Chandrashekar
General Manager

With Pranams to Sri Sri Swamiji

R. Seshan & R. Ramaseshan

SESHA METAL WORKING TOOLS
&
SESHA METAL FORMING TOOLS

No. 15, SIDCO Industrila Estate
Phase - III, Hosur - 635 126
Ph: 04344 - 276248, 277308

Manufacturers of
Precision Tungsten Carbidedies,
Tools,
Jigs & Fistures and
Various Toolings in Carbide,
All types of Carbide Toolings

With Pranams to Sri Sri Swamiji

Hare Krishna Residency

No. 256, Amar Jyothi Layout, IBM Road, Near Millennium Motors, Domlur, Bangalore - 560071
Ph: 4141 8080 Mobile: 94488 52142. Email: info@harikrishnaresidency.com

Harekrishna Residency luxury serviced apartments Bangalore is one of the leading providers of quality living, relocation and transit solutions to corporate world-wide. Harekrishna Residency is a brand new independent complex offering full services to our guests. A truly private space, comforting ambience in a designer serviced apartment, which is possibly the next best thing to your home.

We offer 32 double bedroom suites. The strategic location of Harekrishna Residency is the unique selling proposition, as it is off Airport Road in the beginning of outer ring road. Bulk bookings for the corporate are available to suite the business interest of Bangalore.

Our resident staff is available to meet all the needs of the guests while maintaining a secure and attractive environment. Feel at home and strive to reflect your own style and requirements.

Amenities

- Multi-channel Cable TV
- STD/ISD direct dialling
- Wi Fi / Broadband connectivity in all rooms
- Room service
- Travel desk
- Full power backup
- Laundry service
- Credit cards accepted
- Doctor on call
- 24-hour checkout
- Side walk cafe
- 24 hour hot / cold water
- Car parking/ two wheeler parking available

www.harikrishnaresidency.com

Pranams to

Sri Sri Swamiji

K. Satheesh

Dharmadhikari, Chennai

With Pranams to Sri Sri Swamiji

K. Ashok Malli., B.E.

AMRUTHESH INDUSTRIES

C-13. Industrial Estate, Rajajinagar
Bangalore 560 044
E-mail: amrutesh@vsnl.net

An ISO 9001 : 2000/TS - 16949 Certified Company

Manufacturers of
Precision Turned Components

www.amruthesh.com

With Pranams to Sri Sri Guruji

25 YEARS
1979 - 2004

S.M. BALIGA & CO.

#52, R.V. Road, Near R.V. Teachers' College
Basavangudi, Bangalore 560 004
Ph: 26572296, 26572297. Fax: 26572298
E-mail: smbaliga2005@vsnl.net

Distributors for Gunnebo India Ltd., Mumbai
(For a safer world)
Formerly Steelage Industries Ltd.

Branches

Mysore
No. CH-56, 1st Main
(Brigade Road,
Saraswathipuram
Mysore - 570 009
Ph: 0821 - 2541754

Mangalore
Gulabi, Sripad Enclave
Shop No. G-7
Navbharath Circle
Mangalore 570 003
Ph: 0824 - 2495567

Coimbatore
T.M. House, 92, T.V. Swamy Road (West), R.S. Puram
coimbatore 641 002. Ph: 0422 - 2550571

With Pranams to Sri Sri Swamiji

Fax: 080 - 26626258/26610272
E-mail : jyothyindu@sancharnet.in

ESTD : 1971

Off : 26679697
Res : 26677852
Fty : 26662353

JYOTHY INDUSTRIES

MECHANICAL & CHEMICAL ENGINEERS

Manufacturers of:

Chemical, Pharmaceutical, Food and Canning, Dairy Brewery and Distillery Equipments

OFFICE: No. 31, Pampamahakavi Road, Bangalore 560 004.
FACTORY: No. 21/10A, Konanakunte Cross, Kanakapura Road, Bangalore 560 062

JYOTHY GROUP

JYOTHY INDUSTRIES
Estd. 1971

JYOTHY INDUSTRIAL PLASTICS
Injection Moulded Plastic components

SRI SHARADA INDUSTRIES
S.S. Fabrications

- **JYOTHY CHARITABLE TRUST**
- **JYOTHY KENDRIYA VIDYALAYA** (CBSE Syllabus & Kannada State Syllabus)
- **JYOTHY COMPOSITE JUNIOR COLLEGE**
- **JYOTHY KALA KENDRA**
- **MALLIKARJUNA VEDA SAMSKRUTHA PATHASHALA**
- **KRISHNA YAJURVEDA KANNADA PRAKASHANA**
- **JYOTHY GIRLS HOSTEL**
- **JYOTHY AQUATIC**

With Pranams to Sri Sri Swamiji

AIR CARGO HELPERS

(Customs House Agent)

No. 35, Abhishek Amma Building
MES Colony, Knena Agrahara
Airport Main Road, Bangalore 560 017
Tel: 080 2523 7440. Mobile: 94498 30156

With Pranams to Sri Sri Swamiji

SRI SATHYANARAYANA TIMBER DEPOT

Dealers in all types of Woods

No.4-7/9, Bendre Nagar
Subramanyapura Main Road, BSK 2nd Stage
Kadirenahalli, Bangalore - 560 070
Tel: 26660328

BRANCH: No. 34, New No. 114, Doddakallasandra
Uttarahalli Hobli, Bangalore

With Pranams to Sri Sri Swamiji

L.A. Ravisubrahmanya

No. 380, 1st 'A' Main Road, Girinagar, Bangalore 560 085
Ph: 26723030, (M) 98453 95380

With Pranams to His Holiness

Amit Industrial Corporation

Dealers & Suppliers of : IRON & STEEL

Branch Office: 16/17, New Gangama Chari Street,
Motinagar, Banaglore - 560 002
Tel: Office - 26707045

With Pranams to Sri Sri Swamiji



Balaji D

No. 5, T.C Palya, K.R. Puram, Bangalore 560 016

Mobile: 98440 40593

With Pranams to His Holiness



T.S. Mahalingam & Sons (Bangalore)

3285, 12th Main, HAL 2nd Stage, Indiranagar, Bangalore 560 038

Tel: 41521212 / 41521221 / 25200104 Fax: +91 80 41320040

With Pranams to Sri Sri Guruji

Rakesh
Builders | Developers

Anu Arcade, 4th Floor, No. 12, C.M.H. Road
Indiranagar, Bangalore 560 038
Tel: +91 80 41521033
E-mail: rbd@airtelbroadband.in

With Pranams to Swamiji

BRAND MOVERS
Digital flex & Vinyl Prints
Backlit & Frontlit Signboards

Consistent Quality of Prints ● Timely Deliveries ● Fair Cost per Print

All prints are on INFINITI Solvent Ink Printer
A place for all your advertising needs
Contact: 99450 50006, 99805 40008

366/21/33, 80 Ft. Main Road, Opp. Prarthana School
Padmanabhanagar, Bangalore 560 070. Ph: 080 26393837

With Pranams to Sri Sri Guruji

Impact Financial Services

TF3, No. 13, Infantry Road
City Point, Bangalore 560 001

With Pranams to Swamiji

SRI VINAYAK ASSOCIATES

Indirect Tax Consultant

#244, "Sri Vinayaka Krupa", (Cellar) 1st Cross,
BSK 3rd Stage, 3rd Phase, 2nd Block,
Bangalore 560 085. Tel: 26694807, 41501925
E-mail: srivinayak_associates@yahoo.co.in

With Pranams to Sri Sri Swamiji



S.R. MEDICALS

#1, Maruti Nilaya, Konerappa Building,
Amruthahalli, Bangalore - 560 092. Tel: 3208695

With Pranams to His Holiness

JYOTHI GLASS, PLYWOODS & TIMBERS

Dealer in Glass, Plywood & Timbers

No.9/81-02, Subramanyapura Main Road
Kadirenahalli, BSK 2nd Stage, Bangalore 560 070

Tel: 26694618

With Pranams to His Holiness

Brahmi Chit-Fund Pvt. Ltd.

No. 20/1, 2nd Cross, Chikkanna Garden, Shankarapuram
Bangalore 560 004. Tel: 22423166

GROW WELL WITH BRAHMI

Chit Value	Period in Months	Monthly Instalments
Rs. 50,000/-	25	Rs. 2,000/-
Rs. 1,00,000/-	40	Rs. 2,500/-

Two New Chits Starting Shortly Enroll and Enjoy the benefits

With Pranams to His Holiness

SRI MAHAGANAPATHI SOUHARDA PATHINA SAHAKARI NIYAMITHA

No. 20/1, Chikkanna Garden, 2nd Cross, Shankarapuram
Bangalore 560 004. Tel: 22422318

Attractive New Rates of Interest from 15-12-2007

91 days to 180 days	7%
181 days to 12 months	8%
13 months to 3 years	10%
Above 3 years	11%

Additional 0.5% for Senior Citizens

Sri. N. Ramakrishna Sharma
President

Sri. K. Sheshaprasad
Vice President

With Pranams to Sri Sri Swamiji

SRI SAI TRADERS

Dealers in all Paints, Wood, Tiles & Hardware

No. 131, BEML Layout, 4th Phase, J.N. Street
Rajarajeshwarinagar, Bangalore 560 098. Tel: 28600564

With Pranams to His Holiness

THE NATIONAL CO-OPERATIVE BANK LIMITED

Admn. Office: 53/1, Bull Temple Road, Bangalore 560 019. Phone: 26607778, 22421998 Fax: 26619950

Financial position as on 30-09-2007

	(Rs. in lakhs)
Share Capital	1023.66
Reserves	4016.13
Deposits	31819.29
Advances	17886.38
Investment	17865.32
Working Capital	37675.37
Profit before Tax & Provision (31-03-2007)	516.10
Net Profit (31-03-2007)	344.80
Gross NPA (31-03-2007)	8.17%
Net NPA (31-03-2007)	Zero

1. The Bank has completed 31 years of dedicated service with the Convenient Banking hours in the morning and evening.
2. Winner of 'Best Urban Co-operative Bank in Karnataka' Award for the years 2003-04 and 2005-05.
3. 2nd biggest Co-operative Bank in Karnataka.
4. 'A' Audit classification for the past 30 years
5. Grade I Bank as classified by R.B.I.
6. Cheque drawing arrangements through ICICI Bank.
7. Authorised by Reserve Bank of India to accept and maintain NRE accounts.
8. Over 29000 satisfied members and 1,50,000 customers across 7 branches in different parts of the Bangalore City.

Board of Directors

Sri. K.N. Shivarama Shastry	Sri. H.R. Suresh	Sri. G.S. Satyanarayana
Chairman	Vice Chairman	Chief Executive Officer

With Pranams to Sri Sri Swamiji



SRI PADMALAYA ENTERPRISES

Dealers in Cement

No. 126/3, Subramanyapura Main Road
Chikkakallasandra, Bangalore 560 061

ಲಿವ್ ಹ್ಯಾಪಿಲಿ ಫೌಂಡೇಷನ್

ಈ ಫೌಂಡೇಷನ್ ಮೂಲಕ ಶಿಕ್ಷಣ, ಆರೋಗ್ಯ, ಆಧ್ಯಾತ್ಮಿಕ ಈ ಮೂರು ಕ್ಷೇತ್ರದಲ್ಲಿ ಸಮಾಜದ ಸೇವೆಯನ್ನು ಮಾಡಲಾಗುತ್ತಿದೆ

ಅನುಷ್ಠಾನದಲ್ಲಿರುವ ಯೋಜನಗೆಳು

ಜ್ಞಾನ ಜ್ಯೋತಿ ಯೋಜನೆ: ಈ ಯೋಜನೆಯ ಅಡಿಯಲ್ಲಿ ವೃತ್ತಿಪರ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರತಿವರ್ಷವೂ ಸಾಧ್ಯವಾದಷ್ಟು ಅನಾಥ, ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಮಕ್ಕಳನ್ನು ದತ್ತು ತೆಗೆದುಕೊಂಡು ಸಂಪೂರ್ಣವಾಗಿ ಅವರಿಗೆ ಉಚಿತ ಶಿಕ್ಷಣವನ್ನು ನೀಡಲಾಗುತ್ತಿದೆ.

ಆರೋಗ್ಯ ಜ್ಯೋತಿ ಯೋಜನೆ: ಈ ಯೋಜನೆಯ ಮೂಲಕ ಹರಿಹರಪುರದಲ್ಲಿ ಸುಸಜ್ಜಿತವಾದ ಸರಸ್ವತಿ ಸೇವಾ ಆಸ್ಪತ್ರೆಯನ್ನು ಪ್ರಾರಂಭಿಸಿರುತ್ತೇವೆ. ಇಲ್ಲಿ ಉಚಿತವಾಗಿ ವೈದ್ಯಕೀಯ ಸೇವೆಯನ್ನು ನೀಡಲಾಗುತ್ತಿದೆ.

ಆನಂದ ಜ್ಯೋತಿ ಯೋಜನೆ: ಈ ಯೋಜನೆಯ ಅಡಿಯಲ್ಲಿ ಶಾಸ್ತ್ರೀಯವಾಗಿ, ಅಧಿಕಾರಯುತವಾಗಿ ಧ್ಯಾನ, ಯೋಗಗಳನ್ನು ಹೇಳಿಕೊಡುವ ಕಲಿಕಾ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಲು ಸಂಕಲ್ಪಿಸಲಾಗಿದೆ.

ಪರಮ ಪೂಜ್ಯ ಶ್ರೀ ಸ್ವಾಮೀಜಿಯವರಿಂದ ಪ್ರಾರಂಭಿಸಲ್ಪಟ್ಟ ಈ ಪುಣ್ಯ ಕಾರ್ಯಕ್ರಮಗಳನ್ನು ಬೆಂಬಲಿಸಲು ಕಾರ್ಪೋರೇಟ್ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಲೋಕ ಹಿತೈಷಿಗಳಾದ ಎಲ್ಲರೂ ಮುಂದೆ ಬರಲು ಈ ಮೂಲಕ ವಿನಂತಿ ಮಾಡಲಾಗಿದೆ.

ಪ್ರತಿಷ್ಠಾನಕ್ಕೆ ನೀಡುವ ದೇಣಿಗೆ (ಕಾಣಿಕೆಗಳನ್ನು) ಚಂದಾಗಳನ್ನು "Live Happily Foundation" ಹೆಸರಿನಲ್ಲಿ ಬೆಂಗಳೂರು ಅಥವಾ ಹರಿಹರಪುರದಲ್ಲಿ ಪಾವತಿಯಾಗುವಂತೆ ಕಳುಹಿಸಬೇಕಾಗಿ ವಿನಂತಿ.

ಚಂದಾ ಕಳುಹಿಸಬೇಕಾದ ವಿಳಾಸ: ಆಡಳಿತಾಧಿಕಾರಿ, ಲಿವ್ ಹ್ಯಾಪಿಲಿ ಫೌಂಡೇಷನ್,
ಶ್ರೀಮಠ, ಹರಿಹರಪುರ - 577 120, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ

With Pranams to Swamiji

from
Rakesh

SJR GROUP

www.sjrgroup.com

Live free.

With Best Compliments
SJR GROUP

commercial . residential . retail . hospitality



SJR Group, SJR Primus, #1, Koramangala Industrial Area, Bangalore 560095, India

CALL 4120 1111, 99807 99901, 98807 99911 or email sales@sjrgroup.com.